ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 26 ಮಂಗಳವಾರ 2025

ಸಂಪುಟ: 46 | ಸಂಚಿಕೆ: 130 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

ತಹಸೀಲ್ದಾರ್ ಕೋರ್ಟ್‌ನಲ್ಲಿ 3 ತಿಂಗಳಲ್ಲಿ ಪ್ರಕರಣ ಇತ್ಯರ್ಥವಾಗಲೇಬೇಕು

■ ಕಂದಾಯ ಸಚಿವ ಕೃಷ್ಣ ಬೈರೇಗೌಡ ಆದೇಶ ■ ಪ್ರತಿ ಬಾರಿ ನಿಮ್ಮನ್ನ ಚೆಕ್ ಮಾಡಲು ನಾನೇನು ಗುಮಾಸ್ತನಲ್ಲ! ■ ಬಡ ರೈತರು ಕಚೇರಿಗೆ ಅಲೆಯುವುದನ್ನು ತಪ್ಪಿಸದಿದ್ದರೆ ಶಿಸ್ತು ಕ್ರಮ

ಬೆಂಗಳೂರು, ಆ.25(ಕೆಎಂಶಿ)– ತಹಸೀಲ್ದಾರ್ ನ್ಯಾಯಾಲಯದಲ್ಲಿ ಯಾವ ಪ್ರಕರಣಗಳನ್ನೂ 90 ದಿನಗಳಿಗಿಂತ ಹೆಚ್ಚು ಉಳಿಸಿಕೊಳ್ಳುವಂತಿಲ್ಲ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಆದೇಶಿಸಿದ್ದಾರೆ.

ಇಲಾಖಾ ಪ್ರಗತಿ ಕುರಿತು ತಹಸೀಲ್ದಾರ್‌ಗಳ ಜೊತೆ ವಿಡಿಯೋ ಕಾನ್ಫರೆನ್ಸಿಂಗ್‌ನಲ್ಲಿ ಅವರು, ನಿಮ್ಮ ಬಳಿಯಿರುವ ಎಲ್ಲ ಪ್ರಕರಣಗಳ ವಿಲೇವಾರಿಗೆ ಆದ್ಯತೆ ಕೊಡಿ. ಇನ್ನು ಮುಂದೆ ಬರುವ ಪ್ರಕರಣಗಳನ್ನು ಮೂರು ತಿಂಗಳಲ್ಲಿ ಇತ್ಯರ್ಥಗೊಳಿಸಿ.

ನಾನು ಗುಮಾಸ್ತನಲ್ಲ: ಕೆಲವು ಜಿಲ್ಲೆಗಳಲ್ಲಿ ಉತ್ತಮ ಕೆಲಸ ನಡೆದಿದೆ, ಇನ್ನು ಕೆಲವೆಡೆ ನಾವು ಹೇಳುವುದನ್ನು ಯಾವುದೂ ಮಾಡುತ್ತಿಲ್ಲ, ಪ್ರತಿ ಬಾರಿ ಎಷ್ಟು ಪ್ರಕರಣಗಳು ಬಾಕಿ ಇವೆ ಎಂದು ಚೆಕ್ ಮಾಡಲು ನಾನೇನು ಗುಮಾಸ್ತನೇ ಎಂದು ಖಾರವಾಗಿ ನುಡಿದರು. ನಿರ್ದಿಷ್ಟ ಸಮಯದೊಳಗೆ ಪ್ರಕರಣಗಳ ವಿಲೇವಾರಿ ಮಾಡದಿದ್ದರೆ, ಇಲಾಖಾ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪೌತಿ ಖಾತೆ ತುರ್ತಾಗಿ ಆಗಬೇಕಾದ ಕೆಲಸ, ಅಧಿಕಾರಿಗಳು ಜವಾಬ್ದಾರಿ ವಹಿಸಿ ಜನರ ಮನೆ– ಮನೆಗೆ ತೆರಳಿ ಖಾತೆ ಮಾಡಿಕೊಡಬೇಕಿದೆ.

ನೀವು ಮಾಡದಿದ್ದರೆ ರೈತರಿಗೆ ಕೇಂದ್ರದ ಯೋಜನೆಗಳು ಲಭ್ಯವಾಗುವುದಿಲ್ಲ, ಇದರಿಂದ ಭಾರಿ ಅನ್ಯಾಯವಾಗುತ್ತದೆ.

ಕಂದಾಯ ಗ್ರಾಮಗಳ ಕೆಲಸ ಬಡವರ ಕೆಲಸ, ಹೀಗಾಗಿ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿದರೆ ಮಾತ್ರ ಸಾಲದು, ಅವರಿಗೆ ಇ–ಖಾತಾ ಜನರೇಟ್ ಮಾಡಿ ಇ–ಆಸ್ತಿ ಮಾಡಿಕೊಡುವ ವರೆಗೆ ನೀವುಗಳು ವಿರಮಿಸಬೇಡಿ.

ನಿರೀಕ್ಷಿತ ವೇಗವಿಲ್ಲ: ರಾಜ್ಯಾದ್ಯಂತ ಪೋಡಿ ದುರಸ್ತಿ ಅಭಿಯಾನಕ್ಕೆ ಚಾಲನೆ ನೀಡಿದ್ದರೂ ನಿರೀಕ್ಷಿತ ವೇಗ ಪಡೆದಿಲ್ಲ, ರೈತರು ತಮ್ಮ ಜಮೀನು ಪೋಡಿಯಾಗದೆ ಸರ್ಕಾರಿ ಕಚೇರಿಗಳಿಗೆ ಸುತ್ತುವುದು ಪರಿಪಾಟವಾಗಿದೆ, ಅಭಿಯಾನಕ್ಕೆ ಚಾಲನೆ ನೀಡುವ ಮೂಲಕ ನಮೂನೆ 1–5 ಹಾಗೂ 6–10 ಪ್ರಕ್ರಿಯೆ ಸರಳೀಕರಣಗೊಳಿಸಲಾಗಿತ್ತು.



ಕೃಷ್ಣಬೈರೇಗೌಡ

ನಿಯಮದಂತೆ ತಹಸೀಲ್ದಾರರು ನಿಗದಿತ ಜಮೀನಿಗೆ ಸಂಬಂಧಿಸಿದ ನಮೂನೆ ದಾಖಲೆ ಸಿದ್ಧಪಡಿಸಿ ಮುಂದಿನ ಹಂತಕ್ಕೆ ಭೂ ಮಾಪನ ಇಲಾಖೆಗೆ ಕಡತ ಕಳುಹಿಸಬೇಕು, ಬಹುತೇಕ ಜಿಲ್ಲೆಗಳಲ್ಲಿ ಈ ಕಾರ್ಯ ಸಮಾಧಾನಕರವಾಗಿಲ್ಲ.

ಪೋಡಿ ದುರಸ್ತಿ ಕೆಲಸಕ್ಕೆ ವೇಗ ನೀಡಬೇಕು, ರೈತರ ಬಳಿ ಭೂ ಮಂಜೂರಿಗೆ ಸಂಬಂಧಿಸಿ ಕನಿಷ್ಠ 3 ದಾಖಲೆ ಇದ್ದರೂ ಸಹ ಅಂತಹ ಪ್ರಕರಣಗಳನ್ನು ಪೋಡಿ ಮಾಡಿಕೊಡಬೇಕು ಎಂದು ತಾಕೀತು ಮಾಡಿದರು.

ರಾಜ್ಯದ ಎಲ್ಲಾ ತಹಸೀಲ್ದಾರ್ ಕಚೇರಿಗಳಲ್ಲಿನ ಭೂ ದಾಖಲೆಗಳನ್ನು ಅಭಿಯಾನ ಮಾದರಿಯಲ್ಲಿ ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡಲಾಗುತ್ತಿದೆ, ಈ ಕಾರ್ಯದಲ್ಲೂ ಅಸಡ್ಡೆ ತೋರುವ ತಹಶೀಲ್ದಾರರಿಗೆ ನೊಟೀಸ್ ನೀಡಲಾಗುವುದು.

ಬಡ ರೈತರ ಸಮಸ್ಯೆಗೆ ಶಾಶ್ವತ ಪರಿಹಾರ: ಭೂ ದಾಖಲೆಗಳ ಕಳವು ಮತ್ತು ತಿದ್ದುವಂತಹ ಕೃತ್ಯಗಳಿಂದ ಬಡ ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ, ಇಂತಹ ಪ್ರಸಂಗಗಳಿಗೆ ಶಾಶ್ವತ ಪರಿಹಾರ ನೀಡುವಲ್ಲಿ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಸರ್ಕಾರ ಮುಂದಾಯಿತು.

ಮೊದಲು 31 ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಯೋಜನೆ ಜಾರಿಗೊಳಿಸಿ ಇದೀಗ ಎಲ್ಲಾ ತಾಲೂಕುಗಳಲ್ಲೂ ದಾಖಲೆಗಳ ಸ್ಕ್ಯಾನ್‌ಗೆ ಒತ್ತು ನೀಡಲಾಗಿದೆ, ಇದಕ್ಕಾಗಿ ಎಲ್ಲಾ ತಹಸೀಲ್ದಾರ್ ಕಚೇರಿಗಳಿಗೆ ಅಗತ್ಯ ಸ್ಕ್ಯಾನರ್‌ಗಳ ಜೊತೆಗೆ ತಲಾ ಆರು ಕಂಪ್ಯೂಟರ್, ಆರು ಜನ ಡೇಟಾ ಎಂಟ್ರಿ ಆಪರೇಟರ್‌ಗಳಿಗೂ ಸರ್ಕಾರವೇ ವೇತನ ನೀಡುತ್ತಿದೆ. ಇಷ್ಟೆಲ್ಲಾ ಸೌಲಭ್ಯ ಒದಗಿಸಿದರೂ ಕೆಲವು ತಹಸೀಲ್ದಾರರು ಗುರಿ ಮುಟ್ಟುವಲ್ಲಿ ವಿಫಲವಾಗಿರುವುದು ಬೇಸರದ ಸಂಗತಿ.

ತಹಸೀಲ್ದಾರ್ ಕಚೇರಿಗೆ ಸ್ಕ್ಯಾನ್ ಗುರಿ: ಪ್ರತಿಯೊಂದು ತಹಸೀಲ್ದಾರ್ ಕಚೇರಿಗೆ ದಿನಕ್ಕೆ 6,000 ಪುಟಗಳನ್ನು ಸ್ಕ್ಯಾನ್ ಗುರಿ ನೀಡಲಾಗಿತ್ತು, ಹಲವು ಕಚೇರಿಗಳಲ್ಲಿ ಸರಾಸರಿ 2,000 ಪುಟಗಳನ್ನೂ ಸ್ಕ್ಯಾನ್ ಮಾಡಲಾಗುತ್ತಿಲ್ಲ, ಕೆಲವು ಅಧಿಕಾರಿಗಳು ಗುರಿ ಸಾಧಿಸಲಾಗುತ್ತಿಲ್ಲ.

ರಾಜ್ಯಾದ್ಯಂತ ತಹಸೀಲ್ದಾರ್ ಕಚೇರಿಗಳ ರೆಕಾರ್ಡ್ ರೂಮ್‌ಗಳಲ್ಲಿ ಅಂದಾಜು 100 ಕೋಟಿ ಪುಟಗಳಷ್ಟು ಭೂದಾಖಲೆಗಳಿವೆ ಎಂಬುದಾಗಿ ಅಂದಾಜು ಮಾಡಲಾಗಿದೆ, ಈ ಪೈಕಿ 37.6 ಕೋಟಿ ಪುಟ ಸ್ಕ್ಯಾನ್ ಮಾಡಲಾಗಿದೆ, ಈಗಾಗಲೇ 6.32 ಲಕ್ಷ ಪುಟ ಸ್ಕ್ಯಾನ್ ಮಾಡಿ ದಾಖಲೆಗಳ ಅಸಲಿಯತ್ತು ಪರಿಶೀಲಿಸಿ ಸಾರ್ವಜನಿಕ ಡೊಮೈನ್‌ಗೂ ಅಪ್ಲೋಡ್ ಮಾಡಲಾಗಿದ್ದು, ಉಳಿದ ಕಡತಗಳನ್ನು ವರ್ಷಾಂತ್ಯದೊಳಗೆ ಅಭಿಯಾನ ಮಾದರಿ ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮುಡಾ ಸಾವಿರಾರು ನಿವೇಶನಗಳ ಹಗರಣ

ಪ್ರಕರಣ ಮುಚ್ಚಿ ಹಾಕುವ ಯತ್ನ

● ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್. ಕೌಟಿಲ್ಯ ಸಂಶಯ ● ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯದಿದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವ ಎಚ್ಚರಿಕೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದರು.

ಮೈಸೂರು, ಆ.25(ಎಂಕೆ)– ರಾಜ್ಯವೇ ಕಂಡು ಕೇಳರಿಯದ 5000ಕ್ಕೂ ಅಧಿಕ ನಿವೇಶನಗಳ ಮುಡಾ ಹಗರಣದ(ಪ್ರಸ್ತುತ ಮೈಸೂರು ಅಭಿವೃದ್ಧಿ ಪ್ರಾಧಿಕಾರ) ತನಿಖೆ ಹಳ್ಳ ಹಿಡಿಯುತ್ತಿದ್ದು, ಇಡೀ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ. ಇದೇ ರೀತಿ ಮುಂದುವರೆದರೆ, ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲಾಗುವುದು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ ಎಚ್ಚರಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಶೇ. 50:50 ಅನುಪಾತದ ಅಕ್ರಮ ನಿವೇಶನ ಹಂಚಿಕೆ ತನಿಖೆಯ ಗತಿ ಏನಾಗಿದೆ, ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುತ್ತದೆಯೇ ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು. ನಿವೇಶನಗಳನ್ನು ಪಡೆದವರ್ಯಾರು, ಅವರ ಹಿನ್ನೆಲೆ ಏನು ಎಂಬುದರ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರಲ್ಲದೆ ■ 6ನೇ ಪುಟಕ್ಕೆ

ಸಂಪ್ರದಾಯವನ್ನು ಒಪ್ಪಿ ಬರುವುದಾದರೆ ಸ್ವಾಗತ...!

ಬಾನು ಮುಷ್ತಾಕ್ ಅವರ ಮೇಲೆ ಮೈಸೂರು ಮತ್ತು ಬಿಜೆಪಿ ಅತ್ಯಂತ ಗೌರವ ಇಟ್ಟಿದೆ. ಆದರೆ, ಬೂಕರ್ ಪ್ರಶಸ್ತಿ ಬ್ರೋಕನ್ ಮಾಡಬೇಡಿ. ಕನ್ನಡ ನಾಡಿಗೆ ಹೆಗ್ಗಳಿಕೆ ತಂದಿರುವ ಬೂಕರ್ ಪ್ರಶಸ್ತಿ ಇಬ್ಬರು ಮಹಿಳೆಯರು ಸೇರಿ ತಂದಿರುವ ಪ್ರಶಸ್ತಿಯಾಗಿದೆ. ಹಾಗಾಗಿ ಕೊಡಗಿನ ದೀಪಾ ಭಸ್ತಿಯವರು ಸೇರಿ ದಸರಾ ಉದ್ಘಾಟನೆ ಮಾಡಲಿ. ಈ ಹಿಂದೆ ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅವರು, ದಸರಾ ಉದ್ಘಾಟನೆ ಮಾಡಿದ್ದರು. ಪ್ರಗತಿಪರರೂ ಉದ್ಘಾಟನೆಗೆ ಬಂದು, ಪೂಜಾ ವಿಧಿ–ವಿಧಾನಗಳಿಗೆ ಚ್ಯುತಿ ಉಂಟುಮಾಡಿದ್ದಾರೆ. ಹಾಗಾಗಿ ಬಾನು ಮುಷ್ತಾಕ್ ಅವರು, ನಮ್ಮ ಸಂಪ್ರದಾಯವನ್ನು ಒಪ್ಪಿ, ಆ ಸಂಪ್ರದಾಯದಲ್ಲಿ ನಂಬಿಕೆ ಇದೆ ಎಂದು ಹೇಳಿಕೆ ಕೊಟ್ಟು ಬರುವುದಾದರೆ ಸ್ವಾಗತ.

- ರಘು ಆರ್.ಕೌಟಿಲ್ಯ, ರಾಜ್ಯಾಧ್ಯಕ್ಷ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ

ಸುಳ್ಳು ಜಾತಿ ಪ್ರಮಾಣಪತ್ರದಡಿ ಪಡೆದ ಸೌಲಭ್ಯ ಕೂಡಲೇ ಮರಳಿ ಪಡೆಯಿರಿ

● ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಕಟ್ಟುನಿಟ್ಟಿನ ಆದೇಶ ● ಪರಿಶಿಷ್ಟ ಜಾತಿ, ಪಂಗಡಗಳ ಜಾಗೃತ ಉಸ್ತುವಾರಿ ಸಮಿತಿ ಸಭೆ ● ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿ 60 ದಿನದಲ್ಲಿ ಚಾರ್ಜ್‌ಶೀಟ್ ಹಾಕಿ

ಬೆಂಗಳೂರು, ಆ.25(ಕೆಎಂಶಿ)–ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಸರ್ಕಾರದ ಸೌಲಭ್ಯಗಳನ್ನು ಪಡೆದಿದ್ದರೆ, ಅದನ್ನು ಮರಳಿ ಪಡೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಇಂದಿಲ್ಲಿ ಕಟ್ಟುನಿಟ್ಟಿನ ಆದೇಶ ಮಾಡಿದ್ದಾರೆ.



ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜಾಗೃತ ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ನ್ಯಾಯಾಲಯಗಳಲ್ಲಿ ಸುಳ್ಳು ಜಾತಿ ಪ್ರಮಾಣಪತ್ರಗಳ ಬಗ್ಗೆ ಬಂದಿರುವ ತೀರ್ಪುಗಳನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ವಿಳಂಬ ಮಾಡಬೇಡಿ. ಇಲಾಖೆಗಳ ನಡುವೆ ಸಮನ್ವಯತೆ ಸಾಧಿಸಿ ಕಠಿಣ ಕ್ರಮಕ್ಕೆ ಮುಂದಾಗಿ, ವಿಳಂಬ ಮಾಡುತ್ತಾ ಹೋದರೆ ಅದಕ್ಕೆ ಯಾವುದೇ ಬೆಲೆ ಇಲ್ಲ ಎಂದಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ 60 ದಿನದೊಳಗಾಗಿ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಕಳೆದ ಆರು ತಿಂಗಳಲ್ಲಿ ಶೇಕಡ 84ರಷ್ಟು ಮಾತ್ರ ನಿಗದಿತ ಅವಧಿಯೊಳಗಾಗಿ ಆರೋಪ ಪಟ್ಟಿ ಸಲ್ಲಿಸಲಾಗಿದೆ, ಇನ್ನು ಮುಂದೆ, ಶೇಕಡ 100ರಷ್ಟು ಸಾಧನೆ ಆಗಬೇಕು. ಈ ವಿಚಾರದಲ್ಲಿ ಪೊಲೀಸರು ನೆಪ ಹೇಳಬಾರದು, ನ್ಯಾಯಾಲಯದಲ್ಲಿ 56 ಪ್ರಕರಣಗಳಿಗೆ ತಡೆ ಇದೆ. ■ 6ನೇ ಪುಟಕ್ಕೆ

ಶ್ರೀಕ್ಷೇತ್ರ ಧರ್ಮಸ್ಥಳದ ಪರ ನಾವಿದ್ದೇವೆ...

▸ ಮೈಸೂರು, ಮಂಡ್ಯದಿಂದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರಿಂದ ಧರ್ಮಸ್ಥಳಕ್ಕೆ ಕಾರ್ ರ‍್ಯಾಲಿ ▸ ಧರ್ಮಸ್ಥಳದಲ್ಲಿ ಮಂಜುನಾಥಸ್ವಾಮಿ ದರ್ಶನ; ಶ್ರೀಕ್ಷೇತ್ರದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆಯವರ ಕುಟುಂಬಕ್ಕೆ ನೈತಿಕ ಬೆಂಬಲ ▸ ವೀರೇಂದ್ರ ಹೆಗಡೆಯವರನ್ನು ರಾಜ್ಯಸಭಾ ಸದಸ್ಯರಾಗಿ ನೇಮಿಸಿದ ದಿನದಿಂದಲೂ ಶ್ರೀಕ್ಷೇತ್ರದ ವಿರುದ್ಧ ಪಿತೂರಿ ನಡೆಯುತ್ತಿದೆ : ಸಾರಾ ಮಹೇಶ್ ▸ ಶ್ರೀಕ್ಷೇತ್ರ ವಿರುದ್ಧ ದೊಡ್ಡ ಮಟ್ಟದ ಷಡ್ಯಂತ್ರ ನಡೆಯುತ್ತಿರುವುದನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರೇ ಹೇಳಿದ್ದಾರೆ: ಸಿ.ಎಸ್.ಪುಟ್ಟರಾಜು

ಧರ್ಮಸ್ಥಳ, ಆ.25– (ಭೇರ್ಯ ಮಹೇಶ್) ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಖಂಡಿಸಿ 'ಧರ್ಮಸ್ಥಳದ ಪರ ನಾವಿದ್ದೇವೆ' ಘೋಷವಾಕ್ಯದೊಂದಿಗೆ ಸೋಮವಾರ ಮಾಜಿ ಸಚಿವರಾದ ಸಾ.ರಾ.ಮಹೇಶ್ ಮತ್ತು ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು, ಕಾರ್ ರ‍್ಯಾಲಿ ಮೂಲಕ ಧರ್ಮಸ್ಥಳಕ್ಕೆ ಭೇಟಿ ನೀಡಿ, ಧರ್ಮಾಧಿಕಾರಿಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಇಂದು ಮುಂಜಾನೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಸುಮಾರು 150 ಕಾರುಗಳಲ್ಲಿ ಆಗಮಿಸಿದ್ದ ಮಂಡ್ಯ ಕಾರ್ಯಕರ್ತರು, ಕೆಆರ್‌ಎಸ್ ನಾರ್ಥ್ ಬ್ಯಾಂಕ್ ಬಳಿ ಜಮಾವಣೆಗೊಂಡು ರ‍್ಯಾಲಿ ಹೊರಟರು. ಈ ರ‍್ಯಾಲಿಯು ಮೈಸೂರು ಹೊರವಲಯದ ಇಲವಾಲ ತಲುಪುವ ವೇಳೆಗಾಗಲೇ ಅಲ್ಲಿದ್ದ ■ 6ನೇ ಪುಟಕ್ಕೆ



'ಧರ್ಮಸ್ಥಳ ಪರ ಇದ್ದೇವೆ' ಎಂಬ ಘೋಷವಾಕ್ಯದೊಂದಿಗೆ ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಮಹದೇವ್, ಹೆಚ್.ಡಿ.ಕೋಟೆ ಮುಖಂಡ ಕೃಷ್ಣನಾಯಕ ನೇತೃತ್ವದ ಜೆಡಿಎಸ್ ಮುಖಂಡರು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆ ಮತ್ತು ಕುಟುಂಬದವರನ್ನು ಭೇಟಿ ಮಾಡಿ, ಫಲತಾಂಬೂಲ ನೀಡಿ, ಗೌರವ ಸಮರ್ಪಿಸಿ ನೈತಿಕ ಬೆಂಬಲ ಸೂಚಿಸಿದರು.

ರಿಯಲ್ ಎಸ್ಟೇಟ್ ಉದ್ಯಮಕ್ಕೆ ಬೂಸ್ಟ್ ನೀಡಲು ಎಂಡಿಎ ಇ–ಹರಾಜು ತಂತ್ರ!

ಇತ್ತೀಚೆಗೆ ನಡೆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಇ–ಹರಾಜಿನ ಪ್ರಕ್ರಿಯೆಯ ಹಿಂದೆ ಮೈಸೂರಿನ ರಿಯಲ್ ಎಸ್ಟೇಟ್ ಉದ್ಯಮವನ್ನು ಬೂಸ್ಟ್ ಮಾಡಿಸುವ ಪ್ರಯತ್ನ ನಡೆದಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದು ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್. ಕೌಟಿಲ್ಯ ಹೇಳಿದರು. ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಬಳಿಕ ಇ–ಹರಾಜು ನಡೆಸಿದ್ದು, ಮಾಹಿತಿ ಪ್ರಕಾರ 200 ನಿವೇಶನಗಳು ನೂರಾರು ಕೋಟಿಗೆ ಮಾರಾಟವಾಗಿವೆ. ಕೇವಲ 20X30 ಸೈಟ್‌ಗೆ 2 ಕೋಟಿ, 50X80ರ ಅಳತೆಯ ನಿವೇಶನವನ್ನು 9 ಕೋಟಿ ರೂ.ಗೆ ಬಿಡ್ ಮಾಡಲಾಗಿದೆ. ಮಾರುಕಟ್ಟೆಯ ಬೆಲೆಗಿಂತ ಹೆಚ್ಚು ಬೆಲೆಗೆ ನಿವೇಶನಗಳು ಖರೀದಿಯಾಗಿರುವುದನ್ನು ಗಮನಿಸಿದರೆ, ಇ–ಹರಾಜಿನ ಪ್ರಕ್ರಿಯೆಯ ಹಿಂದೆ ಮೈಸೂರಿನ ರಿಯಲ್ ಎಸ್ಟೇಟ್ ಉದ್ಯಮವನ್ನು ಬೂಸ್ಟ್ ಮಾಡಿಸುವ ಪ್ರಯತ್ನ ಯಾಕಿರಬಾರದೆಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದರು. ಈಗಾಗಲೇ 5000 ಎಂಡಿಎ ನಿವೇಶನಗಳನ್ನು ಲೂಟಿ ಹೊಡೆದಿದ್ದಾರೆ. ಅಲ್ಲಿ–ಇಲ್ಲಿ ಉಳಿದ ನಿವೇಶನಗಳಿಗೆ ನಡೆದಿರುವ ಹರಾಜಿನಲ್ಲಿ ಒಂದು ನಿವೇಶನಕ್ಕೆ ಮಾರುಕಟ್ಟೆ ಬೆಲೆಗಿಂತ ನಾಲ್ಕೈದು ಪಟ್ಟು ಹೆಚ್ಚು ಬೆಲೆಗೆ ಮಾರಾಟವಾಗುತ್ತಿದೆ ಎಂಬುದೇ ಆಶ್ಚರ್ಯವಾಗಿದೆ. ಕುಸಿದಿರುವ ರಿಯಲ್ ಎಸ್ಟೇಟ್ ಉದ್ಯಮವನ್ನು ಬೂಸ್ಟ್ ಮಾಡುವ ಟ್ರಿಕ್ಸ್ ಇದು.

ಮೈಸೂರು ಮಿತ್ರ

ಮಂಗಳವಾರ 26 ಆಗಸ್ಟ್ 2025

ಶಾಸಕ ಕೆ.ಹರೀಶ್‌ಗೌಡರಿಂದ ಮಣ್ಣಿನ ಗಣಪತಿ ವಿತರಣೆ



ಕುರುಬಗೇರಿಯ ಅರಳಿಕಟ್ಟೆ ಗಣಪತಿ ದೇವಸ್ಥಾನದ ಮುಂಭಾಗ ಶಾಸಕ ಕೆ.ಹರೀಶ್‌ಗೌಡ ಮಣ್ಣಿನ ಗಣಪತಿ ವಿತರಿಸಿದರು.

ಮೈಸೂರು,ಆ.25(ಜಿಎ)–ಮಣ್ಣಿನ ಗಣಪತಿ ಬಳಸುವ ಮೂಲಕ ಉತ್ತಮ ಪರಿಸರಕ್ಕೆ ಕೈಜೋಡಿಸುವಂತೆ ಶಾಸಕ ಕೆ.ಹರೀಶ್‌ಗೌಡ ಚಾಮರಾಜ ಕ್ಷೇತ್ರದಾದ್ಯಂತ 500ಕ್ಕೂ ಹೆಚ್ಚು ಮಣ್ಣಿನ ಗಣಪತಿ ವಿತರಿಸಿದರು.

ವಾರ್ಡ್ ನಂ.23ರ ಕುರುಬಗೇರಿಯ ಅರಳಿಕಟ್ಟೆ ಗಣಪತಿ ದೇವಸ್ಥಾನದ ಮುಂಭಾಗ ಮೈಸೂರು ಯುವ ಬಳಗದ ವತಿಯಿಂದ ಆಯೋಜಿಸಿದ್ದ ಮಣ್ಣಿನ ಗಣಪತಿ ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ನೂರಾರು ಮಂದಿಗೆ ಗಣಪತಿ ವಿತರಿಸಿ, ಪರಿಸರ ಸ್ನೇಹಿ ಗಣಪತಿ ಬಳಸುವಂತೆ ಕರೆ ನೀಡಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಣ್ಣಿನ ಗಣಪತಿ ನೀಡಲಾಗುತ್ತಿದ್ದು, ಕ್ಷೇತ್ರದಲ್ಲಿ 500ಕ್ಕೂ ಹೆಚ್ಚು ಗಣಪತಿ ವಿತರಿಸಲಾಗುತ್ತಿದೆ. ಪೈಪೋಟಿಗೆ ಬೇರೆ ರಾಜ್ಯಗಳಿಂದ ದೊಡ್ಡ ದೊಡ್ಡ ಗಣಪತಿಗಳನ್ನು ತರುವುದನ್ನು ಬಿಟ್ಟು ಭಕ್ತಿ–ಭಾವದಿಂದ ಮಣ್ಣಿನ ಗಣಪತಿ ಬಳಸುವ ಮೂಲಕ ಪ್ರತಿಯೊಬ್ಬರೂ ಉತ್ತಮ ಪರಿಸರಕ್ಕೆ ಕೈಜೋಡಿಸಿ ಎಂದು ಸಲಹೆ ನೀಡಿದರು.

ಡಿಜೆ ನಿಷೇಧ ವಿಚಾರವಾಗಿ ಪ್ರತಿಕ್ರಿಯಿಸಿ, ಡಿಜೆ ಬಗ್ಗೆ ಈಗಾಗಲೇ ಸದನದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚಿಸಲಾಗಿದೆ. ಡಿಜೆಯಿಂದ ಹುಡುಗರು ಹಾಡುಗಳನ್ನು ಹಾಕಿಕೊಂಡು ಗಲಾಟೆ ಮಾಡಲಾಗುತ್ತದೆ ಎಂಬ ದೃಷ್ಟಿಯಿಂದ ಈಗಾಗಲೇ ಸುಪ್ರೀಂ ಕೋರ್ಟ್ ನಿಷೇಧಿಸಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರ ಮತ್ತು ಜನರು ಪಾಲಿಸುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಂಚೇಗೌಡನಕೊಪ್ಪಲು ರವಿ, ನವೀನ್, ರಮೇಶ್ ರಾಯಪ್ಪ, ಮಹದೇವ್, ಸಂದೀಪ್, ರವಿಚಂದ್ರ, ಮಂಜುಳ, ಮಂಗಳ, ಶಾಂತಿ, ಜಗದೀಶ್, ಹೇಮಂತ್, ರಾಹುಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದಾಳಿ ವೇಳೆ ಗೋಡೆ ಹಾರಿ ಓಡಿ ಹೋದ ಟಿಎಂಸಿ ಶಾಸಕ; ಬೆನ್ನಟ್ಟಿ ಹಿಡಿದ ಇಡಿ ತಂಡ



ಪಶ್ಚಿಮ ಬಂಗಾಳ: ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇಡಿ) ಸೋಮವಾರ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶಾಸಕ ಜೀವನ್ ಕೃಷ್ಣ ಸಹ ಎಂಬಾತನನ್ನು ಬಂಧಿಸಿದೆ. ಇಡಿ ತಂಡವು ಮುರ್ಷಿದಾಬಾದ್ ಜಿಲ್ಲೆಯ ಬುರ್ವಾನ್‌ನಲ್ಲಿರುವ ಅವರ ಮನೆ ಮೇಲೆ ದಾಳಿ ಮಾಡಲು ತೆರಳಿದ್ದಾಗ ಶಾಸಕರು ಗೋಡೆ ಹಾರಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಈ ಸಮಯದಲ್ಲಿ ಇಡಿ ತಂಡವು ಹತ್ತಿರದ ಹೊಲದಿಂದ ಓಡಿಹೋಗಿ ಅವರನ್ನು ಹಿಡಿದಿದೆ.

ಇಡಿ ಅಧಿಕಾರಿಗಳ ಪ್ರಕಾರ ಕೃಷ್ಣ ಸಹ ಓಡಿಹೋಗುತ್ತಿದ್ದಾಗ ಹೊಲದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಆ ಸಮಯದಲ್ಲಿ ಅವರ ಬಟ್ಟೆ ಮತ್ತು ದೇಹದ ಮೇಲೆ ಮಣ್ಣು ಇತ್ತು. ದಾಳಿಯ ಸಮಯದಲ್ಲಿ ಶಾಸಕರು ಸಾಕ್ಷ್ಯವನ್ನು ನಾಶಮಾಡಲು ಪ್ರಯತ್ನಿಸಿದರು. ಅವರ ಮೊಬೈಲ್ ಫೋನ್ ಅನ್ನು ಮನೆಯ ಹತ್ತಿರದ ಬಾವಿಗೆ ಎಸೆದಿದ್ದರು. ಆದಾಗ್ಯೂ, ಇಡಿ ತಂಡವು ಅವರ ಎರಡೂ ಮೊಬೈಲ್ ಫೋನ್‌ಗಳನ್ನು ಬಾವಿಯಿಂದ ವಶಪಡಿಸಿಕೊಂಡಿದೆ. ಈಗ ಅವುಗಳನ್ನು ವಿಧಿವಿಜ್ಞಾನ ತನಿಖೆಗೆ ಕಳುಹಿಸಲಾಗಿದೆ ಎಂದು ಹೇಳಿದರು.

ಇಡಿ ತಂಡವು ಪ್ರಸ್ತುತ ಮುರ್ಷಿದಾಬಾದ್‌ನಲ್ಲಿರುವ ಶಾಸಕ ಕೃಷ್ಣ ಸಹಾ ಅವರ ನಿವಾಸದ ಮೇಲೆ, ರಘುನಾಥಗಂಜ್‌ನಲ್ಲಿರುವ ಅವರ ಅತ್ತೆಯ ಮನೆ ಮತ್ತು ಬಿರ್ಭೂಮ್ ಜಿಲ್ಲೆಯ ಅವರ ಆಪ್ತ ಸಹಾಯಕನ ಮನೆಯ ಮೇಲೆ ದಾಳಿ ನಡೆಸುತ್ತಿದೆ. ಶಾಸಕರನ್ನು ನಿರಂತರವಾಗಿ ವಿಚಾರಣೆ ನಡೆಸಲಾಗುತ್ತಿದೆ. ಅವರನ್ನು ಕೋಲ್ಕತ್ತಾಗೆ ಕರೆದೊಯ್ಯಲಾಗುತ್ತಿದೆ. ಅಲ್ಲಿ ಅವರನ್ನು ಇಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಸಂಸ್ಥೆ ತಿಳಿಸಿದೆ.

ನಿಧನ

ಪೂಂಜಂಡ ನೀಲಮ್ಮ



ಮೈಸೂರು, ಆ. 25–ಮೈಸೂರಿನ ಶ್ರೀರಾಂಪುರ 2ನೇ ಹಂತದ ನಿವಾಸಿ ಪೂಂಜಂಡ ಎ. ಅರ್ಜುನ್ ಅವರ ಪತ್ನಿ ಪೂಂಜಂಡ ನೀಲಮ್ಮ (ರಾಣಿ ಶಾಂತೆಯಂಡ) ಭಾನುವಾರ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಪುತ್ರರಾದ ಪೂಂಜಂಡ ಎ.ಗಣಪತಿ (ಮೈಸೂರು ಕೊಡವ ಸಮಾಜದ ಅಧ್ಯಕ್ಷರು), ಗಿರೀಶ್, ಪುತ್ರಿ ನೆಲ್ಲೀರ ಕವಿತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಆರ್.ಕೃಷ್ಣಕುಮಾರ್



ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಕುವೆಂಪುನಗರ ಶಾಖೆ ನಿವೃತ್ತ ಅಧಿಕಾರಿ ಮತ್ತು ವಿವೇಕಾನಂದನಗರದ ಎಸ್‌ಬಿಎಂ ಬಡಾವಣೆ ನಿವಾಸಿ ಹೆಚ್.ಆರ್.ಕೃಷ್ಣಕುಮಾರ್ (67) ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರು ಪತ್ನಿ ಮಾಲಾ, ಪುತ್ರರಾದ ಕಾರ್ತಿಕ್, ಕೌಶಿಕ್ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕುವೆಂಪುನಗರದ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಉಂಡವಾಡಿ ನಾಗಮ್ಮ



ಮೈಸೂರು ತಾಲೂಕಿನ ಇಲವಾಲ ಹೋಬಳಿ ಉಂಡವಾಡಿ ಗ್ರಾಮದ ನಾರಾಯಣಸ್ವಾಮಿ ಪತ್ನಿ ನಾಗಮ್ಮ(74) ಭಾನುವಾರ ರಾತ್ರಿ ನಿಧನರಾದರು.

ಮೃತರು ಪುತ್ರ ರಮೇಶ್, ಮುಡಾ ಗುತ್ತಿಗೆದಾರ ಉಮೇಶ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಉಂಡವಾಡಿಯ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಎನ್.ರಾಮಣ್ಣ



ಮೈಸೂರು: ಮೈಸೂರು ಕೆ.ಆರ್. ಮೊಹಲ್ಲಾ ನಿವಾಸಿ ಎನ್. ರಾಮಣ್ಣ ಅವರು ಸೋಮವಾರ ನಿಧನರಾದರು.

ಮೃತರಿಗೆ 95 ವರ್ಷ ವಯಸ್ಸಾಗಿತ್ತು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ನಾಗರತ್ನ ಸಿಂಗ್ ನಿಧನ



ಮೈಸೂರು, ಆ.25–ಮೈಸೂರು ಸುಭಾಷ್ ನಗರ ನಿವಾಸಿ, ನಿವೃತ್ತ ಕೃಷಿ ಅಧಿಕಾರಿ ಬಿ.ನಾಗರತ್ನ ಸಿಂಗ್(90) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ(ಆ.26) ಎನ್.ಆರ್.ಮೊಹಲ್ಲಾ ರುದ್ರಭೂಮಿಯಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಚೇತಕ್ ವಾಹಿನಿ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ರಜಪೂತ ಸಮುದಾಯ ಸಂಘಟನೆಗಳಲ್ಲಿ ತೊಡಗಿಸಿಕೊಂಡು ಸಮಾಜ ಸೇವೆ ಸಲ್ಲಿಸಿದ್ದಾರೆ.

ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲ ನಿವಾರಿಸುವಂತೆ ಆಗ್ರಹಿಸಿ ಪ್ರತಿಭಟನೆ



ಶೈಕ್ಷಣಿಕ ಗೊಂದಲ ಪರಿಹರಿಸುವಂತೆ ಅಗ್ರಹಿಸಿ ಎಐಡಿಎಸ್‌ಓ ವತಿಯಿಂದ ಹಳೆ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.25(ಜಿಎ)–ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲ ಪರಿಹರಿಸುವಂತೆ ಅಗ್ರಹಿಸಿ ಎಐಡಿಎಸ್‌ಓ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯಾದ್ಯಂತ ಪದವಿ ತರಗತಿಗಳು ಪ್ರಾರಂಭವಾಗಿ ತಿಂಗಳು ಕಳೆದರೂ ಇಲ್ಲಿವರೆಗೂ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಿಲ್ಲ. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿದ್ದು ತರಗತಿಗಳು ಸರಿಯಾಗಿ ನಡೆಯದೆ ಇರುವುದರಿಂದ ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ. ಇದು ಅವರ ಶೈಕ್ಷಣಿಕ ಭವಿಷ್ಯವನ್ನು ಅತಂತ್ರವನ್ನಾಗಿಸಿದೆ. ಮುಂದಿನ ತಿಂಗಳು ಪದವಿ ವಿದ್ಯಾರ್ಥಿಗಳ ಮೊದಲ ಆಂತರಿಕ ಪರೀಕ್ಷೆಗಳು ನಡೆಯಬೇಕಿದ್ದು ಪಾಠಗಳು ಇನ್ನೂ ಆರಂಭವಾಗಿಲ್ಲ. ಯುಜಿಸಿಯ ಹೊಸ ನಿರ್ದೇಶನ ಹಾಗೂ ಕೋರ್ಟ್‌ನಲ್ಲಿ ನಡೆಯುತ್ತಿರುವ ಮೊಕದ್ದಮೆಯಿಂದ ಅತಿಥಿ ಉಪನ್ಯಾಸಕರ ನೇಮಕಾತಿ ನನೆಗುದಿಗೆ ಬಿದ್ದಿದೆ ಎಂದು ಕಿಡಿಕಾರಿದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಹೇಮಾ ಮಾತನಾಡಿ, ಶೈಕ್ಷಣಿಕ ವಿಷಯಗಳಲ್ಲಿ ರಾಜ್ಯ ಸರ್ಕಾರ ಕೇಂದ್ರದ ನಿರ್ಧಾರಗಳನ್ನು ಪಾಲಿಸುವುದು ಕಡ್ಡಾಯವಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವಿದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಪೂರಕವಾದ ಸ್ಪಷ್ಟ ನಿಲುವು ತಾಳಬೇಕು. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಶೈಕ್ಷಣಿಕ ಚಟುವಟಿಕೆಗಳು ಸರಾಗವಾಗಿ ನಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಂಡು ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲವನ್ನು ಕೂಡಲೇ ಪರಿಹರಿಸಬೇಕೆಂದು ಆಗ್ರಹಿಸಿದರು. ಈ ವೇಳೆ ಮನವಿ ಪತ್ರವನ್ನು ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಿಗೆ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘಟನೆಯ ಬನ್ನೂರು ನಾರಾಯಣಸ್ವಾಮಿ, ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ನಿತಿನ್, ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಚಂದ್ರಿಕಾ, ಅಭಿಷೇಕ್, ಅಂಜಲಿ, ದಿಶಾ, ನಂದೀಶ್ ಪಾಲ್ಗೊಂಡಿದ್ದರು.

ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ಬಹುಮಾನ



ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ವಿದ್ಯಾವರ್ಧಕ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ನಾದಶ್ರೀ ಆರ್.ಭಟ್ ಪ್ರಥಮ ಬಹುಮಾನ ಪಡೆದರು.

ಮೈಸೂರು,ಆ.25–ಮೈಸೂರಿನ ಇಸ್ಕಾನ್‌ನವರು ಹೆರಿಟೇಜ್ ಫೆಸ್ಟ್ ಅಡಿಯಲ್ಲಿ ಏರ್ಪಡಿಸಿದ್ದ ಅಂತರ ಪ್ರೌಢಶಾಲಾ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ವಿದ್ಯಾವರ್ಧಕ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ನಾದಶ್ರೀ ಆರ್.ಭಟ್ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.

ಇಸ್ಕಾನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರುಣ್ಯ ಪ್ರಭು ಮಹಾರಾಜ್ ಪ್ರಶಸ್ತಿ ಪ್ರದಾನ ಮಾಡಿದರು. ನಾದಶ್ರೀ ಸದ್ವಿದ್ಯಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ರಾಮಚಂದ್ರ ಭಟ್ ಮತ್ತು ಲೇಖಕಿ ಎನ್.ಆರ್.ರೂಪಶ್ರೀ ಅವರ ಮಗಳು.

ಅಲಯನ್ಸ್ ಕ್ಲಬ್ ಆಫ್ ಮೈಸೂರು ಜೆ.ಪಿ.ನಗರ; ಪದಗ್ರಹಣ ಸಮಾರಂಭ



ಅಲಯನ್ಸ್ ಕ್ಲಬ್ ಜೆಪಿನಗರ ಸಂಸ್ಥೆ ಪದಗ್ರಹಣ ಸಮಾರಂಭ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ಮೈಸೂರು,ಆ.25–ಅಲಯನ್ಸ್ ಕ್ಲಬ್ ಆಫ್ ಮೈಸೂರು ಜೆಪಿನಗರ ಸಂಸ್ಥೆ ಪದಗ್ರಹಣ ಸಮಾರಂಭ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ಅಲೈ ಜಯರಾಂ ನೇತೃತ್ವದ ತಂಡ ಪದವಿ ಸ್ವೀಕರಿಸಿತು. ಅಲೈ ರಾಜೇಶ್ ಕಾರ್ಯದರ್ಶಿಯಾಗಿ ಹಾಗೂ ಅಲೈ ಷಣ್ಮುಗ ಖಜಾಂಚಿಯಾಗಿ ಪದವಿ ಸ್ವೀಕರಿಸಿದರು. ಅಂತಾರಾಷ್ಟ್ರೀಯ ನಿರ್ದೇಶಕ ಅಲೈ ನಾಗರಾಜ್ ವಿ ಬೈರಿ ಪದವಿ ಸ್ವೀಕಾರ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಹೊಸ ಸದಸ್ಯರಿಗೆ ಪ್ರತಿಜ್ಞಾ ವಿಧಿಯನ್ನು ಮಾಜಿ ಜಿಲ್ಲಾ ರಾಜ್ಯಪಾಲ ಬಾಲಕೃಷ್ಣ ರಾಜು ಬೋಧಿಸಿದರು. ರಾಜ್ಯಪಾಲರಾದ ಅಲೈ ವಿ ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಿ ಕ್ಲಬ್ಬಿನ ಚಾರ್ಟರ್ ಅನ್ನು ನೀಡಿದರು.

ನೂತನ ತಂಡವನ್ನು ಉಪರಾಜ್ಯಪಾಲರಾದ ಅಲೈ ಮಹಾಬಲೇಶ್ವರ ಬೈರಿ, ಅಲೈ ಸಂತೋಷಕುಮಾರ್, ಅಲೈ ಗಂಗಾಧರಪ್ಪ ಅಭಿನಂದಿಸಿದರು. ಜಿಲ್ಲಾ ಕ್ಯಾಬಿನೆಟ್ ಕಾರ್ಯದರ್ಶಿ ಅಲೈ ಎನ್ ಬೆಟ್ಟೇಗೌಡ, ಜಿಲ್ಲಾ ಕ್ಯಾಬಿನೆಟ್ ಖಜಾಂಚಿ ಅಲೈ ಕೃಷ್ಣೋಜಿರಾವ್ ಮತ್ತು ಪ್ರಾಂತೀಯ ಅಧ್ಯಕ್ಷರಾದ ಅಲೈ ಶೋಭಾ ಸಿರಿ ಬಾಲು, ಇಂದಿರಾ ವೆಂಕಟೇಶ್, ಕ್ಲಬ್ಬಿನ ಸ್ಪೋನ್ಸರ್‌ಗಳಾದ ಮೋಹನ್‌ಕುಮಾರ್ ಮತ್ತು ಕುಮಾರ್ ಉಪಸ್ಥಿತರಿದ್ದರು.

ಉದಯಗಿರಿ ಠಾಣೆಗೆ ಸಿಸಿ ಕ್ಯಾಮೆರಾ ಕೊಡುಗೆ



ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ರೇಹಾನ್ ಬೇಗ್ ಅವರು ಉದಯಗಿರಿ ಪೊಲೀಸ್ ಠಾಣೆಗೆ 10 ಸಿಸಿಟಿವಿ ಕ್ಯಾಮೆರಾಗಳನ್ನು ದೇವರಾಜ ಉಪವಿಭಾಗದ ಎಸಿಪಿ ಕೆ.ರಾಜೇಂದ್ರ ಮೂಲಕ ಹಸ್ತಾಂತರಿಸಿದರು. ಈ ವೇಳೆ ಉದಯಗಿರಿ ಇನ್ಸ್‌ಪೆಕ್ಟರ್ ಕೆ.ಎನ್.ಸುಧಾಕರ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್, ಕೆಪಿಸಿಸಿ ಕೋ–ಆರ್ಡಿನೇಟರ್ ಶೌಕತ್ ಅಲಿಖಾನ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಸೈಯದ್ ಫಾರೂಖ್, ಲೇಬರ್ ಸೆಲ್ ಅಧ್ಯಕ್ಷ ಮೊಹಮ್ಮದ್ ಶಿಫ್ಟನ್, ಯುವ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಪದ್ಮನಾಭ ಗುಂಡ, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು. ಮೊನ್ನೆಯಷ್ಟೇ ರೇಹಾನ್ ಬೇಗ್, ಎನ್‌ಆರ್ ಪೊಲೀಸ್ ಠಾಣೆಗೆ 10 ಸಿಸಿಟಿವಿ ಕ್ಯಾಮೆರಾಗಳನ್ನು ಕೊಡುಗೆಯಾಗಿ ನೀಡಿದ್ದರು.

ವಿಜಯಕುಮಾರ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎನ್.ಎಸ್.ಹರಿನಾರಾಯಣ ಅವರ ಮಾರ್ಗದರ್ಶನದಲ್ಲಿ ಎಸ್. ವಿಜಯಕುಮಾರ್ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಗೆ ಕ್ರೀಡಾ ಸಮಗ್ರ ಪ್ರಶಸ್ತಿ



ಜೆಎಸ್‌ಎಸ್‌ನ ಹಿರಿಯ ಪ್ರಾಥಮಿಕ ಶಾಲೆಗೆ ಕ್ರೀಡಾ ಸಮಗ್ರ ಪ್ರಶಸ್ತಿ ದೊರೆತಿದೆ.

ಮೈಸೂರು,ಆ.25–ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನಂಜನಗೂಡು ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಲಂಬೂರು ಸಹಯೋಗದಲ್ಲಿ ಸುತ್ತೂರಿನಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳು ಆಟ–ಮೇಲಾಟಗಳಲ್ಲಿ ಭಾಗವಹಿಸಿ 187 ಅಂಕಗಳಿಸುವುದರೊಂದಿಗೆ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

ಬಾಲಕರ ವಿಭಾಗದ ಖೋಖೋ, ಕಬಡ್ಡಿ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್, ಥ್ರೋಬಾಲ್ ಪಂದ್ಯಾವಳಿಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಬಾಲಕಿಯರ ವಿಭಾಗದ ಕಬ್ಬಡಿ, ಖೋಖೋ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್, ಥ್ರೋಬಾಲ್ ಪಂದ್ಯಾವಳಿಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ಬೀಟಾರಾಜ್–100 ಮೀ ಓಟ, ಗುಂಡು ಎಸೆತದಲ್ಲಿ ಪ್ರಥಮ 400 ಮೀ ಓಟದಲ್ಲಿ ದ್ವಿತೀಯ ಸ್ಥಾನ ಗಳಿಸುವ ಮೂಲಕ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾನೆ.


ಅಬಾನಾ ಲಿಂಗ್ಡೋ ಗುಂಡು ಎಸೆತ, ತಟ್ಟೆ ಎಸೆತದಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾಳೆ.

ಬಾಲಕರ ವಿಭಾಗದಲ್ಲಿ ಸಂಗಮೇಶ್–100 ಮೀಟರ್ ಓಟದಲ್ಲಿ ತೃತೀಯ, 200 ಮೀಟರ್ ಓಟದಲ್ಲಿ ಧನಂದಿತ್–ದ್ವಿತೀಯ ಸ್ಥಾನ, 400 ಮೀಟರ್ ಓಟದಲ್ಲಿ ಮಹಾಂತೇಶ್ ನಾಯಕ ಪ್ರಥಮ ಸ್ಥಾನ, 600 ಮೀಟರ್ ಓಟದಲ್ಲಿ ಗುರುಪ್ರಸಾದ್ ಪ್ರಥಮ, ಬಸವರಾಜ್ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಗುಂಡು ಎಸೆತದಲ್ಲಿ ಹರ್ಷಿತ್ ಕೆ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಮೋಹಿತ್ ಕುಮಾರ್ ಮೆಹತೊ ತಟ್ಟೆ ಎಸೆತ, ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. 4X100 ಮೀ ರಿಲೇ ಬೀಟಾರಾಜ್ ಮತ್ತು ತಂಡ ಪ್ರಥಮ ಹಾಗೂ ಮಹಾಂತೇಶ್ ಮತ್ತು ತಂಡ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ನಿಂಗ್‌ಸೀತ್ಸೈ 100 ಮೀಟರ್ ಓಟದಲ್ಲಿ ದ್ವಿತೀಯ, ಮನತ್ ತೃತೀಯ ಸ್ಥಾನ ಪಡೆದರೆ, 200 ಮೀಟರ್ ಓಟದಲ್ಲಿ ಉಷಾ ತೃತೀಯ ಸ್ಥಾನ ಪಡೆದರೆ, 600 ಮೀ ಓಟದಲ್ಲಿ ಅಮೃತಾ ದ್ವಿತೀಯ ಸ್ಥಾನ, ಸರ್ಜಿನ್ ಸುಖ್ ತೃತೀಯ ಸ್ಥಾನ ಪಡೆದಿದ್ದಾರೆ. ಮೇಘನ ಗುಂಡು ಎಸೆತ ಮತ್ತು ತಟ್ಟೆ ಎಸೆತ ಸ್ಪರ್ಧೆಯಲ್ಲಿ ತೃತೀಯ ಪಡೆದಿದ್ದಾರೆ. ಲೈಸಾರಾಮ್ ಜೀನಲಕ್ಷ್ಮಿದೇವಿ – ಎತ್ತರಜಿಗಿತ ಪ್ರಥಮ ಸ್ಥಾನ ಗಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.08.2025 ಮಂಗಳವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಮಧು ಮೇಹದ ಗಾಯಗಳಿಗೆ ಚಿಕಿತ್ಸೆ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃಧ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.
- **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಉದ್ಘಾಟನೆ : ನಿವೃತ್ತ ಸಂಸ್ಕೃತ ಶಿಕ್ಷಕ ಕೊಕ್ಕಡ ವೆಂಕಟರಮಣ ಭಟ್, ಅಧ್ಯಕ್ಷತೆ : ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರದ ಅಧ್ಯಕ್ಷ ಎಂ.ಪಿ. ಪ್ರಭುಸ್ವಾಮಿ, ಮುಖ್ಯ ಅತಿಥಿಗಳು : ರಾಜ್ಯ ಮುಕ್ತಕ ಸಾಹಿತ್ಯ ಪರಿಷತ್ ಅಧ್ಯಕ್ಷ ಮುತ್ತುಸ್ವಾಮಿ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಪ್ರೊ. ಸಿ. ನಾಗಣ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಟಿ.ವಿ. ವಿದ್ಯಾಶಂಕರ್, 9.00 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಜಿ. ಶ್ರೀಧರ ಮತ್ತು ಸಂಗಡಿಗರಿಂದ ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ– ಗೌರಿಹಬ್ಬ ಕುರಿತ ಕಾರ್ಯಕ್ರಮ ವೈವಿಧ್ಯ ಭಾಗವಹಿಸುತ್ತಾರೆ–ಮೈಸೂರಿನ ತ್ರಿಮೂರ್ತಿ ನಗರದ ಲಲಿತಾ ಮಹಿಳಾ ಮಂಡಳಿ ಸದಸ್ಯೆಯರು, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಆರ್. ಮೋಹನ್– ಕ್ಲ್ಯಾರಿಯೋನೆಟ್ ವಾದನ, 4.00 ಕಥಾಕಾಲಕ್ಷೇಪ–ಚೌತಿ ಚಂದ್ರ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಅಲಂಕಾರಿಕ ಮೀನು ಕೃಷಿ ಕುರಿತು ಹುಣಸೂರು ತಾಲೂಕು ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಮಿಥುನ್ ಬಿ.ಪಿ. ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅರಣ್ಯ ಕುಮಾರ್ ಮುನ್ಷೇಲಿ– ಸರೋದ್ ವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಚಿಟ್ಟಿಬಾಬು–ವೀಣಾ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ ಮಂಗಳವಾರ 26 ಆಗಸ್ಟ್ 2025

ಧರ್ಮಸ್ಥಳ ಪ್ರಕರಣದ ಹಿಂದೆ ಮತಾಂತರ ಜಿಹಾದ್ ಇದ್ದಂತಿದೆ

ವಿಪಕ್ಷ ನಾಯಕ ಆರ್.ಅಶೋಕ್ ಆರೋಪ



ಹೊಸಪೇಟೆ, ಆ.25– ಧರ್ಮಸ್ಥಳ ವಿಚಾರದಲ್ಲಿ ಲವ್ ಜಿಹಾದ್ ಮಾದರಿಯ ಮತಾಂತರ ಜಿಹಾದ್ ಇದ್ದಂತಿದೆ. ಹಿಂದೂ ದೇವಾಲಯಗಳನ್ನು ಮುಜರಾಯಿ ಇಲಾಖೆಗೆ ಸೇರಿಸಲು ಹೊರಟಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸೋಮವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಿಂದೂ ದೇವಾಲಯಗಳೇ ಇವರ ಗುರಿ. ಚರ್ಚ್, ಮಸೀದಿ ಕಡೆ ಇವರು ಹೋಗುವುದಿಲ್ಲ. ಇದರ ಹಿಂದೆ ದೊಡ್ಡ ಪಡೆಯೇ ಇದೆ. ಮಾಸ್ಕ್‌ಮ್ಯಾನ್, ಸುಜಾತಾ ಭಟ್ ಇವರೆಲ್ಲ ಇದರ ಪಾತ್ರಧಾರಿಗಳು ಎಂದರು.

ಮಾಸ್ಕ್ ಹಾಕಿಸಿದ್ದೇ ಸರ್ಕಾರ: ದೂರು, ಸಾಕ್ಷಿದಾರನಿಗೆ ಮಾಸ್ಕ್ ಹಾಕಿಸಿದ್ದೇ ಸರ್ಕಾರ. ಸಿಎಂ ಸಿದ್ದರಾಮಯ್ಯ ಅವರಿಗೆ ನಿಕಟರಾದ ಪ್ರಗತಿಪರರು ಇದರ ಹಿಂದೆ ಇದ್ದಾರೆ. ಬುರುಡೆ ಕಥೆ ಹೊರ ಬಂದ ಕೂಡಲೇ ಪ್ರಗತಿಪರರು ಕಾಣೆಯಾಗಿದ್ದಾರೆ ಎಂದು ಅಶೋಕ ಲೇವಡಿ ಮಾಡಿದರು.

ಎಸ್‌ಐಟಿಗೆ ಸರ್ಕಾರ ಎರಡ್ಮೂರು ಕೋಟಿ ಖರ್ಚು ಮಾಡಿದೆ. ಯಾವನೋ ಒಬ್ಬ ದಾರಿಯಲ್ಲಿ ಹೋಗುವವನ ಮಾತು ಕೇಳಿ ಎಸ್‌ಐಟಿ ರಚನೆ ಮಾಡಿದ್ದಾರೆ. ಮಾಸ್ಕ್‌ಮ್ಯಾನ್ ಮುಸುಕು ತೆಗೆಯಿರಿ ಎಂದು ನಾನು ಎರಡು ಬಾರಿ ಹೇಳಿದ್ದೆ. ಅಂದೇ ಅವನ ಮುಸುಕು ತೆಗೆಸಿದ್ದರೆ ಅವನು ಎಂತಹ ಕಳ್ಳ ಎಂಬುದು ಗೊತ್ತಾಗುತ್ತಿತ್ತು. ಅವನೊಬ್ಬ ಮತಾಂತರಿ ಎಂದು ಗೊತ್ತಾಗಿದೆ. ಇದರ ಹಿಂದೆ ದೊಡ್ಡ ಗ್ಯಾಂಗ್ ಇದೆ ಎಂದು ಅವರು ಹೇಳಿದರು.

ಭಾರತ ಪಾಕಿಸ್ತಾನ ಆಗ್ತಿತ್ತು: ಆರ್‌ಎಸ್‌ಎಸ್ ಇರಲಿಲ್ಲವಾಗಿದ್ದರೆ ಭಾರತ ಪಾಕಿಸ್ತಾನ ಆಗಿರುತ್ತಿತ್ತು. ಈಗಾಗಲೇ ಎರಡು ಪಾಕಿಸ್ತಾನಗಳು ಸೃಷ್ಟಿಯಾಗಿವೆ. ಆರ್‌ಎಸ್‌ಎಸ್‌ಗೆ ದೇಶಭಕ್ತಿ ಇದೆ. ಹೀಗಾಗಿ ಭಾರತವು ಉಳಿದುಕೊಂಡಿದೆ. ಡಿ.ಕೆ.ಶಿವಕುಮಾರ್ ಅವರಿಗೆ ದೇಶ ಭಕ್ತಿ ಇರುವುದರಿಂದಲೇ ಆರ್‌ಎಸ್‌ಎಸ್ ಗೀತೆಯನ್ನು ಅವರು ಹಾಡಿದ್ದಾರೆ ಎಂದರು

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವವರ ಬಂಧನಕ್ಕೆ ಆಗ್ರಹ

ಮೈಸೂರಿನಿಂದ ಧರ್ಮಸ್ಥಳದವರೆಗೆ ಜೆಡಿಎಸ್ ಕಾರ್ಯಕರ್ತರಿಂದ ಕಾರ್ ರ‍್ಯಾಲಿ

ಮೈಸೂರು, ಆ.25(ಬಿಎಲ್‌ಯು)– ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವವರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿ ಪಾಂಡವಪುರ ಹಾಗೂ ಮೈಸೂರಿನ ಜೆಡಿಎಸ್ ಕಾರ್ಯಕರ್ತರು ಸೋಮವಾರ ಧರ್ಮಸ್ಥಳದವರೆಗೆ ಕಾರ್ ರ‍್ಯಾಲಿ ನಡೆಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದ ಜೆಡಿಎಸ್ ಕಾರ್ಯಕರ್ತರು ಕಾರ್‌ಗಳಲ್ಲಿ ಇಂದು ಮುಂಜಾನೆ ಪಾಂಡವಪುರದಿಂದ ಹೊರಟು ಮೈಸೂರಿನ ಇಲವಾಲಕ್ಕೆ ಆಗಮಿಸಿದರು.

ಇದೇ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದ ಮೈಸೂರಿನ ಜೆಡಿಎಸ್ ಕಾರ್ಯಕರ್ತರು ದಟ್ಟಗಳ್ಳಿಯಿಂದ ಹೊರಟು ಇಲವಾಲದಲ್ಲಿದ್ದ ಪಾಂಡವಪುರದ ಜೆಡಿಎಸ್ ಕಾರ್ಯಕರ್ತರನ್ನು ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಾ.ರಾ.ಮಹೇಶ್ ಅವರು, ಧರ್ಮಸ್ಥಳದ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಷಡ್ಯಂತ್ರ ರೂಪಿಸಲಾಗಿದೆ. ಹೀಗೆ ಷಡ್ಯಂತ್ರ ರೂಪಿಸಿದವರು ಒಬ್ಬೊಬ್ಬರಾಗಿ ಈಗ ಎಸ್‌ಐಟಿ ತಂಡಕ್ಕೆ ಸಿಕ್ಕಿ ಬೀಳುತ್ತಿದ್ದಾರೆ. ಈ ಕುತಂತ್ರದ ಹಿಂದೆ ಇನ್ನು ಹಲವರಿದ್ದು ಕೂಡಲೇ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಧರ್ಮಸ್ಥಳದ ಬಗ್ಗೆ ಜನರಲ್ಲಿ ದೈವ ಭಾವನೆ ಇದೆ. ಇಂತಹ ಪವಿತ್ರ ಕ್ಷೇತ್ರದ ಬಗ್ಗೆ ವ್ಯವಸ್ಥಿತವಾಗಿ ಅಪಪ್ರಚಾರ ಮಾಡಲಾಗುತ್ತಿದೆ. ಅಲ್ಲದೆ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ. ಈ ಹಿನ್ನೆಲೆ ಷಡ್ಯಂತ್ರದ ಹಿಂದಿರುವವರನ್ನು ಕೂಡಲೇ ಬಂಧಿಸಬೇಕು. ಮುಂದೆ ಇಂತಹ ಘಟನೆ ಮರುಕಳುಹಿಸದಂತೆ ಎಚ್ಚರಿಕೆಯ ಸಂದೇಶ ರವಾನಿಸಬೇಕು ಎಂದು ಒತ್ತಾಯಿಸಿದರು.



ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಖಂಡಿಸಿ ನೂರಾರು ಜೆಡಿಎಸ್ ಕಾರ್ಯಕರ್ತರು ಮಾಜಿ ಸಚಿವ ಸಾ.ರಾ. ಮಹೇಶ್ ನೇತೃತ್ವದಲ್ಲಿ ಮೈಸೂರಿನಿಂದ ಧರ್ಮಸ್ಥಳದವರೆಗೆ ಕಾರ್ ರ‍್ಯಾಲಿಗೆ ಸಜ್ಜಾಗಿರುವುದು.

ಕಾರ್‌ಗಳಲ್ಲಿ ಇಲವಾಲದಿಂದ ಹೊರಟ ಜೆಡಿಎಸ್ ಕಾರ್ಯಕರ್ತರು ಕೆ.ಆರ್.ನಗರ, ಹರದನಹಳ್ಳಿ, ಬಿಸಿಲೆ ಘಾಟ್ ಮೂಲಕ ಮಧ್ಯಾಹ್ನ 12.30 ಗಂಟೆಗೆ ಧರ್ಮಸ್ಥಳ ತಲುಪಿದರು. ಕೇಸರಿ ಶಾಲುಗಳನ್ನು ಧರಿಸಿದ್ದ ಜೆಡಿಎಸ್ ಕಾರ್ಯಕರ್ತರು, ಕಾರುಗಳಲ್ಲಿ ಕೇಸರಿ ಬಾವುಟ ಹಾರಿಸಿದ್ದರು.

ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥನ ದರ್ಶನ ಪಡೆದ ಕಾರ್ಯಕರ್ತರು, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವವರಿಗೆ ತಕ್ಕ ಶಿಕ್ಷೆ ನೀಡಬೇಕೆಂದು ದೇವರನ್ನು ಬೇಡಿದರು. ತರುವಾಯ ಮಾಜಿ ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ಕೆ.ಮಹದೇವ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ ಅವರು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ದ್ವಾರಕೀಶ್, ಮುಖಂಡ ಹೆಚ್.ಡಿ.ಕೋಟೆ ಕೃಷ್ಣನಾಯಕ್, ರಾಮು ಇನ್ನಿತರರು ರ‍್ಯಾಲಿಯಲ್ಲಿ ಭಾಗವಹಿಸಿದ್ದರು.

ತರುವಾಯ ಧರ್ಮಸ್ಥಳದಲ್ಲಿ ಪ್ರಸಾದ ಸ್ವೀಕರಿಸಿದ ಜೆಡಿಎಸ್ ಕಾರ್ಯಕರ್ತರು ಕುಕ್ಕೆ ಸುಬ್ರಹ್ಮಣ್ಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದ ನಂತರ ರಾತ್ರಿ ಮೈಸೂರಿಗೆ ವಾಪಸ್ಸಾದರು.





ಮೈಸೂರು ಹಾಗೂ ಮಂಡ್ಯದಿಂದ ಧರ್ಮಸ್ಥಳಕ್ಕೆ ಸುಮಾರು 500 ಕಾರುಗಳಲ್ಲಿ ರ‍್ಯಾಲಿ ತೆರಳಿದ್ದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಧರ್ಮಸ್ಥಳದಲ್ಲಿ ಪಾದಯಾತ್ರೆ ನಡೆಸಿದರು.

ಧರ್ಮಸ್ಥಳ ಪ್ರಕರಣ

ಎನ್‌ಐಎ ತನಿಖೆಗೆ ಆಗ್ರಹಿಸಿ ಸೆ.1ಕ್ಕೆ 'ಧರ್ಮಸ್ಥಳ ಚಲೋ'



ಬೆಂಗಳೂರು, ಆ.25(ಕೆಎಂಶಿ)– ಧರ್ಮಸ್ಥಳದಲ್ಲಿ ಶವಗಳನ್ನು ಹೂತಿರುವುದಾಗಿ ಅನಾಮಿಕ ವ್ಯಕ್ತಿಯ ಆರೋಪ ಹಗರಣದ ಸಂಪೂರ್ಣ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಐಎ ತನಿಖೆ ನಡೆಸಿದರೆ ಸರ್ಕಾರದ ಬಗ್ಗೆ ಜನರಿಗೆ ಮತ್ತು ಭಕ್ತರಿಗೆ ವಿಶ್ವಾಸ ಬರಲಿದೆ. ಆದ್ದರಿಂದ, ಮುಖ್ಯಮಂತ್ರಿಗಳು ತ್ವರಿತ ನಿರ್ಧಾರ ಕೈಗೊಳ್ಳಬೇಕು ಎಂದರು.

ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಸೆಪ್ಟೆಂಬರ್ 1ರಂದು ಧರ್ಮಸ್ಥಳ ಚಲೋ ನಡೆಸುತ್ತಿರುವುದಾಗಿ ಪ್ರಕಟಿಸಿದರು. ಹಿಂದೂ ಭಾವನೆಗಳಿಗೆ ಧಕ್ಕೆ ತಂದ ಸರ್ಕಾರದ ವಿರುದ್ಧ ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರ ಹಾಗೂ ಎಲ್ಲ ಜಿಲ್ಲೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಧರ್ಮಸ್ಥಳಕ್ಕೆ ಬರುವ ವಿಶ್ವಾಸ ವಿದೆ. ಧರ್ಮಸ್ಥಳ ಘಟನೆಯಿಂದ ಸರ್ಕಾರಕ್ಕೆ ಬಂದಿರುವ ಕಳಂಕದಿಂದ ಹೊರಗೆ ಬರಬೇಕಿದೆ, ದುಷ್ಕೃತ್ಯದ ಹಿಂದಿರುವ ಸಂಘಟನೆ ಹಾಗೂ ದುಷ್ಟಶಕ್ತಿಗಳ ಬಗ್ಗೆ ಸಮರ್ಪಕ ತನಿಖೆ ಆಗಬೇಕಿದೆ. ದುಷ್ಟಶಕ್ತಿಗಳು ಇನ್ನೊಂದು ಹಿಂದೂ ದೇವಾಲಯ ವಿರುದ್ಧವೂ ಷಡ್ಯಂತ್ರ ಮಾಡುವ ಸಾಧ್ಯತೆ ಇದೆ, ಧರ್ಮಸ್ಥಳ ವಿಷಯದಲ್ಲಿ ಮುಖ್ಯಮಂತ್ರಿ ಆತುರ ತೋರಿದ್ದೇಕೆ ಎಂಬುದು ಒಗಟಾಗಿಯೇ ಇದೆ. ಧರ್ಮಸ್ಥಳದ ವಿರುದ್ಧ ದಾರಿಯಲ್ಲಿ ಹೋಗುವ ವ್ಯಕ್ತಿಯೊಬ್ಬ ಬುರುಡೆ ತೋರಿಸಿದಾಗ ಆತನ ಹಿಂದಿರುವ ಶಕ್ತಿಗಳು, ಸಂಘಟನೆಗಳು ಯಾವುವು ಎಂಬ ಮಾಹಿತಿ ಸಂಗ್ರಹಿಸಬೇಕಿತ್ತು, ಇಲ್ಲವೇ ಬೇಹುಗಾರಿಕಾ ದಳದಿಂದ ವರದಿ ಪಡೆದು ಸ್ಪಷ್ಟ ನಿರ್ಧಾರ ಕೈಕೊಳ್ಳಬೇಕಿತ್ತು. ಧರ್ಮಸ್ಥಳದ ವಿಷಯದಲ್ಲಿ ಕಳೆದ ಒಂದು ತಿಂಗಳಿಂದ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಚರ್ಚೆಗಳಾಗುತ್ತಿವೆ ಎಂದರು.

ಗೌರಿ–ಗಣೇಶ ಹಬ್ಬ: ಪರಿಸರ ಕಾಳಜಿ ಮರೆಯದಿರೋಣ

ಜನತೆಗೆ ಸಿಎಂ ಸಿದ್ದರಾಮಯ್ಯ ಕರೆ



ಬೆಂಗಳೂರು, ಆ.25– ನಾಳೆ (ಆ.26) ಗೌರಿ ಹಬ್ಬ, ನಾಡಿದ್ದು ಗಣೇಶ ಹಬ್ಬ. ಇದಕ್ಕಾಗಿ ನಾಡಿನ ಜನತೆ ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದು, ಸಡಗರ– ಸಂಭ್ರಮದಿಂದ ಆಚರಿಸಲು ತಯಾರಿ ನಡೆಸಿದ್ದಾರೆ.

ಮಾರುಕಟ್ಟೆಯಲ್ಲಿ ತರಹೇವಾರಿ ಮೂರ್ತಿಗಳು ಲಗ್ಗೆ ಇಟ್ಟಿದ್ದು, ಖರೀದಿ ಜೋರಾಗಿ ನಡೆಯುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ನಡುವೆ ವಿಘ್ನ ವಿನಾಶಕ, ಪ್ರಥಮ ಪೂಜಿತನ ಅದ್ದೂರಿ ಆಚರಣೆಗೆ ಜನರು ಬೇಕಾದ ಅಗತ್ಯ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡಿನ ಜನತೆಗೆ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಶಯ ಕೋರಿದ್ದಾರೆ.

ಜಲಚರಗಳಿಗೆ, ಪರಿಸರಕ್ಕೆ ಹಾನಿಕಾರಕವಾದ ರಾಸಾಯನಿಕಯುಕ್ತ ಗಣೇಶ ಮೂರ್ತಿಯ ಬದಲಿಗೆ ಮಣ್ಣಿನಿಂದಷ್ಟೇ ಮಾಡಿದ ಪರಿಸರಸ್ನೇಹಿ ಗಣೇಶನನ್ನು ಪೂಜಿಸೋಣ ಎಂದು ಕರೆ ನೀಡಿದ್ದಾರೆ.

ಹಬ್ಬವನ್ನು ಸಂಭ್ರಮ – ಸಡಗರದೊಂದಿಗೆ ಆಚರಿಸುವ ಜೊತೆಗೆ ಪರಿಸರ ಕಾಳಜಿಯನ್ನು ಮರೆಯದಿರೋಣ. ವಿಘ್ನನಿವಾರಕನಾದ ಗಣೇಶನು ನಿಮ್ಮೆಲ್ಲಾ ಕಷ್ಟಗಳನ್ನು ಕಳೆದು ಸುಖ ಸಮೃದ್ಧಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

ಮಾಸ್ಕ್‌ಮ್ಯಾನ್ ಮಾಹಿತಿ ಸಂಗ್ರಹಕ್ಕೆ ಮಂಡ್ಯ, ತಮಿಳುನಾಡಿಗೆ ಎಸ್‌ಐಟಿ ತಂಡ



ಮಂಗಳೂರು, ಆ.25– ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಆರೋಪ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ದೂರುದಾರ ಚಿನ್ನಯ್ಯನನ್ನು ಬಂಧನಕ್ಕೊಳಪಡಿಸಿದ್ದು, ಈತನ ಕುರಿತು ಮಾಹಿತಿ ಸಂಗ್ರಹಿಸಲು ಮಂಡ್ಯ ಹಾಗೂ ತಮಿಳುನಾಡಿಗೆ ಭೇಟಿ ನೀಡಿದೆ ಎಂದು ತಿಳಿದುಬಂದಿದೆ. ಈತ ಮಂಡ್ಯ ಹಾಗೂ ತಮಿಳುನಾಡಿನಲ್ಲಿ ವಾಸವಿದ್ದ ಎಂದು ಹೇಳಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಎಸ್‌ಐಟಿ ಅಧಿಕಾರಿಗಳ ತಂಡ ಮಂಡ್ಯ ಮತ್ತು ತಮಿಳುನಾಡಿಗೆ ಭೇಟಿ ನೀಡಿ, ಈತನ ಕುಟುಂಬಸ್ಥರಿಂದ ಮಾಹಿತಿ ಸಂಗ್ರಹಿಸುತ್ತಿದೆ ಎಂದು ವರದಿಗಳು ತಿಳಿಸಿವೆ.

ದಸರಾ ಉದ್ಘಾಟಕರ ಹೆಸರು ಘೋಷಣೆ ಬೆನ್ನ ಹಿಂದೆಯೇ ವಿವಾದ

ದಸರಾ ನಮ್ಮ ಸಂಸ್ಕೃತಿಯ ಭಾಗವಾಗಿದ್ದು, ನನಗೂ ಪ್ರಿಯವಾಗಿದೆ : ಬಾನು ಮುಷ್ತಾಕ್



ಹಾಸನ, ಆ. 25– ದಸರಾ ಉದ್ಘಾಟನೆಗೆ ಆಯ್ಕೆ ಮಾಡಿರುವುದು ಖಂಡಿತ ಇದು ನನಗೆ ಖುಷಿ ವಿಚಾರ ಎಂದರು. ಹಾಸನದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಬಾನು ಮುಷ್ತಾಕ್, ನೀವು ಚಾಮುಂಡೇಶ್ವರಿ ತಾಯಿ ಅಂತಿರಿ ನಿಮ್ಮ ಭಾವವನ್ನು ಗೌರವಿಸುತ್ತೇನೆ. ಅನೇಕರು ದಸರಾವನ್ನು ನಾಡಹಬ್ಬ ಅಂತಾರೆ. ಅದನ್ನು ಸಹ ಗೌರವಿಸುತ್ತೇನೆ. ನಾಡಹಬ್ಬ, ಎಂದು ಪ್ರೀತಿ, ಅಭಿಮಾನದಿಂದ ಕರೆಯುತ್ತಿದ್ದೀರಿ. ಇದು ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಹಾಗಾಗಿ ಇದು ನನಗೂ ದಸರಾ ಪ್ರಿಯವಾಗಿದೆ ಎಂದರು.

ದಸರಾ ನಾನು ಗೌರವಿಸುವ, ಪ್ರೀತಿಯಿಂದ ಬಾಗಿಯಾಗುವ ಹಬ್ಬವಾಗಿದೆ. ನಾನು ತಂದೆ–ತಾಯಿ ಜೊತೆ ಹಲವು ಬಾರಿ ಜಂಬು ಸವಾರಿ ನೋಡಲು ಹೋಗುತ್ತಿದ್ದೆ. ಈಗ ನಾನೇ ದಸರಾ ಉದ್ಘಾಟನೆ ಮಾಡಲು ಆಹ್ವಾನ ಬಂದಿದೆ. ಹಾಗಾಗಿ ನನಗೆ ಸಂತೋಷವಾಗಿದೆ ಎಂದು ಹೇಳಿದರು.

ಬಾನು ಮುಷ್ತಾಕ್ ಆಯ್ಕೆ ಸ್ವಾಗತಾರ್ಹ

ಪ್ರತಾಪ ಸಿಂಹ ವಿರೋಧಕ್ಕೆ ಕೆ.ವಿ.ಮಲ್ಲೇಶ್ ಕಿಡಿ



ಕೆ.ವಿ.ಮಲ್ಲೇಶ್

ಮೈಸೂರು, ಆ.25–ಹಿರಿಯ ಸಾಹಿತಿ, ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಮೈಸೂರು ದಸರಾ ಉದ್ಘಾಟನೆಗೆ ಆಹ್ವಾನಿಸಲು ರಾಜ್ಯ ಸರಕಾರ ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ ಎಂದು ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ, ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ದಸರಾ ಮಹೋತ್ಸವ ನಾಡಿನ ಸಾಂಸ್ಕೃತಿಕ ವೈಭವದ ಪ್ರತೀಕವಾದ ನಾಡಹಬ್ಬ. ಕನ್ನಡ ನಾಡಿನ, ದೇಶ–ವಿದೇಶಗಳ ಎಲ್ಲ ಜಾತಿ, ಧರ್ಮ, ವರ್ಗಗಳ ಜನರು ಉತ್ಸಾಹದಿಂದ ಪಾಲ್ಗೊಳ್ಳುವ ಸೌಹಾರ್ದದ ಸಂಭ್ರಮ. ಪ್ರಜಾತಂತ್ರ ಸರ್ಕಾರ ನೀಡುವ ಅನುದಾನದ ಮೂಲಕ ಸಂಘಟಿತವಾಗುವ ಈ ಉತ್ಸವ ಜಾತಿ, ಧರ್ಮ, ರಾಜ್ಯ–ದೇಶದ ಗಡಿರೇಖೆಗಳನ್ನು ಮೀರಿ ಸರ್ವರನ್ನೂ ಒಳಗೊಳ್ಳುತ್ತಿರುವಾಗ, ಕೆಲವರು ಉದ್ಘಾಟಕರ ಆಯ್ಕೆಯನ್ನು ವಿವಾದಕ್ಕೆ ಗುರಿ ಮಾಡುತ್ತಿರುವುದು ಖಂಡನೀಯ.

ಎರಡು ಬಾರಿ ಮೈಸೂರು ಲೋಕ ಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ ಮಾಜಿ ಸಂಸದ ಪ್ರತಾಪ ಸಿಂಹ ಅವರು ಬಾನು ಅವರ ಧಾರ್ಮಿಕ ನಂಬಿಕೆಯನ್ನು ಮುಂದೆ ಮಾಡಿ, ಆಕ್ಷೇಪ ವ್ಯಕ್ತಪಡಿಸಿರುವುದು ಅವರ ಸಂಕುಚಿತ ಮನೋಧರ್ಮವನ್ನು ತೋರಿಸುತ್ತದೆ. ಪ್ರತಾಪ ಸಿಂಹ, ಬಾನು ಮುಸ್ತಾಕ್ ಸಹಿತ ಯಾರೇ ಆಗಲಿ ಅವರವರ ಧಾರ್ಮಿಕ ನಂಬಿಕೆಗಳು ಅವರವರಿಗೆ ಬಿಟ್ಟ ವಿಷಯ. ಧಾರ್ಮಿಕ ನಂಬಿಕೆಯ ಸ್ವಾತಂತ್ರವನ್ನು ಸಂವಿಧಾನ ನಮಗೆ ನೀಡಿದೆ ಎಂದು ಹೇಳಿದ್ದಾರೆ.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಸಮರ್ಥಿಸಿಕೊಂಡ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ



ಬೆಂಗಳೂರು, ಆ.25(ಕೆಎಂಶಿ)–ರಾಷ್ಟ್ರದ ಅತ್ಯುನ್ನತ ಹುದ್ದೆಯನ್ನು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅಲಂಕರಿಸಬಹುದಾದರೆ, ಬಾನು ಮುಷ್ತಾಕ್ ದಸರಾ ಮಹೋತ್ಸವ ಉದ್ಘಾಟಿಸುವುದರಲ್ಲಿ ತಪ್ಪೇನಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಇದೇ ಮಣ್ಣಿನಲ್ಲಿ ಹುಟ್ಟಿ ವಿವಿಧ ಚಳವಳಿಗಳಲ್ಲಿ ಭಾಗವಹಿಸಿ, ಕನ್ನಡ ಸಾಹಿತ್ಯದಲ್ಲಿ ತೊಡಗಿಸಿಕೊಂಡವರು, ಎಲ್ಲದಕ್ಕೂ ಮಿಗಿಲಾಗಿ ಜಾತ್ಯತೀತ ಮನೋಭಾವದವರು. ತಮ್ಮ ಧರ್ಮದ ಜೊತೆ ಬೇರೆ ಧರ್ಮಗಳನ್ನು ಸಮನಾಗಿ ಕಾಣುತ್ತಾರೆ. ಅವರಿಗೆ ಬಂದಿರುವ ವಿಶ್ವಮಟ್ಟದ ಪ್ರಶಸ್ತಿ ಮತ್ತು ಅವರು ರಾಜ್ಯಕ್ಕೆ ನೀಡಿರುವ ಕೊಡುಗೆಗಳನ್ನು ಗಮನಿಸಿ ಸರ್ಕಾರ ಸರಿಯಾದ ತೀರ್ಮಾನ ಕೈಗೊಂಡಿದೆ ಎಂದು ಸಮರ್ಥಿಸಿಕೊಂಡರು.

ಕನ್ನಡವನ್ನು ಭುವನೇಶ್ವರಿ ಮಾಡಿ ದೌರ್ಜನ್ಯ ಮಾಡಿದ್ರಿ

ಬಾನು ಮುಷ್ತಾಕ್ ಹಳೇ ಹೇಳಿಕೆ ವೈರಲ್

ಬೆಂಗಳೂರು, ಆ.25– ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಉದ್ಘಾಟಕರಾಗಿ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಲಾಗಿದೆ. ಆದರೆ ಇದಕ್ಕೆ ಬಿಜೆಪಿ ಹಾಗೂ ಕೆಲ ಹಿಂದೂ ಸಂಘಟನೆ ಮುಖಂಡರು ಆಕ್ಷೇಪ ಎತ್ತಿದ್ದಾರೆ. ಈ ವಿಚಾರ ಚರ್ಚೆಯಲ್ಲಿರುವ ನಡುವೆ ಬಾನು ಮುಷ್ತಾಕ್ 2023ರ ಜನ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿರುವ ವಿಡಿಯೋವೊಂದು ವೈರಲ್ ಆಗುತ್ತಿದೆ.

ಸನಾತನ ಎಂಬ ಎಕ್ಸ್ ಖಾತೆಯಲ್ಲಿ ಬಾನು ಮುಷ್ತಾಕ್ ಅವರು ಮಾತನಾಡಿರುವ ವಿಡಿಯೋ ಹಂಚಿಕೊಂಡಿದ್ದಾರೆ. 2023ರ ಜನ ಸಾಹಿತ್ಯ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಿತು. ಅದರಲ್ಲಿ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಮಾತನಾಡಿ, ಕನ್ನಡ ಭಾಷೆ ಬಗ್ಗೆ ಒಬ್ಬ ಅಲ್ಪಸಂಖ್ಯಾತ ಮಹಿಳೆಯಾಗಿ, ನನ್ನ ಗ್ರಹಿಕೆ ಏನು ಎಂಬುದನ್ನು ನಿಮ್ಮ ಎದುರಿಗೆ ಇಡುತ್ತೇನೆ. ಅದು ನಿಮಗೆ ಇಷ್ಟ ಆಗುತ್ತೋ ಕಷ್ಟ ಆಗುತ್ತೋ ಗೊತ್ತಿಲ್ಲ. ಕನ್ನಡವನ್ನು ಭಾಷೆಯಾಗಿ ಬೆಳಿಲಿಕ್ಕೆ, ಬಾನು ಮುಷ್ತಾಕ್ ಮಾತಾಡಲಿಕ್ಕೆ, ಅವರ ಮನೆಯವರು ಮಾತಾಡಲಿಕ್ಕೆ ನೀವು ಅವಕಾಶವನ್ನೇ ಕೊಡಲಿಲ್ಲ. ಕನ್ನಡವನ್ನು ಭುವನೇಶ್ವರಿಯಾಗಿ ಮಾಡ್ಬಿಟ್ರಿ, ಕೆಂಪು ಹಳದಿ, ಅರಿಶಿನ ಕುಂಕುಮ ಬಾವುಟ ಹಾಕಿ ಆಕೆಯನ್ನು ಮಂದಾಸನದ ಮೇಲೆ ಕೂರಿಸಿ ಬಿಟ್ರಿ ನಾನು ಎಲ್ಲಿ ನಿಲ್ಲಬೇಕು. ಏನು ನೋಡ ಬೇಕು. ಹೇಗೆ ಇನ್ವಾಲ್ ಆಗಬೇಕು, ಹೇಗೆ ಬೆರೆಯಲಿ. ನನ್ನನ್ನು ಹೊರಗಟ್ಟುವ ಹುನ್ನಾರ ಇಂದಿನಿಂದ ಇಲ್ಲ ಹಿಂದಿ ನಿಂದಲೂ ಆಗುತ್ತಿದೆ. ಅದು. ಇವತ್ತು ಪೂರ್ಣಗೊಳ್ಳುತ್ತಿದೆ ಅಷ್ಟೇ ಎಂದು ಹೇಳಿದ್ದರು.

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾಃ' ಮಹಿಳೆಯರನ್ನು ಮಂದಾಸನ ಮೇಲೆ ಕೂರಿಸಿದ ತಕ್ಷಣ ದೇವತೆಯರು ಸಂತೃಪ್ತರಾಗ್ತಾರೆ. ಇಲ್ಲೂ ಕೂಡ ಕನ್ನಡಮ್ಮನ ದೇವಸ್ಥಾನದಲ್ಲಿ ಕೂರಿಸಿ, ಮಹಿಳೆಯರನ್ನು ಹೇಗೆ ತುಳಿತ ಇದ್ದಾರೋ, ದೌರ್ಜನ್ಯ ಮಾಡುತ್ತಿದ್ದಾರೋ, ಹಿಂಸೆ ಮಾಡುತ್ತಿದ್ದಾರೋ ಹಾಗೆಯೇ ಕನ್ನಡ ಭಾಷೆ ಮೇಲೂ ದೌರ್ಜನ್ಯವಾಗುತ್ತಿದೆ. ನೀವು ದೌರ್ಜನ್ಯ ಮಾಡ್ತಿದ್ದೀರಿ. ನಿಮ್ಮನ್ನು ಗೋಡೆಗೆ ಒತ್ತರಿಸಿ ಕೇಳುತ್ತಿದ್ದೇನೆ. ಇದಕ್ಕೆ ಉತ್ತರ ಕೊಡಿ. ಕನ್ನಡವನ್ನು ಭುವನೇಶ್ವರಿಯನ್ನಾಗಿ ಮಾಡಿ, ಕನ್ನಡದ ರಥವನ್ನು ಎಳೆದು, ಕನ್ನಡದ ಜಾತ್ರೆಯನ್ನು ಮಾಡಿ, ಕನ್ನಡದ ಪರಿಷೆಯನ್ನು ಮಾಡಿ ಏನು ಮಾಡಿದಿರಿ. ನನ್ನನ್ನು ಹೊರಗಟ್ಟುವಿಲಿಕ್ಕೆ ಇಷ್ಟೊಂದು ಹುನ್ನಾರ ಬೇಕಿತ್ತ ನಿಮಗೆ? ಎಂದು ಸಾಹಿತ್ಯ ಸಮ್ಮೇಳನದಲ್ಲಿ ಬಾನು ಮುಷ್ತಾಕ್ ಅವರು ಮಾತನಾಡಿರುವುದು ವೈರಲ್ ಆಗುತ್ತಿದೆ.

ಬಾನು ಮುಷ್ತಾಕರ ಭಾಷಣದ ಹಳೇ ವಿಡಿಯೋ ಉಲ್ಲೇಖಿಸಿ ಶೋಭಾ ಆಕ್ಷೇಪ



ಮೈಸೂರು: ಸಾಹಿತಿ ಬಾನು ಮುಷ್ತಾಕ್ ಅವರು ಕಾರ್ಯಕ್ರಮವೊಂದರಲ್ಲಿ ಮಾಡಿದ ಭಾಷಣದ ತುಣುಕು ಈಗ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಈ ವಿಡಿಯೋ ತೋರಿಸಿ ದಸರಾ ಉದ್ಘಾಟನೆಗೆ ಆಹ್ವಾನಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಾನು ಮುಷ್ತಾಕ್ ಅವರು ಚಾಮುಂಡಿ ಬೆಟ್ಟ ಹತ್ತಬಾರದು. ಅವರಿಗೆ ನೀಡಿರುವ ಆಹ್ವಾನವನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದ್ದಾರೆ. ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ದಸರಾ ಮಹೋತ್ಸವವು ಮಹಿಷಾಸುರನನ್ನು ಸಂಹಾರ ಮಾಡಿದ ಚಾಮುಂಡೇಶ್ವರಿಯ ವಿಜಯದ ಸಂಕೇತವಾಗಿದೆ. ಅದನ್ನು ಒಪ್ಪದವರಿಗೆ ಆಹ್ವಾನ ನೀಡುವ ಮೂಲಕ ಈ ಉತ್ಸವ ಮತ್ತು ದೇವಸ್ಥಾನಕ್ಕೆ ಅಪಮಾನ ಮಾಡುವ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಶೋಭಾ ದೂರಿದರು.

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುವ ಹಳದಿ ಮತ್ತು ಕೆಂಪು ಬಣ್ಣದ ಧ್ವಜ ಹಾಗೂ ಭುವನೇಶ್ವರಿ ತಾಯಿಯ ಪರಿಕಲ್ಪನೆಯನ್ನು ಒಪ್ಪದ ಬಾನು ಮುಷ್ತಾಕ್ ಅವರು ದುಷ್ಟರ ಸಂಹಾರ ಮಾಡಿದ ಚಾಮುಂಡೇಶ್ವರಿ ದೇವಿಯನ್ನು ಹೇಗೆ ಒಪ್ಪಲು ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಬಾನು ಮುಷ್ತಾಕ್ ಹಿಂದೂ ಧರ್ಮದ ಮೇಲೆ ನಂಬಿಕೆ ಇಲ್ಲದವರು ಮತ್ತು ಮೂರ್ತಿ ಪೂಜೆ ಒಪ್ಪದವರು. ಒಂದು ವೇಳೆ ಅವರು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮತ್ತು ದೀಪ ಹಚ್ಚುವ ಕೆಲಸ ಮಾಡುತ್ತಾರೆ ಎಂದಾದರೆ ಉದ್ಘಾಟನೆಗೆ ಬರಲಿ ಎಂದು ಆಹ್ವಾನಿಸಿದರು.


ಬಾನು ಮುಷ್ತಾಕರಿಗೆ ಆಹ್ವಾನ; ನಮ್ಮ ಅಭ್ಯಂತರವಿಲ್ಲ

ಧಾರ್ಮಿಕ ಭಾವನೆಗೆ ಯಾವ ಧಕ್ಕೆಯಾಗದಂತೆ ಉದ್ಘಾಟಿಸಲಿ: ಸಂಸದ ಯದುವೀರ್



ಮೈಸೂರು, ಆ.25(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದಕ್ಕೆ ಅಭ್ಯಂತರವಿಲ್ಲ. ಆದರೆ, ತಾಯಿ ಚಾಮುಂಡೇಶ್ವರಿಗೆ ಗೌರವ ಸಲ್ಲಿಸಿ, ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ದಸರಾ ಉದ್ಘಾಟಿಸಲಿ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದ್ದಾರೆ.

ರಾಜ್ಯ ಸರ್ಕಾರ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿರುವುದರ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಸಂಸದ ಯದುವೀರ್ ಸೋಮವಾರ ಮೈಸೂರಿನ ತಮ್ಮ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.



ಬಾನು ಮುಷ್ತಾಕ್ ಅವರು ಕನ್ನಡ ಸಾಹಿತ್ಯ ಹಾಗೂ ಭಾಷೆಗೆ ನೀಡಿರುವ ಕೊಡುಗೆ ಅಪಾರವಾದುದು. ಅದರಲ್ಲಿ ಯಾವುದೇ ರೀತಿಯ ಅನುಮಾನ ವಿಲ್ಲ. ಜೊತೆಗೆ ಸಾಮಾಜಿಕ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಮುಸ್ಲಿಂ ಮಹಿಳೆಯರಿಗೆ ಸಮಾನ ಹಕ್ಕು ಹಾಗೂ ಮಸೀದಿಗೆ ಪ್ರವೇಶ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ರಾಜ್ಯ ಸರ್ಕಾರದಿಂದ ಸಂವಿಧಾನ ಚೌಕಟ್ಟು ಹಾಗೂ ಜಾತ್ಯಾತೀತ ದೃಷ್ಟಿಯಿಂದ ಆಚರಣೆ ಮಾಡುತ್ತಿದ್ದರೂ ದಸರಾಗೆ ಧಾರ್ಮಿಕ ಹಾಗೂ ಪಾರಂಪರಿಕ ನೆಲೆಗಟ್ಟಿದೆ ಎಂದರು.

ಕನ್ನಡ ಬಾವುಟದ ಬಣ್ಣ ಹಾಗೂ ಭುವನೇಶ್ವರಿಯಾಗಿ ಭಾವಿಸುವುದರ ಕುರಿತ ಬಾನು ಮುಷ್ತಾಕ್ ಅವರ ಹೇಳಿಕೆಯ ವಿಡಿಯೋ ವೈರಲ್ ಆಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆ ಹಿನ್ನೆಲೆ ಯಲ್ಲಿ ಅವರಿಗೆ ತಾಯಿ ಚಾಮುಂಡೇಶ್ವರಿ ಮೇಲೆ ನಂಬಿಕೆ ಇದೆಯಾ ಹಾಗೂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಕೆಲಸ ಮಾಡಿದ್ದಾರಾ ಎಂಬುದು ನಮ್ಮೆಲ್ಲರ ಸಹಜ ಪ್ರಶ್ನೆಯಾಗಿದೆ. ಈ ಬಗ್ಗೆ ಅವರು ಸ್ಪಷ್ಟೀಕರಣ ನೀಡಿದ್ದರೆ ನಮ್ಮ ದೇನು ಅಭ್ಯಂತರವಿಲ್ಲ ಎಂದು ತಿಳಿಸಿದರು.

> ಬಾನು ಮುಷ್ತಾಕ್ ಅವರ ಕೃತಿಯನ್ನು ಅನುವಾದಿಸಿದ ಕೊಡಗಿನ ದೀಪಾ ಭಾಸ್ತಿ ಅವರಿಗೂ ದಸರಾಗೆ ಆಹ್ವಾನ ನೀಡುವುದು ಒಳ್ಳೆಯದು. ಸಾಮಾನ್ಯವಾಗಿ ಕೊಡಗಿನ ಸಾಧಕರಿಗಾಗಲೀ, ನಿವಾಸಿಗಳಿಗಾಗಲೀ ದೊಡ್ಡ ವೇದಿಕೆಗಳು ಸಿಗುವುದಿಲ್ಲ. ಇದೊಂದು ಒಳ್ಳೆಯ ಅವಕಾಶ. ದೀಪಾ ಭಾಸ್ತಿ ಅವರಿಗೂ ಉದ್ಘಾಟನೆ ವೇದಿಕೆಯಲ್ಲಿ ಅವಕಾಶ ನೀಡಿದರೆ ಸಮಾನ ಗೌರವ ನೀಡಿದಂತಾಗುತ್ತದೆ.
>
> -ಸಂಸದ ಯದುವೀರ್

ಪಕ್ಷ ಹಾಗೂ ನನ್ನ ನಿಲುವಿನಲ್ಲಿ ವ್ಯತ್ಯಾಸವಿಲ್ಲ. ಬಾನು ಮುಷ್ತಾಕ್ ಅವರು ತಮ್ಮ ಬಾಲ್ಯದಲ್ಲಿ ಜಯಚಾಮರಾಜೇಂದ್ರ ಅವರ ಕಾಲದಲ್ಲಿ ದಸರಾಗೆ ಬಂದು ಭಾಗವಹಿಸಿ, ವೈಭವ ಅನುಭವಿಸಿದ್ದಾರೆ ಎಂದು ತಿಳಿದಿದ್ದೇನೆ. ಧಾರ್ಮಿಕ ಆಚರಣೆ, ಪದ್ಧತಿ, ವಿಧಿ, ಪರಂಪರೆಯನ್ನು ಒಳಗೊಂಡಿರುವ ದಸರಾ ಉದ್ಘಾಟನೆ ಸಂದರ್ಭದಲ್ಲಿ ಯಾವುದೇ ರೀತಿಯಲ್ಲೂ ಧಾರ್ಮಿಕ ಭಾವನೆಗೆ ಧಕ್ಕೆಯಾಗಬಾರದು. ತಾಯಿ ಚಾಮುಂಡೇಶ್ವರಿಗೆ ಗೌರವ ಕೊಟ್ಟು, ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಉದ್ಘಾಟಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ಈ ಹಿಂದೆಯೂ ಭಾರತೀಯ ಪರಂಪರೆಗೆ ಧಕ್ಕೆ ಆಗುವಂತಹ ನಡವಳಿಕೆ ಹೊಂದಿದ್ದವರನ್ನು ದಸರಾ ಆಚರಣೆಗೆ ಆಹ್ವಾನಿಸಿದೆ. ಗಿರೀಶ್ ಕಾರ್ನಾಡ್, ನಿಸಾರ್ ಅಹಮದ್ ಅವರನ್ನೂ ಕರೆದಿದ್ದರು. ಇದಕ್ಕೆ ಜಾತ್ಯಾತೀತ ದೃಷ್ಟಿಕೋನದಲ್ಲಿ ನಮ್ಮದೇನು ಸಮಸ್ಯೆ ಇಲ್ಲ. ಆದರೆ ದಸರಾ ನಿರ್ದಿಷ್ಟವಾಗಿ ಧಾರ್ಮಿಕ ಆಚರಣೆ. ಸರ್ಕಾರಿ ವ್ಯವಸ್ಥೆಯಲ್ಲೂ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿಯೇ ಆಚರಣೆ ಪ್ರಾರಂಭ ಮಾಡಲಾಗುತ್ತದೆ. ಈ ನಿಟ್ಟಿನಲ್ಲಿ ಅತಿಥಿಗಳನ್ನು ಆಹ್ವಾನಿಸುವಾಗ ಯಾರ ಭಾವನೆಗೂ ಧಕ್ಕೆಯಾಗದಂತೆ ಗಮನವಿಡಬೇಕು ಎಂದು ಅಭಿಪ್ರಾಯಿಸಿದರು.

ನಕ್ಕರೆ ಅದೇ ಸ್ವರ್ಗ

ಲವ್ ಮಾಡುವಾಗ ನನ್ನದೇ 'ದರ್ಬಾರು'
ಲವ್ ಮಾಡಿದಾಗಲೂ ನನ್ನದೇ 'ಕಾರುಬಾರು'
ಆದರೆ ಲವ್ ಕಟ್ ಆಯ್ತು ನೋಡಿ
ಅವಳದು 'ಕಾರು'! ನಂದು 'ಬಾರು'!!

ಮೈಸೂರು ಮಿತ್ರ

ಮಂಗಳವಾರ, 26 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಕಷ್ಟಗಳನ್ನು ಮೌನವಾಗಿ ದಾಟಬೇಕು. ಪರಿಶ್ರಮ ಸದ್ದಿಲ್ಲದೆ ಸಾಗಬೇಕು. ಸಿಗುವ ಯಶಸ್ಸಿನ ಶಬ್ದ ಜಗತ್ತಿಗೆ ಕೇಳಿಸುವಷ್ಟು ಜೋರಾಗಿರಬೇಕು.
– ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿಲ್ಲದ ಮನೆಯಿಲ್ಲ, ಸೋಲಿಲ್ಲದ ಮನುಷ್ಯನಿಲ್ಲ

ನಿಮ್ಮ ಪತ್ರಗಳು

■ ರಾಜಕೀಯ ಪ್ರೇರಿತ ಪಠ್ಯ ಪುಸ್ತಕಗಳು ಆತಂಕಕಾರಿ

ಮಾನ್ಯರೆ,

ಇತ್ತೀಚೆಗೆ ಎನ್.ಸಿ.ಇ.ಆರ್.ಟಿ ಪಠ್ಯ ಪುಸ್ತಕದಲ್ಲಿ ದೇಶದ ವಿಭಜನೆಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂಬ ಉಲ್ಲೇಖ ಮಾಡಿರುವುದು ಚಿಂತಾಜನಕವಾಗಿದೆ. 1947ರ ವಿಭಜನೆ ದೇಶದ ಇತಿಹಾಸದಲ್ಲಿ ಅತಿದೊಡ್ಡ ದುರಂತವಾಗಿದ್ದು, ಕೋಟ್ಯಾಂತರ ಜನರ ನಿರಾಶ್ರಯತೆ, ಹಿಂಸಾಚಾರ ಹಾಗೂ ಜೀವಹಾನಿಗೆ ಕಾರಣವಾಯಿತು. ಇಂತಹ ನೋವು ತುಂಬಿದ ಘಟನೆಯ ಹೊಣೆಗಾರಿಕೆಯನ್ನು ಏಕಪಕ್ಷೀಯವಾಗಿ ಕಾಂಗ್ರೆಸ್ ಮೇಲಷ್ಟೇ ಹಾಕುವುದು ಇತಿಹಾಸದ ಸತ್ಯವನ್ನು ತಿರುಚಿ ವಿದ್ಯಾರ್ಥಿಗಳಿಗೆ ದ್ವೇಷದ ಭಾವನೆ ಮೂಡಿಸುತ್ತದೆ.

ವಾಸ್ತವವಾಗಿ, ಮುಸ್ಲಿಂ ಲೀಗ್‌ನ ಬೇಡಿಕೆ, ಬ್ರಿಟಿಷರ ನೀತಿ ಹಾಗೂ ಜಟಿಲ ರಾಜಕೀಯ ಪರಿಸ್ಥಿತಿಗಳೇ ವಿಭಜನೆಯ ಪ್ರಮುಖ ಕಾರಣಗಳಾಗಿವೆ. ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ನಿಖರವಾದ, ತಟಸ್ಥ ಹಾಗೂ ಸಮಗ್ರ ಇತಿಹಾಸವನ್ನು ಪರಿಚಯಿಸಬೇಕೇ ಹೊರತು ರಾಜಕೀಯ ಪ್ರೇರಿತ ತಪ್ಪು ಮಾಹಿತಿಗಳಲ್ಲ.ಇತಿಹಾಸವನ್ನು ಯಾವುದೇ ಒಂದು ಪಕ್ಷದ ದೃಷ್ಟಿಕೋನಕ್ಕೆ ಮಾತ್ರ ಸೀಮಿತಗೊಳಿಸುವುದು ಭವಿಷ್ಯದ ಪೀಳಿಗೆಗೆ ತಪ್ಪು ಸಂದೇಶ ನೀಡುತ್ತದೆ. ಆದ್ದರಿಂದ ಶಿಕ್ಷಣದಲ್ಲಿ ನಿಷ್ಪಕ್ಷಪಾತತೆ ಹಾಗೂ ನಿಜಾಂಶಗಳನ್ನು ಕಾಪಾಡುವುದು ಅತೀ ಅಗತ್ಯ.

–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

■ ಕನ್ನಡದಲ್ಲಿ ರೈಲ್ವೆ ನೇಮಕಾತಿ ಪರೀಕ್ಷೆ ಸ್ವಾಗತಾರ್ಹ

ಮಾನ್ಯರೆ,

ಲೋಕಸಭೆಯಲ್ಲಿ ಪ್ರಶ್ನೋತ್ತರ ವೇಳೆ ದಾವಣಗೆರೆ ಸಂಸದೆ ಡಾ ಪ್ರಭಾ ಮಲ್ಲಿಕಾರ್ಜುನ್ ಅವರು ಕೇಳಿದ ಕನ್ನಡದಲ್ಲಿ ರೈಲ್ವೆ ನೇಮಕಾತಿ ಪರೀಕ್ಷೆಗೆ ಅವಕಾಶ ಮಾಡಿಕೊಡಿ ಎಂಬ ಪ್ರಶ್ನೆಗೆ, ಉತ್ತರಿಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ರೈಲ್ವೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ 15 ಭಾಷೆಗಳಲ್ಲಿ ನಡೆಸಲಾಗುತ್ತದೆ ಎಂದು ತಿಳಿಸಿರುವುದು ಅತ್ಯಂತ ಶ್ಲಾಘನೀಯ.ಇದರಿಂದ ಕನ್ನಡಿಗರ ಹಲವಾರು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಹದಿನೈದು ಭಾಷೆಗಳ ಪೈಕಿ ಯಾವುದಾದರೂ ಒಂದು ಪರೀಕ್ಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳಬೇಕು,ಅಭ್ಯರ್ಥಿಗಳು ಆಯ್ಕೆ ಮಾಡಿದ ಭಾಷೆಯಲ್ಲಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಶ್ನೆಗಳನ್ನು ನೀಡಲಾಗುತ್ತದೆ ಎಂದು ಹೇಳಿರುವುದು ಸ್ವಾಗತಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ 600 ಚದರಡಿ ನಿವೇಶನ 2 ಕೋಟಿ ರೂ.ಗೆ ಹರಾಜು; ಇದಕ್ಕೆ ತೆರಿಗೆ ಅಧಿಕಾರಿಗಳ ಸ್ಪಷ್ಟನೆ ಬೇಕು

ಮಾನ್ಯರೆ,

ಕಳೆದ ವಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರವು (ಎಂ.ಡಿ.ಎ) ಹರಾಜು ಹಾಕಿದ ವಿಜಯನಗರದ 2ನೇ ಹಂತದ 600 ಚದರಡಿಯ (20X30), ಖಾಲಿ ನಿವೇಶನವು 2 ಕೋಟಿ ರೂಪಾಯಿಗಳ ಬೃಹತ್ ಮೊತ್ತಕ್ಕೆ ಹರಾಜು ಆಗಿರುವುದು ಮೈಸೂರಿನ ನಾಗರಿಕರಿಗೆ ಅಚ್ಚರಿ ಮೂಡಿಸಿದೆ. ಇದರ ಬೆಲೆ, ಒಂದು ಅಡಿಗೆ ರೂ. 34 ಸಾವಿರ ರೂಪಾಯಿಗಳಾಗಿದೆ. ಮೈಸೂರಿನ ಹೃದಯ ಭಾಗದಲ್ಲಿರುವ ಅಶೋಕ ರಸ್ತೆ, ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆಯಲ್ಲೂ ಇಷ್ಟು ದುಬಾರಿ ಬೆಲೆ ಇಲ್ಲದಿರುವಾಗ ಮೈಸೂರಿನಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಬಡಾವಣೆಯ ಈ ನಿವೇಶನಕ್ಕೇಕೆ ಇಷ್ಟೊಂದು ದುಬಾರಿ ಬೆಲೆ ಎಂದು ಸಾರ್ವಜನಿಕರು ತಲೆ ಕೆಡಿಸಿಕೊಂಡಿದ್ದಾರೆ. ಈ ನಿವೇಶನದಲ್ಲೇನಾದರೂ ಚಿನ್ನ ಇದೆಯಾ? ಈ ನಿವೇಶನ ಕೊಂಡುಕೊಂಡಿರುವ ವ್ಯಕ್ತಿಯ ಹಣದ ಮೂಲ ಯಾವುದು? ತಮ್ಮಲ್ಲಿರುವ ಕಪ್ಪು ಹಣವನ್ನು ವೈಟ್ ಮಾಡಲು ಈ ರೀತಿ ಮಾಡಿರಬಹುದೇ ಎಂದು ಸಾರ್ವಜನಿಕರಲ್ಲಿ ಅನುಮಾನವಿದೆ. ಇದಕ್ಕೆ ತೆರಿಗೆ ಅಧಿಕಾರಿಗಳೇ ಸ್ಪಷ್ಟನೆ ನೀಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

■ ರೈತರ ವಿಷಯದಲ್ಲಿ ಚೆಲ್ಲಾಟ ಬೇಡ

ಮಾನ್ಯರೆ,

ಮುಂಗಾರು ಬಿತ್ತನೆಗೆ ಯೂರಿಯಾ ರಸಗೊಬ್ಬರ ಪೂರೈಕೆ ಆಗದ ಕಾರಣ ರೈತ ಸಮುದಾಯ ಕೈ ಚೆಲ್ಲಿ ಕುಳಿತಿದೆ. ಹೀಗಿದ್ದರೂ ಸದನದಲ್ಲಿ ಆಡಳಿತಾರೂಢ ಮತ್ತು ಪ್ರತಿ ಪಕ್ಷದ ಶಾಸಕರು ಪರಸ್ಪರ ಆರೋಪ–ಪ್ರತ್ಯಾರೋಪದಲ್ಲಿಯೇ ಕಾಲಹರಣ ಮಾಡುವುದು ಸರಿಯಲ್ಲ. ರೈತರ ಬಗ್ಗೆ ರಾಜಕೀಯ ಮಾಡುವ ಮುಖಂಡರ ಧೋರಣೆ ಬದಲಾಗುತ್ತಿದೆ. ಅನ್ನದಾತರ ವಿಚಾರದಲ್ಲಿ ಚೆಲ್ಲಾಟವಾಡುವುದು ಶೋಭೆ ತರುವುದಿಲ್ಲ. ಪಕ್ಷಭೇದ ಮರೆತು ಕಸಗೊಬ್ಬರ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಏರಬೇಕಾಗಿದೆ. ಸಕಾಲದಲ್ಲಿ ರಸಗೊಬ್ಬರ ಬಿತ್ತನೆ ಬೀಜ ಪೂರೈಸಿ ರೈತರ ಹಿತ ಕಾಯಬೇಕಾಗಿದೆ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ. ಹೆಚ್.ಡಿ. ಕೋಟೆ ತಾ.

■ ಮಾಸ್ಕ್... ಮ್ಯಾನ್... ಮುಖ...ವಾಡ!!

ಮಾನ್ಯರೆ,

'ಮಾಸ್ಕ್' ಮ್ಯಾನ್‌ನ ಮುಖವಾಡ ಕಳಚಿ ಬಿದ್ದಿದೆ. ಬೆಟ್ಟದಿಂದ ಉರುಳಿ ಬಿದ್ದ ಬಂಡೆ ಯಂತೆ,ಬಯಲಾಯಿತು ಮಾಸ್ಕ್ ಮ್ಯಾನ್ ನ 'ಅಸ್ಥಿ' ಪಂಜರ... ಸಾಲುತ್ತಿಲ್ಲ. ಜೆಸಿಬಿಯಿಂದ ತೋಡಿದ ಆ 17 ಗುಂಡಿಗಳೂ, ಹೂಳಲು ಈ ನಕಲಿ ಮಾಸ್ಕ್ ಧರಿಸಿದ ಅಸ್ಥಿ ಪಂಜರ!! –ಮುಳ್ಳೂರು ಪ್ರಕಾಶ್,. ಕನಕದಾಸನಗರ, ಮೈಸೂರು.

■ ಧರ್ಮೋ ರಕ್ಷತಿ ರಕ್ಷಿತಃ !

ಮಾನ್ಯರೆ,

ನಮ್ಮ ರಾಜ್ಯದ ಅಷ್ಟೇ ಏಕೆ ಇಡೀ ದೇಶದ ಪರಮಪವಿತ್ರ ಯಾತ್ರಾಸ್ಥಳವಾದ ಧರ್ಮಸ್ಥಳದ ಹೆಸರನ್ನು ಕೆಡಿಸಲು ಒಂದು ಗುಂಪು ಮಾಡಿದ ಷಡ್ಯಂತ್ರ ಈಗ ಬಟ್ಟಾ ಬಯಲಾಗಿದೆ. ಸೌಜನ್ಯ ಕೊಲೆ ಪ್ರಕರಣವನ್ನು ಮುಂದಿಟ್ಟುಕೊಂಡು ಧರ್ಮಸ್ಥಳದಲ್ಲಿ ಆಗಬಾರದ್ದೆಲ್ಲಾ ಆಗಿ ಹೋಗಿದೆ ಎಂದು ಕೂಗುಮಾರಿಯಂತೆ ಬಡಿದುಕೊಳ್ಳುತ್ತಿದ್ದ ಗುಂಪು ಈಗ ಇಂಗು ತಿಂದ ಮಂಗನಂತಾಗಿವೆ. ಮುಸುಕುಧಾರಿ ಮನುಷ್ಯನ ನಿಜವಾದ ಬಣ್ಣ ಬಯಲಾಗುವುದರೊಂದಿಗೆ ಆತನ ಹಿಂದಿದ್ದ ಸೂತ್ರಧಾರರೆಲ್ಲಾ ಬೆತ್ತಲುಗೊಂಡಿದ್ದಾರೆ. ನಮ್ಮ ಭಾರತೀಯ ಸನಾತನ ಧರ್ಮದಲ್ಲಿ ಧರ್ಮೋ ರಕ್ಷತಿ ರಕ್ಷಿತ: ಎಂಬ ಪ್ರಸಿದ್ಧವಾದ ಮಾತಿದೆ. ಅದರ ಅರ್ಥ ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮವೇ ರಕ್ಷಿಸುತ್ತದೆ ಎಂಬುದಾಗಿದೆ. ಈಗ ಅದು ತಿರುಗು ಮುರುಗಾಗಿ ಧರ್ಮ(ಸ್ಥಳ) ತನ್ನನ್ನು ತಾನೇ ರಕ್ಷಿಸಿಕೊಂಡಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಭಾರತದ ಆರ್ಥಿಕತೆ ರಕ್ಷಕ ಆರ್‌ಬಿಐ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಏಪ್ರಿಲ್ ತಿಂಗಳಲ್ಲಿ 2024–25ನೇ ಹಣಕಾಸು ವರ್ಷದ ಲಾಭಾಂಶ (ಡಿವಿಡೆಂಡ್) ದಾಖಲೆ ಮೊತ್ತವಾದ 2.7 ಲಕ್ಷ ಕೋಟಿ ರೂ.ಗಳನ್ನು ಸರಕಾರಕ್ಕೆ ನೀಡುವ ಮೂಲಕ ಭಾರಿ ಸುದ್ದಿಯಲ್ಲಿದೆ. 2023–24ರ ವರ್ಗಾಯಿಸಲಾದ ಲಾಭಾಂಶ 2.11 ಲಕ್ಷ ಕೋಟಿ ರೂ.ಗಳಿಗೆ ತುಲನೆ ಮಾಡಿದರೆ 27.4 ಶೇ. ಹೆಚ್ಚಳವಾಗಿದೆ. ಈ ಲಾಭಾಂಶವು ಸರಕಾರದ ಹಣಕಾಸು ಸ್ಥಿತಿಯನ್ನು ಸದೃಢಗೊಳಿಸಲಿದೆ ಹಾಗೂ ವಿಶ್ವದ ನಾಲ್ಕನೇ ಅತೀ ದೊಡ್ಡ ಆರ್ಥಿಕತೆಯ ಇನ್ನಷ್ಟು ಬೆಳವಣಿಗೆಗೆ ಸಹಾಯಕವಾಗಲಿದೆ ಎಂದು ಹಣಕಾಸು ತಜ್ಞರು ಅಭಿಪ್ರಾಯಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ಕೇಂದ್ರೀಯ ಬ್ಯಾಂಕ್. ಈ ಬ್ಯಾಂಕ್ ಕೇಂದ್ರ ಹಣಕಾಸು ಸಚಿವಾಲಯದ ಒಡೆತನ ದಲ್ಲಿದೆ. ದೇಶದ ಪ್ರಮುಖ ಪಾವತಿ ವ್ಯವಸ್ಥೆ, ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಕೆಲಸ ಮಾಡುತ್ತದೆ. ದೇಶದ ಬ್ಯಾಂಕಿಂಗ್ ವ್ಯವಸ್ಥೆ, ದೇಶದ ಕರೆನ್ಸಿಯ (currency) ನಿರ್ವಹಣೆ ಮತ್ತು ನಿಯಂತ್ರಿಸುವ ಸಂಸ್ಥೆಯೂ ಆಗಿದೆ.

ಆರ್‌ಬಿಐಯು ಜನಸಾಮಾನ್ಯರೊಂದಿಗೆ ಠೇವಣಿ ಪಡೆಯುವಂತಹ, ಸಾಲ ನೀಡುವಂತಹ ಯಾವುದೇ ರೀತಿಯ ವ್ಯವಹಾರಗಳನ್ನು ಹೊಂದಿರುವುದಿಲ್ಲ. ಆರ್‌ಬಿಐ ಲಾಭ ಗಳಿಸುವ ಉದ್ದೇಶದಿಂದ ವ್ಯವಹರಿಸುವುದಿಲ್ಲ. ಬದಲಾಗಿ ದೇಶದ ಆರ್ಥಿಕತೆಯಲ್ಲಿ ಸ್ಥಿರತೆ ಮತ್ತು ಬೆಳವಣಿಗೆಗೆ ಪೂರಕವಾದ ನೀತಿಗಳನ್ನು ರೂಪಿಸುವುದು. ಅವಶ್ಯಕ ವಸ್ತುಗಳ ಬೆಲೆ ಮೇಲೆ ನಿಯಂತ್ರಣ. ಸಾಲ ಮತ್ತು ವಿನಿಮಯ ದರಗಳಲ್ಲಿ ಸ್ಥಿರತೆ ಕಾಪಾಡುವುದು, ದೇಶದ ಕರೆನ್ಸಿ ಮುದ್ರಣ, ವಿದೇಶಿ ಕರೆನ್ಸಿಗಳ ದಾಸ್ತಾನು ಹಾಗೂ ಸರಕಾರದ ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವುದು. ಈ ವ್ಯವಹಾರಗಳಿಂದ ಬರುವ ಮಿಗತೆ ಹಣವನ್ನು ಸರಕಾರಕ್ಕೆ ಲಾಭಾಂಶವೆಂದು ವರ್ಗಾಯಿಸುವುದು. ಈ ರೀತಿ ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವ ಆರ್‌ಬಿಐ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾಯಿತು.

ಆರ್‌ಬಿಐನ ಇತಿಹಾಸ–ರಚನೆ

ಪ್ರಥಮ ಮಹಾಯುದ್ಧದ ನಂತರ ಜಗತ್ತಿನಲ್ಲಿ ತೀವ್ರವಾದ ಆರ್ಥಿಕ ಬಿಕ್ಕಟ್ಟು, ಹಿಂಜರಿತ ತಲೆದೋರಿತು. ಈ ಆರ್ಥಿಕ ಬಿಕ್ಕಟ್ಟು ಎದುರಿಸಲು 1926ರಲ್ಲಿ ಹಿಲ್ಟನ್–ಯಂಗ್ ಕಮಿಷನ್ ಎಂದು ಕರೆಯಲ್ಪಡುವ ರಾಯಲ್ ಕಮಿಷನ್ ಆನ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್ ಭಾರತದಲ್ಲಿ ಕೇಂದ್ರೀಯ ಬ್ಯಾಂಕ್ ಸ್ಥಾಪನೆಗೆ ಶಿಫಾರಸು ಮಾಡಿದಾಗಿನಿಂದ ಆರ್‌ಬಿಐ ಇತಿಹಾಸ ಆರಂಭವಾಗುತ್ತದೆ. ಎಂಟು ವರ್ಷಗಳ ಚರ್ಚೆಗಳು, ಶಾಸಕಾಂಗ ಪ್ರಕ್ರಿಯೆಗಳ ನಂತರ, ಆರ್‌ಬಿಐಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಅನ್ವಯ ಸ್ಥಾಪಿಸಲಾಯಿತು. ಇದು ಏಪ್ರಿಲ್ 1, 1935ರಂದು ಬ್ರಿಟಿಷರ ಖಾಸಗಿ ಒಡೆತನದ ಬ್ಯಾಂಕ್ ಆಗಿ ಕಾರ್ಯಾಚರಣೆಯನ್ನು ಆರಂಭಿಸಿತು. ಗಮನಾರ್ಹ ಅಂಶವೆಂದರೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಬರೆದ "ರೂಪಾಯಿ ಸಮಸ್ಯೆ ಅದರ ಮೂಲ ಮತ್ತು ಅದರ ಪರಿಹಾರ" (The problem of the rupee and its origin and its solutions) ಎಂಬ ಪುಸ್ತಕದಲ್ಲಿ ಬರೆದ ಮಾರ್ಗಸೂಚಿಗಳು, ದೃಷ್ಟಿಕೋನಗಳು, ಕಾರ್ಯ ಶೈಲಿಗಳ ಪ್ರಕಾರವೇ ಆರ್‌ಬಿಐಯ ರಚನೆ ಮಾಡಲಾಯಿತು. ದೇಶದ ಆರ್ಥಿಕತೆಯ ವಿಷಯಕ್ಕೆ ಸಂಬಂಧಿಸಿದಂತೆ ಇದು ಡಾ.ಬಿ.ಆರ್.ಅಂಬೇಡ್ಕರ್ ರವರ ದೂರ ದರ್ಶಿತ್ವವನ್ನು ಸೂಚಿಸುತ್ತದೆ. ಸ್ವಾತಂತ್ರ್ಯಾ ನಂತರ ದೇಶಕ್ಕೆ ಸರಕಾರಿ ಸ್ವಾಮಿತ್ವದ ಬ್ಯಾಂಕ್ ಒಂದರ ಅವಶ್ಯಕತೆಯನ್ನು ಮನಗಂಡ ಕೇಂದ್ರ ಸರಕಾರವು ರಿಸರ್ವ್ ಬ್ಯಾಂಕ್ ಅನ್ನು 1949ರ ಜನವರಿ 1ರಂದು ರಾಷ್ಟ್ರೀಕರಿಸಿ ಕೇಂದ್ರ ಬ್ಯಾಂಕ್‌ನ್ನಾಗಿ ಪರಿವರ್ತಿಸಿತು. ಈ ಬ್ಯಾಂಕ್ ದೇಶದ ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳ ಮೇಲೆ ನೇರ ನಿಯಂತ್ರಣ ಹೊಂದಿರುವ ಅಗ್ರಮಾನ್ಯ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ.



> 66
> ಸಮಗ್ರವಾಗಿ ಆರ್‌ಬಿಐಯು ದೇಶದ ಹಣಕಾಸು ವ್ಯವಸ್ಥೆಯ ಅಂತರಾತ್ಮವಾಗಿದೆ. ದೇಶದಲ್ಲಿ ಆರ್ಥಿಕ ಸುಸ್ಥಿರತೆ ದೇಶದ ಬ್ಯಾಂಕಿಂಗ್ ವ್ಯವಸ್ಥೆ ಮೇಲೆ ನಾಗರಿಕರ ವಿಶ್ವಾಸ ಉಳಿಸುವಂತಹ ನೀತಿ–ನಿಯಮಗಳ ರಚನೆ. ಈ ರೀತಿ ದೇಶದಲ್ಲಿ ಸಮಗ್ರ ಆರ್ಥಿಕ ಬೆಳವಣಿಗೆಗೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಸರಿಯಾದ ವ್ಯಾಖ್ಯಾನವೆಂದರೆ ಆರ್‌ಬಿಐ ಭಾರತದ ಆರ್ಥಿಕತೆಯ ರಕ್ಷಕನಂತಿದೆ.

ಆರ್‌ಬಿಐನ ಬಂಡವಾಳ

ಭಾರತೀಯ ರಿಸರ್ವ್ ಬ್ಯಾಂಕ್ ರೂ. 100ರ ಮುಖ ಬೆಲೆಯ 5 ಲಕ್ಷ ಷೇರುಗಳಿಂದ ರೂ. 5 ಕೋಟಿ ಪಾವತಿಯಾದ ಬಂಡವಾಳ ಹೊಂದಿದೆ. ಈ ಎಲ್ಲಾ ಷೇರುಗಳನ್ನು ಕೇಂದ್ರ ಸರಕಾರವೇ ಹೊಂದಿದೆ. ಆರಂಭದಲ್ಲಿ ಆರ್‌ಬಿಐ ಕೇಂದ್ರ ಕಚೇರಿ ಕೊಲ್ಕತ್ತದಲ್ಲಿತ್ತು. ನಂತರ 1937ರಲ್ಲಿ ದೇಶದ ಆರ್ಥಿಕ ರಾಜಧಾನಿ ಎನಿಸಿರುವ ಮುಂಬೈಗೆ ವರ್ಗಾಯಿಸಲಾಯಿತು. 2025ರ ಮಾರ್ಚ್‌ನಲ್ಲಿ ಆರ್‌ಬಿಐಯು 879.59 ಮೆಟ್ರಿಕ್ ಟನ್ ಚಿನ್ನ ಹೊಂದಿತ್ತು. ಈ ದಾಸ್ತಾನು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತೀಯ ಕರೆನ್ಸಿಯಾದ ರೂಪಾಯಿಯ ಅಂತಃಶಕ್ತಿಯಾಗಿದೆ. ಭಾರತೀಯ ನಾಗರಿಕರ ಬಳಿಯೂ ವಿಶ್ವದ ಶೇ.11ರಷ್ಟು ಅಂದರೆ 24ರಿಂದ 25 ಸಾವಿರ ಟನ್‌ನಷ್ಟು ಚಿನ್ನವಿದೆ ಎಂದು ಅಂದಾಜು ಮಾಡಲಾಗಿದೆ.

ಆರ್‌ಬಿಐನ ಲಾಂಛನ

ಆರ್‌ಬಿಐನ ಅಧಿಕೃತ ಲಾಂಛನ ತಾಳೆ ಮರ ಮತ್ತು ಹುಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ತಾಳೆ ಮರ ಮತ್ತು ಸಿಂಹವಿರುವ ಮುದ್ರೆಯಿಂದ ಪ್ರೇರಣೆ ಹೊಂದಿ ಲಾಂಛನದಲ್ಲಿ ತಾಳೆ ಮರ ಮತ್ತು ಹುಲಿಯನ್ನು ಚಿತ್ರಿಸಲಾಗಿದೆ. ಆರ್‌ಬಿಐ ಸರ್ಕಾರಿ ಸಂಸ್ಥೆಯಾದರೂ ನಿರ್ದಿಷ್ಟ ವಿಷಯಗಳಲ್ಲಿ ಪ್ರತ್ಯೇಕ ಅಸ್ತಿತ್ವ ಹೊಂದಿದೆ ಎಂಬುದು ಲಾಂಛನದ ಹಿಂದಿರುವ ಅರ್ಥವಾಗಿದೆ. ವಿನ್ಯಾಸದಲ್ಲಿ ಭಾರತೀಯತೆಯನ್ನು ಪ್ರತಿಬಿಂಬಿಸಲು ಸಿಂಹದ ಬದಲು ರಾಷ್ಟ್ರೀಯ ಮೃಗವಾಗಿರುವ ಹುಲಿಯ ಚಿತ್ರವನ್ನು ಆಯ್ಕೆ ಮಾಡಲಾಯಿತು. ಆರ್‌ಬಿಐನ ಕೊನೆಯ ಬ್ರಿಟಿಷ್ ಗವರ್ನರ್ ಆಗಿದ್ದ ಜೇಮ್ಸ್ ಬ್ರೈಡ್ ಟೇಲರ್‌ರವರಿಗೆ ಮದ್ರಾಸ್ ಮೂಲದ ಸಂಸ್ಥೆಯೊಂದು ರಚಿಸಿದ ವಿನ್ಯಾಸ ಒಪ್ಪಿಗೆಯಾಗಲಿಲ್ಲ. ಆದರೂ 1935 ಫೆಬ್ರವರಿ 23ರಂದು ನಡೆದ ಸಭೆಯಲ್ಲಿ ಲಾಂಛನದ ವಿನ್ಯಾಸಕ್ಕೆ ಒಪ್ಪಿಗೆ ನೀಡಿದರೂ ಮಂಡಲಿಯು ಹುಲಿಯ ರೂಪ ಸ್ವಲ್ಪ ಬದಲಿಸಬೇಕೆಂಬ ಸಲಹೆ ನೀಡಿತು. ಆದರೆ ವಿನ್ಯಾಸಕಾರರು ಸಾಧ್ಯವಿಲ್ಲವೆಂದು ನಿರಾಕರಿಸಿದರು. ಆ ನಂತರ ಟೇಲರ್‌ರವರು ಗವರ್ನಮೆಂಟ್ ಆಫ್ ಇಂಡಿಯಾ ಮಿಂಟ್ ಸಂಸ್ಥೆ ಮತ್ತು ಸೆಕ್ಯೂರಿಟಿ ಪ್ರಿಂಟಿಂಗ್ ಪ್ರೆಸ್ ಹೊಸ ಲಾಂಛನದ ವಿನ್ಯಾಸ ಮಾಡುವುದಾಗಿ ಹೇಳಿ ಕೊಲ್ಕತ್ತಾದ ಬೆಲ್ವೆಡೇರ್ ಪ್ರವೇಶ ದ್ವಾರದಲ್ಲಿದ್ದ ಹುಲಿಯ ಪ್ರತಿಮೆಯ ಫೋಟೋ ತೆಗೆದುಕೊಟ್ಟಿದ್ದರು. ಈ ವಿನ್ಯಾಸವೂ ಟೇಲರ್‌ಗೆ ಒಪ್ಪಿಗೆಯಾಗಲಿಲ್ಲ. ಆದರೆ ಲಾಂಛನವನ್ನು ಮತ್ತೆ ತಿದ್ದಲು ಅವಕಾಶವಿರಲಿಲ್ಲ. ಹಾಗಾಗಿ ಯಾವುದೇ ಬದಲಾವಣೆ ಮತ್ತೆ ಮಾಡದೇ ಇಂದಿನವರೆಗೂ ಅದೇ ಲಾಂಛನ ಮುಂದುವರಿದಿದೆ.

ಆರ್‌ಬಿಐ ರಚನೆ–ಶಾಖೆಗಳು

ಆರ್‌ಬಿಐನ ಆಡಳಿತ, ಆರ್ಥಿಕ ನೀತಿ–ನಿರೂಪಣೆ ಕಾರ್ಯ ಚಟುವಟಿಕೆಗಳನ್ನು 21 ಸದಸ್ಯರ ಕೇಂದ್ರ ನಿರ್ದೇಶಕರ ಮಂಡಲಿ ನಿರ್ವಹಿಸುತ್ತದೆ. ಈ ಮಂಡಲಿಯಲ್ಲಿ ಗವರ್ನರ್, ನಾಲ್ವರು ಉಪ ಗವರ್ನರ್‌ಗಳು, ಇಬ್ಬರು ಹಣಕಾಸು ಸಚಿವಾಲಯದ ಪ್ರತಿನಿಧಿಗಳು, ಹತ್ತು ಸರಕಾರದಿಂದ ನಾಮನಿರ್ದೇಶಿತ ನಿರ್ದೇಶಕರು ಇರುತ್ತಾರೆ. ಇವರೊಂದಿಗೆ ಮುಂಬೈ, ಕೊಲ್ಕತ್ತಾ, ಚೆನ್ನೈ ಮತ್ತು ದೆಹಲಿಯಲ್ಲಿರುವ ನಾಲ್ಕು ಪ್ರಾದೇಶಿಕ ಮಂಡಲಿಗಳ ನಾಲ್ಕು ಪ್ರತಿನಿಧಿಗಳಿರುತ್ತಾರೆ. ಆರ್‌ಬಿಐಯು ಬೆಂಗಳೂರು, ಕಾನ್‌ಪುರ್, ಲಕ್ನೋ, ಹೈದರಾಬಾದ್, ಅಹಮದಾಬಾದ್, ನಾಗಪುರ ಮುಂತಾದೆಡೆ 27 ಪ್ರಾದೇಶಿಕ ಶಾಖೆಗಳನ್ನು ಹೊಂದಿದೆ.

ಆರ್‌ಬಿಐನ ಕಾರ್ಯಗಳು

ಒಂದು ರೂ. ನೋಟು ಮತ್ತು ನಾಣ್ಯಗಳನ್ನು ಕೇಂದ್ರ ಹಣಕಾಸು ಸಚಿವಾಲಯ ಮುದ್ರಿಸಿದರೆ, ಆರ್‌ಬಿಐ ಎರಡು ರೂ. ನೋಟಿನಿಂದ ಎಲ್ಲ ಮುಖಬೆಲೆಯ ನೋಟುಗಳನ್ನು ಛಾಪಿಸಿ ಚಲಾವಣೆಗೆ ತರುತ್ತದೆ. ದೇಶದ ಹಣಕಾಸು ನೀತಿಗಳನ್ನು ರೂಪಿಸಿ ಸಮಗ್ರ ಆರ್ಥಿಕ ಬೆಳವಣಿಗೆ ಹಾಗೂ ಬೆಲೆ ಸ್ಥಿರತೆಗಾಗಿ ಮೇಲ್ವಿಚಾರಣೆ ನಡೆಸುತ್ತದೆ. ದೇಶದ ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳು ಕಾರ್ಯನಿರ್ವಹಿಸಲು ಮಾರ್ಗದರ್ಶಿ ಸೂತ್ರಗಳನ್ನು ರಚಿಸುವುದು. ಈ ಮೂಲಕ ದೇಶದ ಹಣಕಾಸು ಸಂಸ್ಥೆಗಳ ಮೇಲೆ ಜನಸಾಮಾನ್ಯರಿಗಿರುವ ನಂಬಿಕೆಯನ್ನು ಉಳಿಸುವುದು. ವಿದೇಶಿ ವಿನಿಮಯಗಳನ್ನು ನಿರ್ವಹಿಸಿ ವಿದೇಶಿ ಮಾರುಕಟ್ಟೆಯನ್ನು ಕಾಪಾಡುವುದು. ರಾಷ್ಟ್ರೀಯ ಹಿತಾಸಕ್ತಿ ಹಾಗೂ ದೇಶದ ಅಭಿವೃದ್ಧಿಗಾಗಿ ಸೂಕ್ತ ಸ್ಥಳಗಳಲ್ಲಿ ಹೂಡಿಕೆ ಮಾಡುವುದು. ಆರ್‌ಬಿಐಯು ಸರಕಾರದ ಬ್ಯಾಂಕಿಂಗ್ ವ್ಯವಹಾರಗಳನ್ನು ನಿರ್ವಹಿಸುತ್ತದೆ. ವಾಣಿಜ್ಯ ಬ್ಯಾಂಕ್‌ಗಳು ಆರ್‌ಬಿಐನ ಖಾತೆದಾರರಾಗಿದ್ದು, ತಮ್ಮ ಹಣವನ್ನು ಠೇವಣಿ ಇಡುವ ಕೇಂದ್ರ ಬ್ಯಾಂಕ್ ಆಗಿ ಕಾರ್ಯ ನಿರ್ವಹಿಸುತ್ತವೆ. ವಾಣಿಜ್ಯ ಬ್ಯಾಂಕ್‌ಗಳ ನಡುವೆ ನಿಧಿಗಳ ಅಂತರ ಬ್ಯಾಂಕ್ ವರ್ಗಾವಣೆಗೆ ಸಹಾಯ ಮಾಡುತ್ತದೆ.

ವಾಣಿಜ್ಯ ಬ್ಯಾಂಕ್‌ಗಳು ನಗದು ಕೊರತೆಯಾದಾಗ ತಮ್ಮಲ್ಲಿರುವ ಭದ್ರತೆಗಳನ್ನು ಆರ್‌ಬಿಐಗೆ ನೀಡಿ ಹಣವನ್ನು ಎರವಲು ಪಡೆಯುತ್ತವೆ. ಈ ಮೊತ್ತಗಳ ಮೇಲೆ ಆರ್‌ಬಿಐ ವಿಧಿಸುವ ಬಡ್ಡಿ ಪಾವತಿಸಬೇಕಾಗುತ್ತದೆ. ಈ ಬಡ್ಡಿ ದರಕ್ಕೆ ರೆಪೋ ದರ ಎನ್ನುತ್ತಾರೆ. ರೆಪೋ ದರ ಕಡಿಮೆಯಾದರೆ ಆರ್ಥಿಕತೆಯಲ್ಲಿ ಹಣದ ಹರಿವು ಹೆಚ್ಚಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ವೇಗ, ಉತ್ತೇಜನ ಸಿಕ್ಕರೂ ಹಣದುಬ್ಬರದ ಪ್ರಮಾಣ ಹೆಚ್ಚಾಗಿ ಸರಕು ಸೇವೆಗಳ ಬೆಲೆಯಲ್ಲಿ ಹೆಚ್ಚಳವಾಗುವ ಅಪಾಯವೂ ಇದೆ. ರೆಪೋ ದರ ಹೆಚ್ಚಾದರೆ ವಿರುದ್ಧ ಪರಿಣಾಮ ಬೀರುವುದು. ಆದ್ದರಿಂದ ಆರ್‌ಬಿಐಯು ಕಾಲ ಕಾಲಕ್ಕೆ ದೇಶದ ಆರ್ಥಿಕ ಪರಿಸ್ಥಿತಿಗಳನ್ನು ಅವಲೋಕಿಸಿ ರೆಪೋ ದರ ನಿರ್ಧರಿಸುತ್ತದೆ.

ಆರ್‌ಬಿಐ ಆದಾಯದ ಮೂಲಗಳು

ಸಾರ್ವಜನಿಕ ಹಿತದೃಷ್ಟಿಯಿಂದ ಆರ್‌ಬಿಐಯು ಲಾಭ ಗಳಿಸುವ ಉದ್ದೇಶ ಹೊಂದಿಲ್ಲ. ಆದರೆ ಹಣಕಾಸು ಮಾರುಕಟ್ಟೆಗಳಲ್ಲಿ ಸ್ಥಿರತೆಗಾಗಿ ಮಾಡುವ ಕ್ರಮಗಳಿಂದ ಆರ್‌ಬಿಐ ಲಾಭ ಗಳಿಸುತ್ತದೆ. ಆರ್‌ಬಿಐಯು ದೇಶದ ಕರೆನ್ಸಿಯಲ್ಲಿ ಅಸ್ಥಿರತೆ ಉಂಟಾದಾಗ ತನ್ನ ಬಳಿ ಇರುವ ಡಾಲರ್‌ಗಳನ್ನು ಮಾರಾಟ ಮಾಡಿ ಲಾಭ ಗಳಿಸುತ್ತದೆ. ಆರ್‌ಬಿಐ ತಾನು ಸಂಗ್ರಹಿಸಿದ ವಿದೇಶಿ ಕರೆನ್ಸಿಗಳನ್ನು ಇತರ ದೇಶಗಳ ಕೇಂದ್ರೀಯ ಅಥವಾ ವಾಣಿಜ್ಯ ಬ್ಯಾಂಕ್ ಗಳಲ್ಲಿ ಸರಕಾರಿ ಭದ್ರತೆ ರೂಪದಲ್ಲಿ ಹೂಡಿಕೆ ಮಾಡಿ ಲಾಭ ಗಳಿಸುತ್ತದೆ. ಅಮೇರಿಕನ್ ಡಾಲರ್‌ಗಳನ್ನು ಬೆಲೆ ಕಡಿಮೆಯಾದ ಸಂದರ್ಭಗಳಲ್ಲಿ ಖರೀದಿಸಿ ಭವಿಷ್ಯದಲ್ಲಿ ಡಾಲರ್ ಬೆಲೆ ಹೆಚ್ಚಿದಾಗಲೂ ಮಾರಾಟ ಮಾಡಿ ಆದಾಯ ಗಳಿಸುತ್ತದೆ. ಮಾರುಕಟ್ಟೆಯಲ್ಲಿ ದ್ರವ್ಯತೆ (liquidity) ಮತ್ತು ಹಣದುಬ್ಬರ (Inflation) ನಿಯಂತ್ರಿಸಲು ಆರ್‌ಬಿಐಯು ವಾಣಿಜ್ಯ ಬ್ಯಾಂಕ್‌ಗಳಿಗೆ ನೀಡುವ ಅಲ್ಪಾವಧಿ, ದೀರ್ಘಾವಧಿ ಸಾಲಗಳಿಗೆ ಬಡ್ಡಿ ಪಡೆದು ಲಾಭ ಗಳಿಸುತ್ತದೆ. ಕೇಂದ್ರ, ರಾಜ್ಯ ಸರಕಾರಗಳಿಗೆ ನೀಡುವ ಸಾಲಕ್ಕೆ ಆರ್‌ಬಿಐಯು ಬಡ್ಡಿಯನ್ನು ಪಡೆಯುತ್ತದೆ. ಆರ್‌ಬಿಐಯು ಹಣಕಾಸು ಇಲಾಖೆ ಯೊಂದಿಗೆ ಸಮಾಲೋಚಿಸಿ ನೋಟುಗಳನ್ನು ಮುದ್ರಿಸುತ್ತದೆ. ಅತ್ಯಲ್ಪ ವೆಚ್ಚದಲ್ಲಿ ಮುದ್ರಿಸಿದ ಈ ನೋಟುಗಳನ್ನು ಬ್ಯಾಂಕ್‌ಗಳಿಗೆ ವಿತರಿಸುವು ದರಿಂದಲೂ ಆರ್‌ಬಿಐಯು ಭಾರಿ ಲಾಭ ಗಳಿಸುತ್ತದೆ.

ವಿದೇಶಿ ಕೇಂದ್ರೀಯ ಬ್ಯಾಂಕ್‌ಗಳ ಲಾಭ ಗಳಿಕೆ ಮತ್ತು ವಿತರಣೆ

ಅಮೇರಿಕಾ, ಜಪಾನ್, ಚೀನಾದಂತಹ ಜಗತ್ತಿನ ಬೃಹತ್ ಆರ್ಥಿಕ ಶಕ್ತಿಗಳ ಕೇಂದ್ರೀಯ ಬ್ಯಾಂಕ್‌ಗಳು ತಮ್ಮ ಅಡಮಾನ ಪತ್ರಗಳ ಭಾರಿ ಗಾತ್ರದಿಂದ ಹೆಚ್ಚಿನ ಲಾಭ ಗಳಿಸುತ್ತವೆ. ಅಮೇರಿಕದ ಫೆಡ್ ಬ್ಯಾಂಕ್ ತನ್ನ ವಿಶಾಲವಾದ ಖಜಾನೆಯಿಂದ (ಟ್ರೆಝುರಿ) ಆದಾಯ ಗಳಿಸುತ್ತದೆ. ಚೀನಾದ ಕೇಂದ್ರ ಬ್ಯಾಂಕ್ ವಿಶ್ವದ ಅತಿ ದೊಡ್ಡ ಫಾರೆಕ್ಸ್ ಮೀಸಲುಗಳ ನಿರ್ವಹಣೆಯಿಂದ ಲಾಭ ಪಡೆಯುತ್ತದೆ. ಜಪಾನ್‌ನ ಬ್ಯಾಂಕ್ ತನ್ನಲ್ಲಿರುವ ಅಪಾರವಾದ ಹೋಲ್ಡಿಂಗ್‌ಗಳಿಂದ ಲಾಭ ಗಳಿಸುತ್ತದೆ. ಈ ಕೇಂದ್ರ ಬ್ಯಾಂಕ್‌ಗಳು ಆರ್‌ಬಿಐಯಂತೆ ಮಿಗತೆ ಲಾಭವನ್ನು ಆಯಾಯ ಸರಕಾರಗಳಿಗೆ ವರ್ಗಾಯಿಸುತ್ತವೆ.

ಆರ್‌ಬಿಐಯು ಸರಕಾರಕ್ಕೆ ನೀಡುವ ಲಾಭಾಂಶದ ಮಾನದಂಡ

ಬಿಮಲ್ ಜಲಾನ್ ಸಮಿತಿಯು 2018–19ರಲ್ಲಿ ಆರ್‌ಬಿಐನ ಹೆಚ್ಚುವರಿ ವಿತರಣೆಗೆ ಒಂದು ಮಾನದಂಡವನ್ನು ನಿಗದಿಪಡಿಸಿತು. ಎದುರಾಗಬಹುದಾದ ಸಂಭಾವ್ಯ ಅಪಾಯಗಳನ್ನು ಗಮನದಲ್ಲಿಟ್ಟುಕೊಂಡು ಅನಿಶ್ಚಿತ ಅಪಾಯ ಬಫರ್ (contingent risk buffer) ಸಂಕ್ಷಿಪ್ತವಾಗಿ ಸಿಆರ್‌ಬಿಯನ್ನು ಅಡಮಾನ ಪತ್ರದ ಶೇ.5.5ರಿಂದ 6.5ಕ್ಕೆ ನಿಗದಿಪಡಿಸಿತು. ಸಿಆರ್‌ಬಿ ಮಿತಿಯನ್ನು ಪೂರೈಸಿದರೆ ಮಾತ್ರ ಲಾಭಾಂಶವನ್ನು ವರ್ಗಾಯಿಸಬಹುದೆಂಬ ನಿಬಂಧನೆ ವಿಧಿಸಲಾಗಿದೆ. ಈ ಬಾರಿ ಆರ್‌ಬಿಐಯು ಹೆಚ್ಚಾಗಿರುವ ಲಾಭದಲ್ಲಿ ದೊಡ್ಡ ಪಾಲನ್ನು ತನ್ನಲ್ಲಿ ಉಳಿಸಿಕೊಳ್ಳಲು ಸಿಆರ್‌ಬಿ ದರವನ್ನು ಶೇ. 7.5ಕ್ಕೆ ಹೆಚ್ಚಿಸಿದ ನಂತರವೂ ಗಳಿಕೆ ಪ್ರಮಾಣ ಹೆಚ್ಚಿಸಿರುವುದರಿಂದ ಸರಕಾರಕ್ಕೆ ಬಂಪರ್ ಲಾಭಾಂಶದ ಕೊಡುಗೆ ನೀಡಿದೆ. ಈ ಬಾರಿ ವಿದೇಶಿ ವಿನಿಮಯಗಳ ಭಾರಿ ಪ್ರಮಾಣದ ಮಾರಾಟದಿಂದ ಆರ್‌ಬಿಐ ದೊಡ್ಡ ಮೊತ್ತದ ಲಾಭ ಗಳಿಸಿದೆ.

ಸಮಗ್ರವಾಗಿ ಆರ್‌ಬಿಐಯು ದೇಶದ ಹಣಕಾಸು ವ್ಯವಸ್ಥೆಯ ಅಂತರಾತ್ಮವಾಗಿದೆ. ದೇಶದಲ್ಲಿ ಆರ್ಥಿಕ ಸುಸ್ಥಿರತೆ ದೇಶದ ಬ್ಯಾಂಕಿಂಗ್ ವ್ಯವಸ್ಥೆ ಮೇಲೆ ನಾಗರಿಕರ ವಿಶ್ವಾಸ ಉಳಿಸುವಂತಹ ನೀತಿ–ನಿಯಮಗಳ ರಚನೆ. ಈ ರೀತಿ ದೇಶದಲ್ಲಿ ಸಮಗ್ರ ಆರ್ಥಿಕ ಬೆಳವಣಿಗೆಗೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಸರಿಯಾದ ವ್ಯಾಖ್ಯಾನವೆಂದರೆ ಆರ್‌ಬಿಐ ಭಾರತದ ಆರ್ಥಿಕತೆಯ ರಕ್ಷಕನಂತಿದೆ.

ನಾಳೆ ಗೌರಿ–ಗಣೇಶಮೂರ್ತಿ ವಿಸರ್ಜಿಸಲು ಸಂಚಾರಿ ವಿಸರ್ಜನಾ ತೊಟ್ಟಿಗಳ ವ್ಯವಸ್ಥೆ

ಮೈಸೂರು,ಆ.25– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ ಮೈಸೂರು ನಗರದ ವತಿಯಿಂದ ಸ್ವರ್ಣಗೌರಿ ಹಾಗೂ ಗಣೇಶ ಚತುರ್ಥಿ ಹಬ್ಬದ ಆಚರಣೆಯನ್ನು ಪರಿಸರ ಪೂರಕ ನಿಟ್ಟಿನಲ್ಲಿ ಆಚರಿಸುವ ಸಲುವಾಗಿ, ಸಾರ್ವಜನಿಕರಿಗೆ ಅನುಕೂಲವಾಗಲೆಂದು ಗೌರಿ ಮತ್ತು ಗಣೇಶ ಮೂರ್ತಿಗಳನ್ನು ವಿಸರ್ಜಿಸಲು ಸಂಚಾರಿ ವಿಸರ್ಜನಾ ತೊಟ್ಟಿಗಳ ವ್ಯವಸ್ಥೆ ಮಾಡಲಾಗಿದೆ.

ವಾಹನ ಸಂಖ್ಯೆ–1: ಸಂಜೆ 4 ರಿಂದ 5.15 ಗಂಟೆಯವರೆಗೆ ಮೇಟಗಳ್ಳಿ, ಆರಕ್ಷಕ ಠಾಣೆ ಹತ್ತಿರ ನಿಲ್ಲುತ್ತದೆ. ಸಂಜೆ 5.30 ರಿಂದ 6.45ರವರೆಗೆ ಕೆ.ಡಿ.ಸರ್ಕಲ್ ಹತ್ತಿರ, ವಿಜಯನಗರ 2ನೇ ಹಂತ ನಿಲ್ಲುತ್ತದೆ. ಸಂಜೆ 7ರಿಂದ 8.15ರವರೆಗೆ ಒಂಟಿಕೊಪ್ಪಲ್ ಚಂದ್ರಮೌಳೇಶ್ವರ ದೇವಸ್ಥಾನ, ಮಾತೃ ಮಂಡಳಿ ಹತ್ತಿರ ನಿಲ್ಲುತ್ತದೆ. ಸಂಜೆ 8.30ರಿಂದ 10.30ರವರೆಗೆ ಕುಕ್ಕರಳ್ಳಿ ಕೆರೆ ಮುಖ್ಯದ್ವಾರ ಹತ್ತಿರ ನಿಲ್ಲುತ್ತದೆ. ಮಾಹಿತಿಗಾಗಿ ಎ.ಎಂ.ಸಿದ್ದರಾಜ್ಯ ಮೊ: 9880164745 ಸಂಪರ್ಕಿಸಬಹುದು.

ವಾಹನ ಸಂಖ್ಯೆ–2: ಸಂಜೆ 4 ರಿಂದ 5.15ರವರೆಗೆ ಯಾದವಗಿರಿ ವಿಕ್ರಮ್ ಆಸ್ಪತ್ರೆ ಹತ್ತಿರ ನಿಲ್ಲುತ್ತದೆ. ಸಂಜೆ 5.30 ರಿಂದ 6.45ರವರೆಗೆ ಶಾಂತಲಾ ಚಿತ್ರ ಮಂದಿರ ಹತ್ತಿರ ನಿಲ್ಲುತ್ತದೆ. ಸಂಜೆ 7ರಿಂದ 8.15ರವರೆಗೆ ಚಾಮುಂಡಿಪುರಂ ಸರ್ಕಲ್ ಹತ್ತಿರ ನಿಲ್ಲುತ್ತದೆ. ಸಂಜೆ 8.30ರಿಂದ 10.30ರವರೆಗೆ ಕಾರಂಜಿ ಕೆರೆ ಮುಖ್ಯ ದ್ವಾರದ ಹತ್ತಿರ ನಿಲ್ಲುತ್ತದೆ. ಮಾಹಿತಿಗಾಗಿ ಶಿವಣ್ಣ ಮೊ.ನಂ.: 9900479002 ನ್ನು ಸಂಪರ್ಕಿಸಬಹುದು.



ವಾಹನ ಸಂಖ್ಯೆ–3 : ಸಂಜೆ 4 ರಿಂದ 5.15 ರವರೆಗೆ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ ಹತ್ತಿರ ನಿಲ್ಲುತ್ತದೆ. ಸಂಜೆ 5.30ರಿಂದ 6.45ರವರೆಗೆ ಜಯನಗರ ರೈಲ್ವೇ ಗೇಟ್ ಹತ್ತಿರ ನಿಲ್ಲುತ್ತದೆ ಸಂಜೆ 7ರಿಂದ 8.15 ರವರೆಗೆ ಜೆ.ಪಿ.ನಗರ ಗೊಬ್ಬಳ್ಳಿ ಮರದ ನಿಲ್ದಾಣದ ಹತ್ತಿರ ನಿಲ್ಲುತ್ತದೆ. ಸಂಜೆ 8.30 ರಿಂದ 10.30 ಗಂಟೆಯವರೆಗೆ ಲಿಂಗಾಂಬುದಿ ಕೆರೆ ಮುಖ್ಯದ್ವಾರ (ಶ್ರೀರಾಂಪುರ ಮಾರ್ಗವಾಗಿ) ನಿಲ್ಲುತ್ತದೆ. ಲಕ್ಷ್ಮಣ್ .ಹೆಚ್.ಸಿ ಮೊ.:9845307419 ಸಂಪರ್ಕಿಸಿ.

ಪ್ರಧಾನಿ ನರೇಂದ್ರ ಮೋದಿ ಪದವೀಧರರೇ?: ಸಿಐಸಿ ಆದೇಶ ರದ್ದುಗೊಳಿಸಿದ ಹೈಕೋರ್ಟ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರ ಪದವಿಯ ಕುರಿತು ಮಾಹಿತಿ ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ನೀಡಿದ್ದ ಆದೇಶವನ್ನು ದೆಹಲಿ ಹೈಕೋರ್ಟ್ ಸೋಮವಾರ ರದ್ದುಗೊಳಿಸಿದೆ.

ಸಿಐಸಿ ಆದೇಶ ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ(ಡಿಯು) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಸಚಿನ್ ದತ್ತಾ ಅವರು, ಫೆಬ್ರವರಿ 27 ರಂದು ತೀರ್ಪನ್ನು ಕಾಯ್ದಿರಿಸಿದರು. ಇಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಸಚಿನ್ ದತ್ತಾ ಅವರು, ಸಿಐಸಿಯ ಆಕ್ಷೇಪಾರ್ಹ ಆದೇಶವನ್ನು ರದ್ದುಗೊಳಿಸಲಾಗಿದೆ ಎಂದು ಮುಕ್ತ ನ್ಯಾಯಾಲಯದಲ್ಲಿ ಹೇಳಿದರು.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com




ಗೌರಿ-ಗಣೇಶ ಹಬ್ಬದ ಶುಭಾಶಯ

ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ನಿಕಟಪೂರ್ವ ಜಿಲ್ಲಾ ಅಧ್ಯಕ್ಷ ಎಲ್.ಆರ್. ಮಹದೇವ ಸ್ವಾಮಿ ಸೋಮವಾರ ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಯಡಿಯೂರಪ್ಪ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಗೌರಿ-ಗಣೇಶ ಹಬ್ಬದ ಶುಭಾಶಯ ಕೋರಿದರು.

ಬೃಂದಾವನ ಬಡಾವಣೆ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ 1021 ಗಣೇಶನ ಪ್ರತಿಷ್ಠಾಪನೆ





ವಿಶೇಷ ಹಾಗೂ ಅತ್ಯಾಕರ್ಷಕ ವೇದಿಕೆ ನಿರ್ಮಾಣ ಮಾಡಲಾಗಿದೆ.

ಮೈಸೂರು, ಆ.25(ಎಂಕೆ)- ಮೈಸೂರಿನಲ್ಲಿ ಗೌರಿ-ಗಣೇಶ ಹಬ್ಬದ ಸಡಗರ-ಸಂಭ್ರಮ ಮನೆ ಮಾಡುತ್ತಿದ್ದು, ಬೃಂದಾವನ ಬಡಾವಣೆ ಶ್ರೀ ಮಹಾಗಣಪತಿ ದೇವಸ್ಥಾನದ ಆವರಣದಲ್ಲಿ ಬರೋಬ್ಬರಿ '1021 ಗಣೇಶ ಪ್ರತಿಷ್ಠಾಪನೆ' (ವಿಜೃಂಭಣೆಯ ಬೃಂದಾವನ ಗಣೇಶೋತ್ಸವ-2025)ಗೆ ವೇದಿಕೆ ಸಜ್ಜುಗೊಳಿಸಲಾಗಿದೆ.

ಮೈಸೂರು ಬೃಂದಾವನ ಬಡಾವಣೆ ನಾಗರಿಕರ ಹಿತರಕ್ಷಣಾ ವೇದಿಕೆ ವತಿಯಿಂದ ಮೊದಲ ಬಾರಿಗೆ ಭಾರೀ ಸಂಖ್ಯೆಯಲ್ಲಿ ಗಣೇಶ ಪ್ರತಿಷ್ಠಾಪನೆ ಜೊತೆಗೆ ಆ.27ರಿಂದ ಸೆ.4ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.





1 ಅಡಿ ಎತ್ತರದಿಂದ ಹಿಡಿದು ಆರೇಳು ಅಡಿ ಎತ್ತರ ಗಣಪತಿಗಳ ಪ್ರತಿಷ್ಠಾಪನೆಗೆ ಅತ್ಯಾಕರ್ಷಕ ವೇದಿಕೆ ರೂಪಿಸಲಾಗಿದ್ದು, ದೇವಲೋಕದ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಜೊತೆಗೆ ಶಿವಪಾರ್ವತಿ, ಸುಬ್ರಹ್ಮಣ್ಯ ದೇವತೆಯ ಮೂರ್ತಿಗಳು ನಯನ ಮನೋಹರವಾಗಿದ್ದು, ಭಕ್ತಾದಿಗಳ ಕಣ್ಮನ ಸೆಳೆಯುವಂತಿವೆ.

ಆ.27ರ ಬೆಳಗ್ಗೆ 11.48 ರಿಂದ 12.59ಕ್ಕೆ ಸಲ್ಲುವ ಶುಭ ತುಲಾ ಲಗ್ನದಲ್ಲಿ 1021 ಗಣಪತಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನ ಪೂಜೆ ನೆರವೇರಲಿದೆ. ಅದೇ ದಿನ ಸಂಜೆ 6.30ಕ್ಕೆ ಬೃಂದಾವನ ರಂಗ ವೇದಿಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, 7 ಗಂಟೆಗೆ ವೀಣಾ ಪಾಣಿ ಸಂಗೀತ ವಿದ್ಯಾಲಯದಿಂದ ಗಾಯನ ವೈವಿಧ್ಯ ಪ್ರದರ್ಶನವಿರಲಿದೆ. ಆ.28 ರಂದು ಸಂಜೆ 7 ಗಂಟೆಗೆ ಜೋಯಿಸ್ ಕಲಾ ಪ್ರತಿಷ್ಠಾನ ಸಾಂಸ್ಕೃತಿಕ ಸಂಘದಿಂದ ನಾಟ್ಯ ಮಯೂರಿ ಭರತನಾಟ್ಯ ಪ್ರದರ್ಶನ, ಆ.29ರಂದು ಸಂಜೆ 7.30ಕ್ಕೆ ಹೆಸರಾಂತ ಗಾಯಕ ಎ.ಡಿ. ಶ್ರೀನಿವಾಸನ್ ಮತ್ತು ತಂಡದಿಂದ ಭಾವತರಂಗ(ಭಾವಗೀತೆ) ಕಾರ್ಯಕ್ರಮ, ಆ.30ರಂದು ಸಂಜೆ 6.30ಕ್ಕೆ ಫ್ಯಾನ್ಸಿ ಡ್ರೆಸ್ ಮತ್ತು ಮಕ್ಕಳ ನೃತ್ಯ ಪ್ರದರ್ಶನ ಹಾಗೂ ಆ.31ರಂದು ಬೆಳಗ್ಗೆಯಿಂದ ದೇವಸ್ಥಾನದ ಮೂಲಕ ವಿಗ್ರಹಕ್ಕೆ 101 ಲೀಟರ್ ಕ್ಷೀರಾಭಿಷೇಕ, ನಂತರ ಚಿಣ್ಣರ ಮೇಳ ಮತ್ತು ಟಾಂಗಾ ಸವಾರಿ ಏರ್ಪಡಿಸಲಾಗಿದೆ.

ಸೆ.1ರ ಸಂಜೆ 7ಕ್ಕೆ ಗಿಚ್ಚಿ-ಗಿಲಿಗಿಲಿ ಬೃಂದಾವನ ಹಾಸ್ಯ ದರ್ಬಾರ್, ಸೆ.2ರ ಸಂಜೆ 7ಕ್ಕೆ ಗಾನಲಹರಿ, ಸೆ.3ರ ಸಂಜೆ ಗಾನ ವೈಭವ ಹಾಗೂ ಸೆ.4ರಂದು ಸಂಜೆ 5ರಿಂದ 1021 ಗಣಪತಿ ಮೂರ್ತಿಗಳ ವಿಸರ್ಜನಾ ಮೆರವಣಿಗೆ ನಡೆಯಲಿದೆ. ಮಾಹಿತಿಗೆ ಎಂ.ಎಸ್. ಮಹೇಶ್‌ರಾಜೇಅರಸ್ (ಮೊ.984534 0195), ಪ್ರವೀಣ್ ಶೆಟ್ಟಿ (ಮೊ.9845 541317) ಸಂಪರ್ಕಿಸಬಹುದಾಗಿದೆ.

ಅತಿಥಿ ಶಿಕ್ಷಕರಿಗೆ ಕನಿಷ್ಠ ವೇತನ ನಿಗದಿಗೆ ಆಗ್ರಹ

ಮೈಸೂರು, ಆ.25(ಜಿಎ)-ಸರ್ಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 51 ಸಾವಿರ ಅತಿಥಿ ಶಿಕ್ಷಕರಿಗೆ ಕನಿಷ್ಠ ವೇತನ ನಿಗದಿ ಮಾಡಬೇಕೆಂದು ನಡೆದ ಹೋರಾಟದ ಫಲವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಕಡತವನ್ನು ಹಣಕಾಸು ಇಲಾಖೆಗೆ ರವಾನಿಸಿದ್ದಾರೆ. ಈ ಕಡತಕ್ಕೆ ಶೀಘ್ರವೇ ಅನುಮೋದನೆ ನೀಡಬೇಕೆಂದು ಕರ್ನಾಟಕ ರಾಜ್ಯ ಸರ್ವಶಕ್ತಿ ಸಮಿತಿ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಗಜೇಂದ್ರ ಕುಮಾರ್‌ಗೌಡ ಮಾತನಾಡಿ, ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತಿ ಶೀಘ್ರವಾಗಿ ಅತಿಥಿ ಶಿಕ್ಷಕರಿಗೆ ಕನಿಷ್ಠ ವೇತನ, 12 ತಿಂಗಳ ಸೇವೆ ಖಾತರಿ, ಸೇವಾ ಹಿರಿತನ, ಅನುಭವಕ್ಕೆ ಆದ್ಯತೆ ನೀಡುವ ನಿರ್ಧಾರ ಕೈಗೊಳ್ಳಬೇಕು ಎಂದು ಕೋರಿದರು.

ಕನಿಷ್ಠ ಕೂಲಿ ಕಾಯ್ದೆ ಅಡಿಯಲ್ಲಿ ಮಾಸಿಕ 34 ಸಾವಿರ ರೂ. ವೇತನ ನಿಗದಿಪಡಿಸಬೇಕು, ಇವರನ್ನು ಅತಿಥಿ ಶಿಕ್ಷಕ ಎಂಬ ಪದದಿಂದ ಹೊರತುಪಡಿಸಿ, ಸರ್ಕಾರದ ನೇರ ಗುತ್ತಿಗೆ ಶಿಕ್ಷಕರೆಂದು ಪರಿಗಣಿಸಬೇಕು, ನ್ಯಾಯಾಲಯದ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಇಲ್ಲದಿದ್ದರೆ ಸಮಿತಿ ರಾಜ್ಯಾದ್ಯಂತ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಶ್ರೀವಾರಿ ನಾಗರಾಜ್, ಶಿವಶಂಕರ್ ಮತ್ತಿತರರಿದ್ದರು.

ಮಾಸ್ಕ್‌ಮ್ಯಾನ್ ಚಿನ್ನಯ್ಯ, ಸುಜಾತ ಭಟ್ ಮಂಪರು ಪರೀಕ್ಷೆಗೆ ಆಗ್ರಹ

ಮೈಸೂರು,ಆ.25(ಜಿಎ)-ಧರ್ಮಸ್ಥಳದಲ್ಲಿ ಶವ ಶೋಧ ಪ್ರಕರಣದಲ್ಲಿ ಮಾಸ್ಕ್ ಮ್ಯಾನ್ ಚಿನ್ನಯ್ಯ ಹಾಗೂ ಸುಜಾತ ಭಟ್ ಮಂಪರು ಪರೀಕ್ಷೆ ನಡೆಸಬೇಕು ಎಂದು ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ಆಗ್ರಹಿಸಿದೆ.



ಬಿ.ಶಿವಣ್ಣ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಬಿ.ಶಿವಣ್ಣ ಮಾತನಾಡಿ, ಲಕ್ಷಾಂತರ ಜನ ಧರ್ಮಸ್ಥಳ ಮಂಜುನಾಥ ದೇವರ ಭಕ್ತರಿದ್ದಾರೆ. ಆ ದೇವಾಲಯದ ಧರ್ಮಾಧಿಕಾರಿ ವೀರೇಂದ್ರಹೆಗ್ಗಡೆ ಅವರ ಕುರಿತು ಅಪಪ್ರಚಾರ ಮಾಡಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಜನರ ಭಾವನೆಗೆ ಧಕ್ಕೆ ತರುವ ಕೆಲಸ ಮಾಡಿರುವ ಕಾಣದ ಕೈಗಳನ್ನು ಕಂಡು ಹಿಡಿಯಬೇಕು. ಮಂಪರು ಪರೀಕ್ಷೆ ನಡೆಸದಿದ್ದರೆ ಪಾದಯಾತ್ರೆ ಮಾಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಜಯಶ್ರೀ, ಪ್ರದೀಪ್, ಮಾಣಿಕ್ಯಂ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯವರ್ಧಕ ಶಿಬಿರದ ಸಮಾರೋಪ ಸಮಾರಂಭ



ಬೆಂಗಳೂರಿನ ಕಂಪಾನಿಯೋ ಮತ್ತು ಬಸವ ಬಳಗ ಟ್ರಸ್ಟ್ ಸಹಯೋಗದೊಂದಿಗೆ ಮೈಸೂರಿನ ಕೆಸಿಎಮ್ ಫಂಕ್ಷನ್ ಹಾಲ್‌ನಲ್ಲಿ ಆರೋಗ್ಯವರ್ಧಕ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಮೈಸೂರು ಬಸವ ಬಳಗ ಟ್ರಸ್ಟ್ ಅಧ್ಯಕ್ಷ ಎಸ್.ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಕೆಸಿಎಂ ಫಂಕ್ಷನ್‌ಹಾಲ್‌ನ ಮಾಲೀಕ ಗೌತಮ್, ಕಂಪಾನಿಯೋ ಡೈರೆಕ್ಟರ್, ಸೌತ್ ಇಂಡಿಯನ್ ಡಿಸ್ಟ್ರಿಬ್ಯೂಟರ್ ರಾಘವೇಂದ್ರ ಶೆಟ್ಟಿ, ಉಪಾಧ್ಯಕ್ಷರಾದ ಮಹದೇವಸ್ವಾಮಿ, ಶ್ರೀಕಂಠಮೂರ್ತಿ, ಸುಂದರೇಶ್, ಶ್ರೀಮತಿ ವನಿತಾ ಹಾಗೂ ಪದಾಧಿಕಾರಿಗಳು, ಸದಸ್ಯರು ಮುಂತಾದವರು ಉಪಸ್ಥಿತರಿದ್ದರು.

ನೃತ್ಯ ಸ್ಪರ್ಧೆಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ



ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವಿದ್ಯಾರ್ಥಿಗಳು ಮೈಸೂರಿನ ಎಂಎಂಸಿ ಜ್ಯುಬಿಲಿ ಹಾಲ್‌ನಲ್ಲಿ ನಡೆದ ಕರ್ನಾಟಕ ಸ್ಪೋರ್ಟ್ ಡ್ಯಾನ್ಸ್ ಚಾಂಪಿಯನ್‌ಶಿಪ್ 2025ರಲ್ಲಿ ಜಾನಪದ ಮತ್ತು ಶಾಸ್ತ್ರೀಯ ವಿಭಾಗದಲ್ಲಿ 5 ಚಿನ್ನದ ಪದಕ, 3 ಕಂಚಿನ ಪದಕಗಳೊಂದಿಗೆ ಓವರ್ ಆಲ್ ಚಾಂಪಿಯನ್‌ಶಿಪ್ ರನ್ನರ್ ಅಪ್ ಪ್ರಶಸ್ತಿ ಪಡೆದು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಮೇಲೆ ಭಾರೀ ರಿಯಾಯಿತಿ ಮಾರಾಟ



ಮೈಸೂರು: ಮೈಸೂರಿನ ಕುವೆಂಪು ನಗರದ ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಮೇಲೆ ಭಾರಿ ರಿಯಾಯಿತಿ ಮಾರಾಟ ಆರಂಭವಾಗಿದೆ.

ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ-ಶರ್ಟ್ಸ್, ಜಾಕೆಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್ಸ್ ಇಲ್ಲಿ ಲಭ್ಯವಿದೆ. ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ-ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್, ಸೀರೆಗಳು ಇನ್ನೂ ಹಲವಾರು ಬ್ರಾಂಡೆಡ್ ಉತ್ಪನ್ನಗಳು ಲಭ್ಯವಿದೆ. ಮಕ್ಕಳ ಉಡುಪುಗಳು ಸಹ ದೊರೆಯುತ್ತವೆ. ಬ್ರಾಂಡೆಡ್ ಶೂಸ್‌ಗಳು ಭಾರಿ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದೆ. ಈ ಅವಕಾಶ ಆ.31ರವರೆಗೆ ಮಾತ್ರ. ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ. ಆಸಕ್ತರು ಆಫರ್ ಮುಗಿಯುವ ಮುನ್ನ ನಿಮಗಿಷ್ಟವಾದ ಪುರುಷರ ಮತ್ತು ಮಹಿಳೆಯರ ರೆಡಿಮೇಡ್ ಉಡುಪುಗಳು ಮತ್ತು ಸ್ಲಿಪ್ಪರ್ಸ್, ಸ್ಯಾಂಡಲ್ಸ್‌ಗಳನ್ನು ಕಡಿಮೆ ಬೆಲೆಯಲ್ಲಿ ಖರೀದಿಸಿ. ಗ್ರಾಹಕರ ಅನುಕೂಲತೆಗಾಗಿ ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುವುದೆಂದು ಆಯೋಜಕರು ತಿಳಿಸಿದ್ದಾರೆ.

ಚಿನ್ನಯ್ಯನನ್ನು ಮಂಪರು ಪರೀಕ್ಷೆಗೊಳಪಡಿಸಬೇಕು

ಶಾಸಕ ತನ್ವೀರ್ ಸೇಠ್ ಆಗ್ರಹ

- ಧರ್ಮಸ್ಥಳ ಪ್ರಕರಣದಲ್ಲಿ ಯಾರದೋ ಕೈವಾಡವಿದೆ
- ಆರೋಪಿಗಳು ಶಿಕ್ಷೆಯಿಂದ ಪಾರಾಗಬಾರದು
- ಧರ್ಮಸ್ಥಳ ವಿಚಾರದಲ್ಲಿ ರಾಜಕಾರಣ ಮಾಡಬಾರದು
- ಡಿ.ಕೆ.ಶಿವಕುಮಾರ್ ಆರ್‌ಎಸ್‌ಎಸ್ ಗೀತೆ ಹಾಡಿರುವುದರಲ್ಲಿ ತಪ್ಪೇನು?

ಮೈಸೂರು, ಆ.25(ಬಿಎಲ್‌ಯು)-ಧರ್ಮಸ್ಥಳ ವಿಚಾರವಾಗಿ ಎಸ್‌ಐಟಿಯಿಂದ ಬಂಧಿತನಾಗಿರುವ ಚಿನ್ನಯ್ಯನನ್ನು ಮಂಪರು ಪರೀಕ್ಷೆಗೊಳಪಡಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ಆಗ್ರಹಿಸಿದರು.



ತನ್ವೀರ್‌ಸೇಠ್

ಮೈಸೂರಿನಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಯಾರದೋ ಕೈವಾಡವಿದೆ. ಅವರು ಯಾರೇ ಆದರೂ ಶಿಕ್ಷೆ ಆಗಬೇಕು ಎಂದರು. ಸಮಾಜಘಾತುಕರಿಗೆ ಜಾತಿ ಧರ್ಮವಿರುವುದಿಲ್ಲ. ಸಮಾಜಘಾತಕರು ಯಾರೇ ಆಗಿದ್ದರೂ ಅವರಿಗೆ ಶಿಕ್ಷೆ ಆಗಬೇಕು. ಅವರನ್ನು ಶಿಕ್ಷೆಯಿಂದ ಪಾರಾಗಲು ಬಿಡಬಾರದು ಎಂದು ಒತ್ತಾಯಿಸಿದರು.

ದೊಡ್ಡ ಧಾರ್ಮಿಕ ಸಂಸ್ಥೆಯ ವಿರುದ್ಧ ಆರೋಪ ಮಾಡಿದರೆ ಯಾರೂ ದೊಡ್ಡವರಾಗುವುದಿಲ್ಲ. ಇದನ್ನು ಕೆಲವರು ಅರಿತುಕೊಳ್ಳಬೇಕು ಎಂದು ತನ್ವೀರ್ ಸೇಠ್ ಸಲಹೆ ನೀಡಿದರು. ಈ ಪ್ರಕರಣದ ಬಗ್ಗೆ ಯಾರೂ ರಾಜಕಾರಣ ಮಾಡಬಾರದು. ಈಗ ಎಸ್‌ಐಟಿ ತನಿಖೆ ನಡೆಯುತ್ತಿದೆ. ತನಿಖಾ ವರದಿ ಬಾರದೆ ಸರಿ, ತಪ್ಪು ಎಂದು ಪರಾಮರ್ಶೆ ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್ ಗೀತೆ ಹಾಡಿದರೆ ತಪ್ಪೇನು?: ವಿಧಾನ ಸಭಾ ಅಧಿವೇಶನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆರ್‌ಎಸ್‌ಎಸ್ ಗೀತೆ ಹಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ತನ್ವೀರ್ ಸೇಠ್ ಅವರು, ಬೇರೆ ಪಕ್ಷದ ಸಿದ್ಧಾಂತ ಅರ್ಥ ಮಾಡಿಕೊಂಡರೆ ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಸದನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿದ್ದಾರೆ ಎಂಬ ಮಾತ್ರಕ್ಕೆ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಅಥವಾ ಆರ್‌ಎಸ್‌ಎಸ್ ಪರ ಇದ್ದಾರೆ ಎಂಬ ಅರ್ಥವಲ್ಲ. ಯಾರೂ ಕೂಡ ತಮ್ಮ ಪಕ್ಷದ ಸಿದ್ಧಾಂತ ಬಲಿ ಕೊಡುವುದಿಲ್ಲ ಎಂದು ಹೇಳಿದರು.

ಈ ವಿಚಾರವಾಗಿ ಡಿ.ಕೆ.ಶಿವಕುಮಾರ್ ಬಗ್ಗೆ ಮಾಜಿ ಸಚಿವ ರಾಜಣ್ಣ ನೀಡಿರುವ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. ರಾಜಣ್ಣ ಅವರು ಈ ರೀತಿ ಮಾತನಾಡಿ ಈಗ ಸಚಿವ ಸ್ಥಾನ ಕಳೆದುಕೊಂಡು ನಷ್ಟ ಅನುಭವಿಸುತ್ತಿದ್ದಾರೆ ಎಂದು ತನ್ವೀರ್ ಸೇಠ್ ಹೇಳಿದರು.

ಯದುವಂಶ ಮಹಾರಾಜರು ಪಟ್ಟದಲ್ಲಿ ಇಲ್ಲದಾಗ ಹೈದರಾಲಿ, ಟಿಪ್ಪು ದಸರಾ ಮುನ್ನಡೆಸಿದರು

ಯದುವಂಶದ ಮಹಾರಾಜರು ಪಟ್ಟದಲ್ಲಿ ಇಲ್ಲದಿದ್ದಾಗ ಮೈಸೂರು ದಸರಾ ಮುನ್ನಡೆಸಿದ್ದು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಎಂಬುವುದನ್ನು ಮರೆಯಬೇಡಿ ಎಂದು ಶಾಸಕ ತನ್ವೀರ್ ಸೇಠ್ ಬಿಜೆಪಿ ನಾಯಕರಿಗೆ ಸಲಹೆ ನೀಡಿದ್ದಾರೆ. ಈ ಬಾರಿಯ ಮೈಸೂರು ದಸರಾವನ್ನು ಬಾನು ಮುಷ್ತಾಕ್ ಅವರಿಂದ ಉದ್ಘಾಟಿಸುತ್ತಿರುವುದಕ್ಕೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ತನ್ವೀರ್ ಸೇಠ್ ತಿರುಗೇಟು ನೀಡಿದರು.

ವ್ಯಕ್ತಿಯ ಸ್ಥಾನಮಾನ ಗುರುತಿಸಿ ದಸರಾ ಉದ್ಘಾಟನೆಗೆ ಆಹ್ವಾನಿಸುತ್ತೇವೆ. ಸಾಹಿತಿ ಎಸ್.ಎಲ್.ಭೈರಪ್ಪ ಅವರಿಂದ ದಸರಾ ಉದ್ಘಾಟನೆ ಮಾಡಿಸಿದಾಗ ಬಿಜೆಪಿ ನಾಯಕರು ಏಕೆ ಟೀಕೆ ಮಾಡಲಿಲ್ಲ ಎಂದು ಪ್ರಶ್ನಿಸಿದರು.

ತಾಯಿ ಚಾಮುಂಡೇಶ್ವರಿಗೆ ಪೂಜೆ ಮಾಡಿದ ನಂತರವೇ ದಸರಾ ಉದ್ಘಾಟನೆ ಮಾಡಲಾಗುವುದು. ದಸರಾ ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಲ್ಲ. ನನ್ನ ನಂಬಿಕೆ ಏನು ಎಂಬುದನ್ನು ಎಲ್ಲರಿಗೂ ತೋರಿಸಲು ಆಗುವುದಿಲ್ಲ. ಈ ವಿಚಾರವಾಗಿ ಟೀಕೆ ಮಾಡುವವರಿಗೆ ತಾಳ್ಮೆ ಮತ್ತು ಸಾಮಾನ್ಯ ಜ್ಞಾನ ಇರಬೇಕು ಎಂದು ಸಲಹೆ ನೀಡಿದರು. ಬೆಂಕಿಯ ಕಾವು ತೆಗೆದುಕೊಳ್ಳುವ ನೆಪದಲ್ಲಿ ಅದರಲ್ಲಿ ಸುಟ್ಟು ಹೋಗಬೇಡಿ ಎಂದು ತನ್ವೀರ್ ಸೇಠ್ ಅವರು ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ಟಾಂಗ್ ನೀಡಿದರು.

ಆ.31ರಂದು ನುಲಿಯ ಚಂದಯ್ಯ ಜಯಂತಿ

ಮೈಸೂರು,ಆ.25-ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ವತಿಯಿಂದ ನುಲಿಯ ಚಂದಯ್ಯ ಜಯಂತಿಯನ್ನು ಆ.31ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಂಚಗವಿ ಮಠ ಹಾಗೂ ಮುಡಿಗುಂಡ ವಿರಕ್ತ ಮಠದ ಶ್ರೀ ಶ್ರೀಕಂಠ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್, ಶಾಸಕ ಅನಿಲ್‌ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ ಹಾಗೂ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತಿಂದ್ರ ವಿವೇಕಾನುದ ಪಾಲ್ಗೊಳ್ಳಲಿದ್ದಾರೆ



ಅಂಚೆ ಚೀಟಿಗಾಗಿ ಮನವಿ

ಮೈಸೂರಿಗೆ ಆಗಮಿಸಿದ್ದ ಕೇಂದ್ರ ಅಂಚೆ ಇಲಾಖೆಯ, ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಅವರನ್ನು ಸೌಹಾರ್ದ ಭೇಟಿ ಮಾಡಿದ ಸಂಸ್ಕೃತಿ ಚಿಂತಕ ನಂ.ಶ್ರೀಕಂಠಕುಮಾರ್, ಸ್ವಾತಂತ್ರ್ಯ ಹೋರಾಟಗಾರರಾದ ತಗಡೂರು ರಾಮಚಂದ್ರರಾವ್ ಅವರ ಅಂಚೆ ಚೀಟಿ ಬಿಡುಗಡೆಗಾಗಿ ಮನವಿ ಮಾಡಿದರು. ರಾಜ್ಯ ಅಂಚೆ ಇಲಾಖೆ ಕರ್ನಾಟಕ ಸರ್ಕಲ್‌ನಿಂದ ಈಗಾಗಲೇ ಡೈರೆಕ್ಟರ್ ಜನರಲ್, ಕೇಂದ್ರ ಅಂಚೆ ಕಚೇರಿ ನವದೆಹಲಿಗೆ ಶಿಫಾರಸ್ಸಾಗಿದೆ.



ಪದವಿ ಪ್ರದಾನ ಸಮಾರಂಭ

ಮೈಸೂರು ಡಯೋಸಿಷನ್ ಎಜುಕೇಷನ್ ಸೊಸೈಟಿ ವತಿಯಿಂದ ಜಯಲಕ್ಷ್ಮಿಪುರಂನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ ನಡೆಯಿತು. ಈ ವೇಳೆ ಎಂಡಿಇಎಸ್ ಕಾರ್ಯದರ್ಶಿ ಎಡ್ವರ್ಡ್ ಸಾಲ್ಡಾನಾ, ಖಜಾಂಚಿ ನವೀನ್ ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೆಬಿ ಮಾವೇಲಿ, ಪ್ರಿನ್ಸಿಪಾಲ್ ಚಂದ್ರಶೇಖರ ಹೆಚ್.ಎನ್. ಮತ್ತಿತರರು ಉಪಸ್ಥಿತರಿದ್ದರು.

ಆ.28ಕ್ಕೆ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನ

ಮೈಸೂರು, ಆ.25(ಜಿಎ)-ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘವು ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಆ.28ರಂದು ಬೆಳಿಗ್ಗೆ 11.30ಕ್ಕೆ 5ನೇ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನ ಆಯೋಜಿಸಲಾಗಿದೆ ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಗಣಪತಿ ಆಶ್ರಮದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ವಹಿಸಲಿದ್ದಾರೆ. ಸಮ್ಮೇಳನಾಧ್ಯಕ್ಷರಾಗಿ ಎಂ.ಎನ್.ನಾಗರಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಅಧ್ಯಕ್ಷತೆಯನ್ನು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಜಿ.ಎಸ್. ಹೋಮದೇವ ವಹಿಸಲಿದ್ದಾರೆ ಎಂದರು.



ಸುದ್ದಿಗೋಷ್ಠಿಯಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಜಿ.ಎಸ್.ಹೋಮದೇವ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಅನಿಲ್ ಚಿಕ್ಕಮಾದು, ತನ್ವೀರ್ ಸೇಠ್, ಡಿ.ರವಿಶಂಕರ್, ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಹೆಚ್.ವಿಶ್ವನಾಥ್, ಸಿ.ಎನ್. ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಕೆ.ವಿವೇಕಾನಂದ ಭಾಗವಹಿಸಲಿದ್ದಾರೆ.

ಅತಿಥಿಗಳಾಗಿ ಕರ್ನಾಟಕ ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ, ಮಾಜಿ ಸಚಿವ ಎಸ್.ಎ.ರಾಮದಾಸ್, ಮಾಜಿ ಸಂಸದ ಪ್ರತಾಪ್ ಸಿಂಹ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ನಿಕಟಪೂರ್ವ ಅಧ್ಯಕ್ಷರಾದ ಎಸ್.ಟಿ.ರವಿಕುಮಾರ್, ಸಿ.ಕೆ. ಮಹೇಂದ್ರ, ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

'ಮೈಸೂರು ಮಿತ್ರ', ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಕೆ.ಜಿ.ವಿಕ್ರಂ ಮುತ್ತಣ್ಣ, ಆಂದೋಲನ ದಿನಪತ್ರಿಕೆ ಸಂಪಾದಕ ರವಿಕೋಟಿ, ವಿಜಯವಾಣಿ ಸ್ಥಾನಿಕ ಸಂಪಾದಕ ಸತ್ಯನಾರಾಯಣ್, ಕನ್ನಡ ಪ್ರಭ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಕನ್ನಡ ಪ್ರಭ ಮೈಸೂರು ಆವೃತ್ತಿ ಪ್ರಸರಣ ಮುಖ್ಯಸ್ಥ ಎ.ಎನ್.ಅನಂತಮೂರ್ತಿ, ಉದಯವಾಣಿ ಸ್ಥಾನಿಕ ಸಂಪಾದಕ ಚಿಕ್ಕಣ್ಣಗೌಡ, ಪ್ರಜಾವಾಣಿ ಸ್ಥಾನಿಕ ಸಂಪಾದಕ ನರಸಿಂಹಮೂರ್ತಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆ ಸ್ಥಾನಿಕ ಸಂಪಾದಕ ಪ್ರಕಾಶ್, ಸಂಯುಕ್ತ ಕರ್ನಾಟಕ ಸಂಪಾದಕರಾದ ಬಸವರಾಜು, ಎಂ.ಟಿ. ಮಹದೇವ್, ವಿಜಯ ಕರ್ನಾಟಕ ಸ್ಥಾನಿಕ ಸಂಪಾದಕ ರಮೇಶ್ ಉತ್ತಪ್ಪ, ಟೈಮ್ಸ್ ಆಫ್ ಇಂಡಿಯಾ ಸಂಪಾದಕ ಪ್ರತಾಪ್, ಪ್ರಜಾನುಡಿ ಸಂಪಾದಕರಾದ ಸ್ವರೂಪ್, ಕವೀಶ್ ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ 50 ಸಾಧಕ ವಿದ್ಯಾರ್ಥಿಗಳನ್ನು ಹಾಗೂ 6 ಮಂದಿ ಓದುಗರನ್ನು ಸನ್ಮಾನಿಸಲಿದ್ದೇವೆ. ಬೆಳಗ್ಗೆ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದು, ನಂತರ ಉದ್ಘಾಟನಾ ಕಾರ್ಯಕ್ರಮ ಆರಂಭವಾಗಲಿದೆ. ವಿವಿಧ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕೆ.ಶಂಭುಲಿಂಗ, ಎಂ.ಎನ್.ನಾಗರಾಜ್, ರಾಜಶೇಖರ್, ರಾಘವೇಂದ್ರ, ನಾಗೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಎನ್ಐಎ ತನಿಖೆಗೆ ಆಗ್ರಹಿಸಿ ಜಾ.ದಳದಿಂದ ಧರ್ಮಸ್ಥಳ ಚಲೋ

ಪಾಂಡವಪುರ, ಆ.25– ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ದ ಷಡ್ಯಂತರ ನಡೆಸಿದವರ ವಿರುದ್ದ ಸೂಕ್ತಕ್ರಮಕ್ಕೆ ಆಗ್ರಹಿಸಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಕ್ಷೇತ್ರದ ಸಾವಿರಾರು ಕಾರ್ಯಕರ್ತರು ಸೋಮವಾರ ಬೆಳಿಗ್ಗೆ ಧರ್ಮಸ್ಥಳ ಚಲೋ ನಡೆಸಿದರು.

ತಾಲೂಕಿನ ಗಡಿಗ್ರಾಮದ ನಾರ್ಥ್ ಬ್ಯಾಂಕ್–ಕೆಆರ್ಎಸ್ ಬಳಿ ಸೋಮವಾರ ಮಂಜಾನೆ ಹೊರಟ ಧರ್ಮಸ್ಥಳ ಚಲೋಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿ, ಹಿಂದೂ ದೇವಾಲಯಗಳನ್ನೇ ಟಾರ್ಗೇಟ್ ಮಾಡಿ ಅವುಗಳ ವಿರುದ್ದ ಅಪಪ್ರಚಾರ ನಡೆಸಲು ಕೆಲವರು ಷಡ್ಯಂತರ ನಡೆಸಿದ್ದಾರೆ. ಅದೇರೀತಿ ಧರ್ಮಸ್ಥಳ ಕ್ಷೇತ್ರದ ವಿರುದ್ದವು ಷಡ್ಯಂತ್ರ ನಡೆಸಿ ಕ್ಷೇತ್ರದ ಧರ್ಮಾಧಿಕಾರಿ ಗಳಾದ ಡಾ.ವೀರೇಂದ್ರ ಹೆಗ್ಗಡೆ ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಕೆಲಸ ಮಾಡಲಾಗಿದೆ ಎಂದು ಕಿಡಿಕಾರಿದರು.


ಧರ್ಮಸ್ಥಳ ಚಲೋಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಹೆಗ್ಗಡೆ ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ಸಮಾಜದಲ್ಲಿ ಹಲವಾರು ಸಮಾಜ ಮುಖಿ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಂತಹ ವ್ಯಕ್ತಿಗಳ ಆತ್ಮಸ್ಥೈರ್ಯ ಕುಗ್ಗಿಸುವ ಕೃತ್ಯ ನಡೆಸಲಾಗಿದೆ. ಅದಕ್ಕಾಗಿಯೇ ಕ್ಷೇತ್ರದಿಂದ ನೂರಾರು ಕಾರ್ಯಕರ್ತರು, ಮುಖಂಡರೊಂದಿಗೆ ತೆರಳಿ ಅವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಲು ಹೊರಟಿದ್ದೇವೆ ಎಂದರು.

ಧರ್ಮಸ್ಥಳದ ವಿರುದ್ದ ನಡೆದಿರುವ ಷಡ್ಯಂತ್ರದ ವಿರುದ್ದ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶ ಮಾಡಿ ಪ್ರಕರಣದ ವಿರುದ್ದ ಎನ್.ಐ.ಎ ತನಿಖೆ ನಡೆಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಒತ್ತಾಯಿಸಿದರು. ಕೆ.ಆರ್.ಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಎಚ್.ಮಂಜುನಾಥ್ ಸೇರಿದಂತೆ ನೂರಾರು ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ಕ್ರೀಡೆ ಬಾಂಧವ್ಯ ಬೆಸೆಯುವ ಸಾಧನ


ಆರ್‌ಟಿಓ ಮಲ್ಲಿಕಾರ್ಜುನ ಕ್ರೀಡಾಪಟುಗಳಿಗೆ ಶುಭಕೋರಿದರು.

ಕಿಕ್ಕೇರಿ, ಆ.25– ಕ್ರೀಡೆ ಪರಸ್ಪರ ಬಾಂಧವ್ಯ ಬೆಸೆಯುವ ಕೊಂಡಿಯಾಗಿದ್ದು, ಯುವಕರು ಉತ್ತಮ ಕ್ರೀಡಾಪಟುಗಳಾಗಲು ಶ್ರಮಿಸಿ ಎಂದು ಶಾಸಕ ಎಚ್.ಟಿ. ಮಂಜು ಹೇಳಿದರು.

ಇಲ್ಲಿನ ಕೆಪಿಎಸ್ ಕ್ರೀಡಾಂಗಣದಲ್ಲಿ ಕಿಕ್ಕೇರಿ ಪ್ರೀಮಿಯರ್ ಲೀಗ್ ಸೀಸನ್, ಕಿಕ್ಕೇರಮ್ಮ ಕ್ರಿಕೆಟರ್ಸ್ ಆಯೋಜಿಸಿದ್ದ ಮುಕ್ತ ಟೆನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ನೈಜ್ಯ ಪ್ರತಿಭೆಗಳಿರುವ ಹಳ್ಳಿಗಳಲ್ಲಿ ಕ್ರೀಡೆಗೆ ಕನಿಷ್ಟ ಮೂಲ ಸೌಲಭ್ಯ ಸಿಕ್ಕಲ್ಲಿ ದೇಶದ ಕೀರ್ತಿಯನ್ನು ವಿಶ್ವದಲ್ಲಿ ಪರಿಚಯಿಸಲಿದ್ದಾರೆ ಎಂದರು.

ಆರ್‌ಟಿಓ ಅಧಿಕಾರಿ ಸಂಘದ ರಾಜ್ಯಾಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ ಮಾತನಾಡಿ, ಕ್ರೀಡೆ ಜೀವನದ ಉಲ್ಲಾಸ ಆರೋಗ್ಯಕರ ಬೆಳವಣಿಗೆ ಸುವರ್ಣ ಸೇತುವೆಯಾಗಿದೆ. ಹಳ್ಳಿಗಾಡಿನ ಕ್ರೀಡಾಪಟುಗಳಿಗೆ ಸಹಕಾರ ಬೇಕಿದೆ. ಕನಿಷ್ಟ ಹೋಬಳಿ ಮಟ್ಟದಲ್ಲಿ ಉತ್ತಮ ಕ್ರೀಡಾಂಗಣ ಇದ್ದರೆ ಬಹಳ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು. ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್ ಮುಖಂಡರಾದ ಗಿರೀಶ್, ಬೂಕಿನಕೆರೆ ಹಳ್ಳೇಗೌಡ, ಸ್ವಾಮಿ, ಕಡಹೆಮ್ಮಿಗೆ ರಮೇಶ್, ಮಲ್ಲಿಕಾರ್ಜುನ ಅಭಿಮಾನಿ ಸಂಘದ ಅಧ್ಯಕ್ಷ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ವಿಕೃತ ಮನಸ್ಸುಗಳ ನವಗ್ರಹಗಳು ಇಡೀ ದೇಶವನ್ನೇ ಸುತ್ತುತ್ತಿವೆ

ಗೊರುಚ ವಿಷಾದ

ಮಂಡ್ಯ, ಆ.25– ನಮ್ಮ ದೇಶವನ್ನೀಗ ವ್ಯಕ್ತಿಚಾರಿತ್ರ್ಯದ ದಾರಿದ್ರ, ಜಾಗತೀಕರಣದ ಜೂಜು, ಹಣ ಮತ್ತು ಅಧಿಕಾರದ ಹುಚ್ಚು, ಬುದ್ದಿಜೀವಿಗಳ ಮೂರ್ಖತನ, ನೈಸರ್ಗಿಕ ಸಂಪತ್ತಿನ ದುರ್ಬಳಕೆ, ಮತಾಂಧತೆಯ ಮತಿಹೀನತೆ, ರಾಜಕೀಯ ವ್ಯವಸ್ಥೆಯ ಅನಾಯಕತ್ವ, ಧರ್ಮದ ಅಪವ್ಯಾಖ್ಯಾನ ಮತ್ತು ಆಧ್ಯಾತ್ಮಿಕತೆಯ ಅಭಾವ ಎಂಬ ನವಗ್ರಹಗಳು ಸುತ್ತುತ್ತಿವೆ ಎಂದು ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿ ನೆನಪಿನ ಸಂಚಿಕೆ 'ಬೆಲ್ಲದಾರತಿ' ಯನ್ನು ಬೆಲ್ಲದಾರತಿಯೊಂದಿಗೆ ಬಿಡುಗಡೆ ಮಾಡಿ, ಈ ಅನಿಷ್ಟ ನವಗ್ರಹಗಳ ಹಾವಳಿಯಲ್ಲಿ ನಮ್ಮ ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸ್ವಾರ್ಥದ ಸಿಕ್ಕು, ಸ್ಥಾನದ ಸೊಕ್ಕು, ಸೇಡಿನ ಹಠ, ಅಸಹಿಷ್ಣುತೆ, ಭಯೋತ್ಪಾದನೆ, ಭ್ರಷ್ಟಾಚಾರ, ಲೈಂಗಿಕ ಲಾಲಸೆ, ವಿಶ್ವಾಸದ್ರೋಹ ಇತ್ಯಾದಿ ಅವಗುಣಗಳೆಲ್ಲ ತುಂಬಿಕೊಂಡು ಬಿಟ್ಟಿವೆ. ಈಗ ನೆಮ್ಮದಿ ಎಂಬ ಭ್ರಮೆಯಿಂದ ಹೊರಬರಬೇಕಿದೆ ಎಂದರು.


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿ ನೆನಪಿನ ಸಂಚಿಕೆ ಬೆಲ್ಲದಾರತಿಯನ್ನು ಬಿಡುಗಡೆ ಮಾಡುತ್ತಿರುವ ಗಣ್ಯರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಸಾಹಿತ್ಯ ಸಮ್ಮೇಳನದ ಸವಿನೆನಪಿನಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ಸಮ್ಮೇಳನದ ಉಳಿತಾಯ ಹಣ 2.20 ಕೋಟಿ ರೂ ಹಣವನ್ನು ಮೀಸಲಿಡಲಾಗಿದೆ. ಶಾಸಕರಾದ ದಿನೇಶ್ ಗೂಳಿಗೌಡ, ರಮೇಶ್ ಬಂಡಿಸಿದ್ದೇಗೌಡ ಹಾಗೂ ಪಿ.ರವಿಕುಮಾರ ಅವರು ತಲಾ ಒಂದು ಕೋಟಿ ಅನುದಾನ ಕೊಡಲು ಒಪ್ಪಿರುತ್ತಾರೆ. ಒಟ್ಟಾರೆ ಅತ್ಯಾಕರ್ಷಕವಾಗಿ 5 ಕೋಟಿ ರೂ ಅನುದಾನದಲ್ಲಿ ಕನ್ನಡ ಭವನ ನಿರ್ಮಾಣ ಮಾಡಲಾಗುವುದು ಎಂದರು. ಶಾಸಕ ಪಿ.ರವಿಕುಮಾರ್ ಗಣಿಗ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು, ಸ್ಮರಣ ಸಂಚಿಕೆ ಕುರಿತು ಸಾಹಿತಿ ಗಳಾದ ತೈಲೂರು ವೆಂಕಟಕೃಷ್ಣ ಹಾಗೂ ಡಾ.ಮೀರಾ ಶಿವಲಿಂಗಯ್ಯ ಸಂಕ್ಷಿಪ್ತವಾಗಿ ಮಾತನಾಡಿದರು. ಸ್ಮರಣ ಸಂಚಿಕೆ ಹೊರತರಲು ಶ್ರಮಿಸಿದ ಬಿ.ಸಿ.ಶಿವಾನಂದ ಮೂರ್ತಿ, ತೈಲೂರು ವೆಂಕಟ ಕೃಷ್ಣ, ಡಾ.ಚಿಕ್ಕಮರಳಿ ಬೋರೇಗೌಡ, ಮೀರಾ ಶಿವಲಿಂಗಯ್ಯ, ಮಾರಾಮ ಕೃಷ್ಣ, ಜಿ.ಆರ್.ಚಂದ್ರಶೇಖರ್, ಕೋಮಲ್ ಕುಮಾರ್, ಕೃಷ್ಣ ಮೂರ್ತಿ, ಅವರನ್ನು ಗೌರವಿಸಲಾಯಿತು.

ವೇದಿಕೆಯಲ್ಲಿ ಶ್ರೀ ಆದಿಚುಂಚನಗಿರಿ ಮಠ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಓ ಕೆ.ಆರ್.ನಂದಿನಿ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಕಡೆ ಭಾಗಕ್ಕೆ ಸಿಗದ ನೀರು: ಪ್ರತಿಭಟನೆ


ಕಾವೇರಿ ನೀರಾವರಿ ನಿಗಮದ ಇಲಾಖೆ ಕಚೇರಿ ಬಳಿ ರಾಜ್ಯ ರೈತ ಸಂಘದ ನೂರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಮಂಡ್ಯ, ಆ.25– ಈ ವರ್ಷದಲ್ಲಿ ಕೆಆರ್‌ಎಸ್ ಅಣೆಕಟ್ಟೆ ಮೂರು ಬಾರಿ ತುಂಬಿ ಲಕ್ಷಾಂತರ ಕ್ಯೂಸೆಕ್ ನೀರು ನದಿಗೆ ಹರಿದಿದ್ದರೂ ಜಿಲ್ಲೆಯ ಕಡೆಯ ಭಾಗವಾದ ಮದ್ದೂರು ಮತ್ತು ಮಳವಳ್ಳಿಯ ನಾಲೆಗಳು, ಕೆರೆಗಳಿಗೆ ನೀರು ತಲುಪದಿದ್ದಕ್ಕೆ ಆಕ್ರೋಶಗೊಂಡು ನಗರದ ಕಾವೇರಿ ನೀರಾವರಿ ಇಲಾಖೆ ನಿಗಮದ ಕಚೇರಿ ಬಳಿ ಕರ್ನಾಟಕ ರಾಜ್ಯ ರೈತ ಸಂಘದ ನೂರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಸೋಮವಾರ ನಿಗಮಕ್ಕೆ ಮುತ್ತಿಗೆ ಹಾಕಿದ ಮದ್ದೂರು, ಮಳವಳ್ಳಿ ಭಾಗದ ರೈತರಿಗೆ ತಾಲೂಕಿನ ರೈತರ ಮುಖಂಡರು ಸಾಥ್ ನೀಡಿ ರಾಜ್ಯ ಸರ್ಕಾರ, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮದ್ದೂರು, ಮಳವಳ್ಳಿ ಕಡೆಯ ಭಾಗಕ್ಕೆ ನೀರು ಕೊಡದೆ ರೈತರಿಗೆ ಅನ್ಯಾಯ ಮಾಡಲಾಗುತ್ತಿದೆ. ನೀರು ಕೊಡುವ ಸಂದರ್ಭದಲ್ಲಿ ನಾಲೆ ದುರಸ್ತಿ ಕಾರ್ಯ ಮಾಡುತ್ತಿದ್ದಾರೆ. ಎರಡು ಕ್ಷೇತ್ರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ರೈತರ ವಿಚಾರದಲ್ಲಿ ಬೇಜವಾಬ್ದಾರಿ ತೋರುತ್ತಿದ್ದಾರೆ ಎಂದು ವಿವಿಧ ರೈತ ಮುಖಂಡರು ಕಿಡಿಕಾರಿದರು. ಇಂಥ ಸಮಯದಲ್ಲಿ ನಾಲೆ ಕೆಲಸ ಕಾರ್ಯ ಅವಶ್ಯಕತೆ ಇತ್ತೆ? ಮದ್ದೂರು ಶಾಸಕರು ಹೇಳಿದ್ದಾರೆ ಅಂತ ನಾಲೆ ಕಾಮಗಾರಿ ಮಾಡುತ್ತಿದ್ದಾರೆ. ಈ ಸಮಯದಲ್ಲಿ ನಾಟಿ ಕಾರ್ಯ ಮಾಡದಿದ್ದರೆ ಭತ್ತ ಸರಿಯಾಗಿ ಬರಲ್ಲ. ಶಾಸಕರುಗಳಿಗೆ ಇದರ ಕನಿಷ್ಠ ಜ್ಞಾನವಿಲ್ಲ. ರೈತರ ಜೀವ ತೆಗೆಯಲು ಶಾಸಕರೇ ನಿಂತಿರುವುದು ವಿಪರ್ಯಾಸ. ತಕ್ಷಣವೇ ನಾಲೆಗಳಿಗೆ ನೀರು ಬಿಟ್ಟರೆ ಮಾತ್ರ ಪ್ರತಿಭಟನೆ ನಿಲ್ಲಿಸುತ್ತೇವೆ. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮುಖಂಡರಾದ ರವಿಕುಮಾರ್, ಶಂಕರೇಗೌಡ, ಉಮೇಶ್, ವಿನೋದ್‌ಬಾಬು, ಶಂಭೂಗೌಡ, ಲಿಂಗಪ್ಪಾಜಿ, ಬೋರೇಗೌಡ, ಶಿವಲಿಂಗೇಗೌಡ, ಬೊಮ್ಮಲಿಂಗೇಗೌಡ, ನಾಗಲಿಂಗು, ಚಿಕ್ಕಮರಿಗೌಡ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸಮರ್ಪಕ ಕಬ್ಬು ನುರಿಸುವಿಕೆಗೆ ಆಗ್ರಹಿಸಿ ಪ್ರತಿಭಟನೆ

ಮಂಡ್ಯ: ಮೈಶುಗರ್ ಸಕ್ಕರೆ ಕಾರ್ಖಾನೆ ಯಲ್ಲಿ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಸಮರ್ಪಕವಾಗಿ ರೈತರ ಕಬ್ಬನ್ನು ಪಡೆಯದೇ ಕಬ್ಬು ನುರಿಸುವಿಕೆ ಕಾರ್ಯ ಮಾಡುತ್ತಿಲ್ಲವೆಂದು ರೈತ ಸಂಘದ ಕಾರ್ಯಕರ್ತರು ಕಾರ್ಖಾನೆಗೆ ಮುತ್ತಿಗೆ ಹಾಕಿ ಸೋಮವಾರ ಪ್ರತಿಭಟನೆ ನಡೆಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಇಂಡು ವಾಳು ಚಂದ್ರಶೇಖರ್ ಮಾತನಾಡಿ ಮೈಶುಗರ್‌ನಲ್ಲಿ ರೈತರ ಕಬ್ಬನ್ನು ಸಮರ್ಪಕವಾಗಿ ನುರಿಸುತ್ತಿಲ್ಲ. ಡಿಸಿ ಕರೆದಿದ್ದ ಸಭೆಯಲ್ಲಿ 2–4 ಸಾವಿರ ಟನ್ ಕಬ್ಬನ್ನು ನುರಿಸುತ್ತೇವೆ ಎಂದು ಹೇಳಿದ್ದ ಆಡಳಿತ ಮಂಡಳಿ ಸರಿ ಯಾದ ರೀತಿಯಲ್ಲಿ ನುರಿಸುತ್ತಿಲ್ಲ. 13 ತಿಂಗಳು ಕಬ್ಬು ಬೆಳೆದು, ಒತ್ತಾಯ ಪೂರ್ವಕವಾಗಿ ನೀರು ಪಡೆದು ಕಬ್ಬು ಕೊಟ್ಟರೂ ಅದರಲ್ಲಿ ಸಕ್ಕರೆ ಮಾಡಲು ಕಾರ್ಖಾನೆಯವರ ಕೈನಲ್ಲಿ ಆಗುತ್ತಿಲ್ಲ ಎಂದು ಕಿಡಿಕಾರಿದರು.

ಕೋಳಿ ಜೂಜು ಅಡ್ಡೆ ಮೇಲೆ ದಾಳಿ: ಮೂವರ ಬಂಧನ

ಶ್ರೀರಂಗಪಟ್ಟಣ, ಆ.25– ಕೋಳಿ ಜೂಜು ಅಡ್ಡೆ ಮೇಲೆ ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಶ್ರೀರಂಗಪಟ್ಟಣ ಪೊಲೀಸರು ಯಶಸ್ವಿಯಾಗಿದ್ದಾರೆ.

ಆರತಿ ಉಕ್ಕಡದ ಪ್ರದೀಪ್, ಕ್ಯಾತನಹಳ್ಳಿಯ ಗುರುಸ್ವಾಮಿ, ಬೆಳಗೊಳದ ಉಲ್ಲಾಸ್ ಬಂಧಿತ ಆರೋಪಿಗಳು. ಇವರಿಂದ ಜೂಜಾಟಕ್ಕೆ ಬಳಸಿದ್ದ ಕೋಳಿಗಳು, ಪಣಕ್ಕಿಟ್ಟಿದ್ದ 7600 ರೂ., 12 ಬೈಕ್, ಆಟೋ ವಶಪಡಿಸಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿ ಪರಾರಿಯಾಗಿದ್ದು, ಅವರ ಬಂಧನಕ್ಕೆ ಬಲೆ ಬೀಸಿದ್ದಾರೆ.

ತಾಲೂಕಿನ ದೊಡ್ಡೇಗೌಡನಕೊಪ್ಪಲು ಗ್ರಾಮದ ಬಳಿಯ ಕಾವೇರಿ ನದಿ ತೀರದ ಗೌತಮ ಕ್ಷೇತ್ರದ ಬಳಿ ಜೂಜಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಪಾಂಡವಪುರದ ಕುಮಾರ್ ಎಂಬುವರು ಜೂಜು ಆಯೋಜಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಪಿಐ ಬಿ.ಜಿ.ಕುಮಾರ್, ಎಸ್‌ಐ ಜನಭಾಯಿ, ಗಂಗಾಧರ್, ಎಎಸ್‌ಐ ಉದಯ್ ಶಂಕರ್, ಚಂದ್ರು, ಕೃಷ್ಣೇಗೌಡ, ಶ್ರೀನಿವಾಸ್ ಹಾಗೂ ಅಭಿಷೇಕ್ ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಪ್ರಕರಣ ಮುಚ್ಚಿ ಹಾಕುವ ಯತ್ನ

ಒಂದು ವೇಳೆ ಸರ್ಕಾರ ತನ್ನ ನಡವಳಿಕೆಯನ್ನು ಇದೇ ರೀತಿ ಮುಂದುವರಿಸಿದರೆ ಸುಪ್ರೀಂಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗುವುದು ಎಂದರು.

ಕಳೆದ ವರ್ಷ ರಾಜ್ಯ ಹಿಂದೆಂದೂ ಕಂಡು–ಕೇಳರಿಯದ ಬಹುದೊಡ್ಡ ಹಗರಣ ನಡೆದಿದೆ. ನಿಯಮಗಳನ್ನು ಗಾಳಿಗೆ ತೂರಿ 50:50 ರ ಅನುಪಾತದಲ್ಲಿ ನಿವೇಶನಗಳ ಲೂಟಿ ಮಾಡಲಾಗಿದೆ. ಇದೇ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ನೀಡಿದ್ದ 14 ನಿವೇಶನಗಳು ಸೇರಿದ್ದು, ಮುಖ್ಯಮಂತ್ರಿಗಳಿಗೆ ತಮ್ಮ ತಪ್ಪಿನ ಅರಿವಾಗಿ ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ಆದರೆ, ಈ ಸಂಬಂಧ ಯಾವುದೇ ಅಧಿಕಾರಿಯ ವಿರುದ್ಧ ಒಂದೇ ಒಂದು ಕ್ರಮವನ್ನೂ ಜರುಗಿಸಿಲ್ಲ. ಇದೆಲ್ಲವೂ ಮುಖ್ಯಮಂತ್ರಿಗಳ ರಕ್ಷಣೆಗಾಗಿ ನಡೆಸಲಾಗಿದೆ ಎಂಬುದಾಗಿ ಚರ್ಚೆಯಾಗುತ್ತಿದೆ.

ದೇಸಾಯಿ ಆಯೋಗದ ವರದಿ ಏನಾಯ್ತೊ ಗೊತ್ತಿಲ್ಲ. ಲೋಕಾಯುಕ್ತ ಕೊಟ್ಟಿರುವ ಮಧ್ಯಂತರ ವರದಿ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಗೊತ್ತಿಲ್ಲ. ತನಿಖೆ ನಡೆಯುವುದು ಒಂದು ಕಡೆಯಾಗಿದ್ದು, ಸರ್ಕಾರದ ಆಸ್ತಿ ದರೋಡೆಯಾದ ಮೇಲೆ ಅದನ್ನು ವಾಪಸ್ ತರುವ ನಿಟ್ಟಿನಲ್ಲಿ ಸರ್ಕಾರ ಏನೂ ಮಾಡುತ್ತಿದೆ ಎಂದು ಪ್ರಶ್ನಿಸಿದರು.

ತನಿಖೆ ಹಳ್ಳ ಹಿಡಿಯುತ್ತಿದೆ: ಮುಡಾ ಹಗರಣ ಸಂಬಂಧ ಲೋಕಾಯುಕ್ತದ ತನಿಖೆ ಹಾಗೂ ಜನಪ್ರತಿನಿಧಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆಯಾದರೂ ಮುಖ್ಯಮಂತ್ರಿಗಳ ಕುಟುಂಬದ 14 ನಿವೇಶನಗಳತ್ತಲೇ ಈವರೆವಿಗೂ ವಿಷಯ ಕೇಂದ್ರೀಕೃತವಾಗಿದೆಯೇ ಹೊರತು, ಲೂಟಿಯಾದ ಉಳಿದ ನಿವೇಶನಗಳನ್ನು ರಕ್ಷಿಸುವಲ್ಲಿ ಸರ್ಕಾರ ಮುಂದಾದಂತೆ ಕಾಣುತ್ತಿಲ್ಲ. 5,000 ನಿವೇಶನಗಳ ಲೂಟಿಕೋರತನದ ತನಿಖೆ ಹಳ್ಳಹಿಡಿಯುತ್ತಿದೆ ಎಂಬ ಆತಂಕ ಮೈಸೂರಿನ ನಿವೇಶನ ರಹಿತರನ್ನು ಕಾಡುತ್ತಿದೆ. ಇದೇ ರೀತಿಯಾದರೆ, ಮೈಸೂರಿನ ನಿವೇಶನ ರಹಿತ ಬಡವರಿಗೆ ಸೂರು ನೀಡುವುದು ಯಾವಾಗ ಎಂದು ಪ್ರಶ್ನಿಸಿದರು.

ಮೋಸ ಚೆನ್ನಾಗಿ ಮಾಡಿದ್ದಾರೆ: ಜಾರಿ ನಿರ್ದೇಶನಾಲಯ(ಇಡಿ) ಶೇ 50:50 ಅನುಪಾತದ ನಿವೇಶನಗಳನ್ನು ನೋಂದಣಿ ಮಾಡದಂತೆ ಉಪ ನೋಂದಣಿ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಆದರೆ, ಮಂಜೂರಾತಿ ಪತ್ರ ಕೊಡುವಾಗ 50:50 ಎಂದು ನಮೂದಿಸಿ, ಕ್ರಯಪತ್ರ ಕೊಡುವಾಗ 1991ರ ನಿಯಮದಡಿ ಪ್ರೋತ್ಸಾಹದಾಯಕ ಯೋಜನೆ ಎನ್ನುತ್ತಾರೆ. ಆದ್ದರಿಂದ ಸಾರ್ವಜನಿಕರು ಮೋಸ ಹೋಗದ ರೀತಿಯಲ್ಲಿ ಮಾಹಿತಿಯನ್ನು ಕೊಡುವುದು ಅನಿವಾರ್ಯವಾಗಿದೆ. ಇಲ್ಲದಿದ್ದರೆ ಮತ್ತೊಂದು ಹಗರಣದ ಮೂಲಕ ಸಾರ್ವಜನಿಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಕೆಲಸವಾಗುತ್ತದೆ ಎಂದು ಹೇಳಿದರು.

ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಮಹೇಶ್ ಕೇಬಲ್, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಮಾಧ್ಯಮ ಸಹ ಸಂಚಾಲಕ ಸಂತೋಷ್ ಕುಮಾರ್ ಬಿ ಎಂ, ಗ್ರಾಮಾಂತರ ಕಾರ್ಯಾಲಯ ಕಾರ್ಯದರ್ಶಿ ಪಾಪಣ್ಣ ಉಪಸ್ಥಿತರಿದ್ದರು.

ಸೌಲಭ್ಯ ಕೂಡಲೇ ಮರಳಿ ಪಡೆಯಿರಿ

ಅವುಗಳನ್ನು ತೆರವುಗೊಳಿಸಲು ಮುಂದಾಗಿ. ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ 11 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ, ಪ್ರಕರಣಗಳ ಬಗ್ಗೆ ತ್ವರಿತವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತಾಗಬೇಕು.

ಆರೋಪಿಗಳೊಂದಿಗೆ ಪೊಲೀಸರು ಶಾಮೀಲಾಗಿರುವುದು ಕಂಡುಬಂದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಭೆಯಲ್ಲಿ ಎಚ್ಚರಿಸಿದರು. 2023ರಿಂದ ಇಲ್ಲಿಯವರೆಗೆ 6,635 ಪ್ರಕರಣಗಳು ದಾಖಲಾಗಿವೆ, ಇದರಲ್ಲಿ 4,912 ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಮುವತ್ತಾರು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಈ ಹಿಂದೆ ನಡೆದಿರುವ ಪ್ರಕರಣಗಳ ಸ್ಥಿತಿಗತಿ ಏನು, ಆಯಾ ವರ್ಷಗಳಲ್ಲಿ ನಡೆದಿರುವ ಪ್ರಕರಣಗಳ ನಿಖರ ದಾಖಲೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ 33 ವಿಶೇಷ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ, ಇಲ್ಲಿರುವ ಸಿಬ್ಬಂದಿ ಕೊರತೆ ನೀಗಿಸಲಾಗುವುದು.

ದೌರ್ಜನ್ಯ ಪ್ರಕರಣಗಳಲ್ಲಿ ಪ್ರತಿದೂರು ದಾಖಲಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಅಂತಹ ಪ್ರಕರಣಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, ದೂರಿನಲ್ಲಿ ಸತ್ಯಾಂಶ ಇದ್ದರೆ ಮಾತ್ರ ಎಫ್‌ಐಆರ್ ದಾಖಲಿಸಬೇಕೆಂದು ಸೂಚನೆ ನೀಡಿದರು. ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ವಿಷಯದಲ್ಲಿ ಯಾವುದೇ ರಾಜಿ ಇಲ್ಲ, ಸರ್ಕಾರ ದಲಿತರ ಪರವಾಗಿದ್ದು ಸೂಕ್ತ ನ್ಯಾಯ ಒದಗಿಸಲು ಅಡ್ಡಿಯಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳದ ಪರ ನಾವಿದ್ದೇವೆ...

ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದ ಕಾರ್ಯಕರ್ತರನ್ನೊಳಗೊಂಡ ಕಾರುಗಳು ಸೇರ್ಪಡೆಗೊಂಡವು. ಸುಮಾರು 500 ಕಾರುಗಳು ರ‍್ಯಾಲಿಯಲ್ಲಿ ಭಾಗವಹಿಸಿದ್ದು, ಈ ಕಾರುಗಳಲ್ಲಿದ್ದ ಮುಖಂಡರು ಹಾಗೂ ಕಾರ್ಯಕರ್ತರು ಕೆಆರ್ ನಗರದ ತೋಪಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಸಾಲಿಗ್ರಾಮ, ಹರದನಹಳ್ಳಿ, ಅರಕಲಗೂಡು ತಾಲೂಕಿನ ರಾಮನಾಥಪುರ, ಕೊಣನೂರು, ಸದ್ದಾಪುರ, ಬಾಣವಾರ, ಶನಿವಾರ ಸಂತೆ ಕೂಡು ರಸ್ತೆ ಮಾರ್ಗವಾಗಿ ಬಿಸಿಲೆ ಘಾಟ್ ಮೂಲಕ ಧರ್ಮಸ್ಥಳ ತಲುಪಿತು.

ಜೆಡಿಎಸ್ ಕಾರ್ಯಕರ್ತರು ಮೊದಲಿಗೆ ಮಂಜುನಾಥ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಶ್ರೀಕ್ಷೇತ್ರಕ್ಕೆ ಕಳಂಕ ಉಂಟು ಮಾಡಲು ಸಂಚು ರೂಪಿಸುವವರಿಗೆ ಶಿಕ್ಷೆ ನೀಡಬೇಕೆಂದು ಪ್ರಾರ್ಥಿಸಿದರು. ನಂತರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವಿರೇಂದ್ರ ಹೆಗಡೆ ಮತ್ತು ಕುಟುಂಬದವರನ್ನು ಭೇಟಿ ಮಾಡಿ ಫಲತಾಂಬೂಲ ನೀಡಿ, ಗೌರವ ಸಮರ್ಪಿಸಿ ಶ್ರೀಕ್ಷೇತ್ರ ಹಾಗೂ ಧರ್ಮಾಧಿಕಾರಿಗಳ ಕುಟುಂಬಕ್ಕೆ ನೈತಿಕ ಬಲ ತುಂಬಿದರು.

ಪಿತೂರಿ ನಡೆಯುತ್ತಿದೆ: ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಸಾ.ರಾ.ಮಹೇಶ್, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವಿರೇಂದ್ರ ಹೆಗಡೆ ಅವರನ್ನು ಕೇಂದ್ರ ಸರ್ಕಾರ ರಾಜ್ಯಸಭಾ ಸದಸ್ಯರಾಗಿ ನೇಮಕ ಮಾಡಿದ ಹಿನ್ನೆಲೆಯಲ್ಲಿ ಅಂದಿನಿಂದ ಇಂದಿನವರೆಗೂ ಕಾಣದ ಕೈಗಳು ಶ್ರೀಕ್ಷೇತ್ರದ ವಿಚಾರದಲ್ಲಿ ಷಡ್ಯಂತ್ರ ರೂಪಿಸಿ, ತೇಜೋವಧೆ ಮಾಡುತ್ತಿವೆ.

ಸಾರ್ವಜನಿಕರು ಮತ್ತು ಕೆಲವು ರಾಜಕಾರಣಿಗಳು ತಪ್ಪು ಮಾಡಿದಾಗ ಆಣೆ–ಪ್ರಮಾಣ ಮಾಡಲು ಧರ್ಮಸ್ಥಳಕ್ಕೆ ಹೋಗೋಣ ಎನ್ನುತ್ತಿದ್ದರು. ಧರ್ಮಸ್ಥಳ ತನ್ನದೇ ಆದ ಇತಿಹಾಸ, ಪಾವಿತ್ರ್ಯತೆ ಹೊಂದಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯ ಮಾಡಿಕೊಂಡು ಬರುತ್ತಿದೆ. ಅಲ್ಲದೆ ಶೈಕ್ಷಣಿಕ ಮತ್ತು ಅನ್ನದಾಸೋಹದ ಮೂಲಕ ಜಗತ್ತಿನ ಎಲ್ಲರೂ ಒಂದೇ ಎಂಬ ಭಾವನೆಗಳನ್ನು ಹೊಂದಿದೆ ಎಂದರು.

ಮಹಿಳೆಯರಿಗೆ ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ಸಹಾಯ ಮಾಡಿ ಸ್ವಾವಲಂಬಿ ಜೀವನ ನಡೆಸಲು ಸಹಕಾರ ನೀಡುತ್ತಿದೆ. ನೂರಾರು ದೇವಾಲಯಗಳ ಜೀರ್ಣೋದ್ಧಾರಕ್ಕೆ ಆರ್ಥಿಕ ನೆರವು ನೀಡಲಾಗುತ್ತಿದೆ. ಇಂತಹ ಪುಣ್ಯಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಈ ನಿರಾಧಾರ ಆರೋಪದಿಂದ ಧರ್ಮಸ್ಥಳ ಮತ್ತು ಧರ್ಮಾಧಿಕಾರಿಗಳು ಆರೋಪ ಮುಕ್ತರಾಗುತ್ತಾರೆ. ಅನಗತ್ಯ ಮತ್ತು ಅನಾವಶ್ಯಕವಾಗಿ ಹಿಂದೂ ಧರ್ಮವನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಇದೀಗ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ. ತನಿಖೆ ನಡೆಯುತ್ತಿದ್ದು, ಶೀಘ್ರದಲ್ಲೇ ಸತ್ಯಾಸತ್ಯತೆ ಹೊರಬಿದ್ದು ಸತ್ಯಕ್ಕೆ ಜಯ ಸಿಕ್ಕೇ ಸಿಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೊಡ್ಡ ಮಟ್ಟದ ಷಡ್ಯಂತ್ರ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಕಳಂಕ ತರಲು ದೊಡ್ಡ ಮಟ್ಟದಲ್ಲಿ ಪಿತೂರಿ ನಡೆಯುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಧರ್ಮಸ್ಥಳದ ವಿರುದ್ಧ ದೊಡ್ಡ ಷಡ್ಯಂತ್ರ ನಡೆಯುತ್ತಿದೆ ಎಂದಿದ್ದಾರೆ. ಅವರ ಮಾತನ್ನು ನಾವೆಲ್ಲಾ ಒಪ್ಪುತ್ತೇವೆ. ಇಂತಹ ಧಾರ್ಮಿಕ ಕ್ಷೇತ್ರದ ಮೇಲೆ ಕಳಂಕ ತರಲು ಷಡ್ಯಂತ್ರ ಮಾಡಿದವರನ್ನು ಹಾಗೂ ಹಿಂದೂ ಧರ್ಮದ ಬಗ್ಗೆ ಅವಹೇಳನ ಮಾಡುವವರನ್ನು ಬೇರು ಸಮೇತ ಕಿತ್ತು ಹಾಕಬೇಕು.

ಈ ಪ್ರಕರಣದಲ್ಲೆ ಮಾಸ್ಕ್‌ಮ್ಯಾನ್ ಕೇವಲ ಅಸ್ತ್ರವಾಗಿ ಬಳಕೆಯಾಗಿದ್ದು, ಆತನ ಹಿಂದೆ ಇದ್ದು ಷಡ್ಯಂತ್ರ ರೂಪಿಸಿದ ಶಕ್ತಿಗಳನ್ನು ಪತ್ತೆ ಮಾಡಿ, ಕಾನೂನು ಕ್ರಮಕ್ಕೆ ಒಳಪಡಿಸಬೇಕು. ಇನ್ನು ಮುಂದೆ ಧರ್ಮಸ್ಥಳ ಶೀಕ್ಷೇತ್ರದ ವಿರುದ್ಧ ಅಪಪ್ರಚಾರ ಮಾಡುವವರನ್ನು ಯಾವುದೇ ಮುಲಾಜಿಲ್ಲದೇ ಬಂಧಿಸಿ, ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಿದ್ದಲ್ಲದೇ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆಸಿದ ಪಿತೂರಿ ಹಿಂದೆ ಯಾರಿದ್ದಾರೆ ಎಂಬುದರ ಬಗ್ಗೆ ಶೀಘ್ರ ತನಿಖೆ ನಡೆಸಿ, ಅಂತಹ ಕಿಡಿಗೇಡಿಗಳನ್ನು ಬಂಧಿಸುವ ಕೆಲಸ ವಾಗಲಿ. ಧಾರ್ಮಿಕ ಭಾವನೆಗಳಿಗೆ ಮತ್ತು ನಂಬಿಕೆಗೆ ಬೆಂಕಿ ಹಚ್ಚುವ ಕೆಲಸ ಮಾಡಿದ್ದಾರೆ ಹಾಗೂ ಅವರ ಬೆನ್ನೆಲುಬಾಗಿ ಯಾರಿದ್ದಾರೆ ಎಂಬ ಬಗ್ಗೆ ಸರ್ಕಾರ ಸೂಕ್ತ ತನಿಖೆ ಮಾಡಿ ರಾಜ್ಯದ ಜನರಿಗೆ ನ್ಯಾಯ ಒದಗಿಸಬೇಕು ಎಂದರು.

> ನೀವೆಲ್ಲಾ ಇಲ್ಲಿಗೆ ಬಂದು ಶ್ರೀಕ್ಷೇತ್ರ ಹಾಗೂ ನಮ್ಮ ಮೇಲೆ ಪ್ರೀತಿ ಹಾಗೂ ಭಕ್ತಿಯ ಹೊಳೆ ಹರಿಸುತ್ತಿದ್ದೀರಿ. ನನಗೆ ನಿಮ್ಮ ಈ ಪ್ರೀತಿ, ಭಕ್ತಿ ಹೊರಲು ಶಕ್ತಿಯಿಲ್ಲ. ಇದೆಲ್ಲವನ್ನೂ ಶ್ರೀ ಮಂಜುನಾಥಸ್ವಾಮಿಗೆ ಅರ್ಪಿಸುತ್ತಿದ್ದೇನೆ. ಸದ್ಯಕ್ಕೆ ಪ್ರಕರಣದ ಬಗ್ಗೆ ನಾನೂ ಏನನ್ನೂ ಮಾತನಾಡುವುದಿಲ್ಲ. ಸಮಯ ಬಂದಾಗ ಎಲ್ಲವನ್ನೂ ವಿವರಿಸುತ್ತೇನೆ.
>
> – ಡಾ.ವೀರೇಂದ್ರ ಹೆಗಡೆ,
> ಧರ್ಮಸ್ಥಳದ ಧರ್ಮಾಧಿಕಾರಿ.

ರ‍್ಯಾಲಿಯಲ್ಲಿ ಮೈಸೂರು, ಕೆ.ಆರ್.ನಗರ, ಮಾತ್ರವಲ್ಲದೇ ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ನರಸೀಪುರ ಹಾಗೂ ಮಂಡ್ಯದಿಂದಲೂ ಸಾಗರೋಪಾದಿಯಲ್ಲಿ ಭಕ್ತರು ಧರ್ಮಸ್ಥಳಕ್ಕೆ ಆಗಮಿಸಿದ್ದರು.

ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಮಹದೇವ್, ಹೆಚ್.ಡಿ.ಕೋಟೆ ಮುಖಂಡ ಕೃಷ್ಣನಾಯಕ, ಜಿಪಂ ಮಾಜಿ ಸದಸ್ಯ ದ್ವಾರಕೀಶ್, ಎಂ.ಟಿ.ಕುಮಾರ್, ಕೆಆರ್.ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಅಮ್ಮ ಸಂತೋಷ್, ಮಾಜಿ ಮೇಯರ್‌ಗಳಾದ ರವಿಕುಮಾರ್, ಆರ್.ಲಿಂಗಪ್ಪ, ನಗರಪಾಲಿಕೆ ಮಾಜಿ ಸದಸ್ಯರಾದ ಶೋಭ, ಅಶ್ವಿನಿ, ಜೆಡಿಎಸ್ ಮುಖಂಡ ಬೆಳವಾಡಿ ಶಿವಮೂರ್ತಿ, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಕೆಆರ್ ನಗರ ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ಮೆಡಿಕಲ್ ರಾಜಣ್ಣ, ಅಣ್ಣಯ್ಯಶೆಟ್ಟಿ, ರಾಜೇಂದ್ರ, ಜಿಲ್ಲಾ ಜೆಡಿಎಸ್ ಮುಖಂಡರಾದ ಹಳೇಯೂರು ಹೆಚ್.ಕೆ.ಮಧುಚಂದ್ರ, ಎಸ್.ಪಿ.ಆನಂದ್, ಯುವ ಜೆಡಿಎಸ್ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷ ದಾಕ್ಷಾಯಿಣಿ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮೀ, ಕಾರ್ಯದರ್ಶಿ ಭಾಗ್ಯಲಕ್ಷ್ಮೀ, ಜಿಲ್ಲಾ ಜೆಡಿಎಸ್ ಮಹಿಳಾ ಪ್ರಧಾನ ಕಾರ್ಯದರ್ಶಿ ನಂದಿನಿ ರಮೇಶ್, ಪುರಸಭಾ ಸದಸ್ಯ ಸಂತೋಷ್ ಗೌಡ, ಮುಖಂಡರಾದ ಸಿ.ವಿ.ಗುಡಿ ಸಾಗರ್, ಸುನೀಲ್, ಬಾಲಾಜಿ ಗಣೇಶ್, ಸಾತಿಗ್ರಾಮ ಶಂಕರ್, ಡೈರಿ ಮಹೇಶ್, ಡೈರಿ ರಾಜೇಗೌಡ, ರಾಮೇಗೌಡ, ಸಾಲಿಗ್ರಾಮ ಲಾಲೂಸಾಬ್, ಗ್ರಾಪಂ ಮಾಜಿ ಅಧ್ಯಕ್ಷ ಸತೀಶ್, ಸದಸ್ಯ ಹರೀಶ್, ಮುಖಂಡರಾದ ಸಾಲಿಗ್ರಾಮ ಮಹೇಶ್, ತಿಮ್ಮೆಗೌಡ, ಹರದನಹಳ್ಳಿ ರಮೇಶ್, ಬಂಡಹಳ್ಳಿ ಕುಚೇಲ, ರಾಜೇಶ್, ಸಾಲಿಗ್ರಾಮ ನಾಗಣ್ಣ ಸಾ.ರಾ.ಜಲೇಂದ್ರ, ಮೈಸೂರು ರಾಮು, ಪಚ್ಚಿ, ಕೊಪ್ಪಲು ಲೋಕೇಶ್, ಮಂಜು, ಡ್ರೈವರ್ ಸೋಮು, ಗುರು, ಅಂಗರಕ್ಷಕರಾದ ಯುವರಾಜ್, ಗೋಪಾಲ್, ಸೇರಿದಂತೆ ಅನೇಕರ ಭಕ್ತರು ಆಗಮಿಸಿದ್ದರು.

ಒಳ ಮೀಸಲಾತಿಯಡಿ ನೇಮಕಾತಿ ಪ್ರಕ್ರಿಯೆಗೆ ಸರ್ಕಾರದಿಂದ ಅಧಿಕೃತ ಆದೇಶ

ಬೆಂಗಳೂರು, ಆ.25– ಎಸ್ಸಿ ಸಮುದಾಯಕ್ಕೆ ಒಳ ಮೀಸಲಾತಿಯ ಭಾಗ್ಯ ನೀಡಿದ್ದ ಸಿದ್ದರಾಮಯ್ಯ ಸರ್ಕಾರ, ಇದೀಗ ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಿದೆ. ಎಸ್ಸಿ ಒಳಮೀಸಲಾತಿ ಜಾರಿ ಮಾಡಿ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶ ಹೊರಬಿದ್ದಿದೆ

ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಹಂಚಿಕೆ ಮಾಡಿ ಸರ್ಕಾರ ಆದೇಶಿಸಿದ್ದು, ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಶೇ.6, ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಶೇ.6 ಮತ್ತು ಸ್ಪೃಶ್ಯ ಹಾಗೂ ಅಲೆಮಾರಿ ಸಮುದಾಯಕ್ಕೆ ಶೇ.5ರಷ್ಟು ಮೀಸಲಾತಿ ಹಂಚಿಕೆ ಮಾಡಿದ್ದು, ಇದರ ಅನ್ವಯ ನೇಮಕಾತಿ ಪ್ರಕ್ರಿಯೆಗೆ ಸರ್ಕಾರ ಆದೇಶ ನೀಡಿದೆ.

ಯಾರಿಗೆ ಎಷ್ಟು ಮೀಸಲಾತಿ: ಎಡಗೈ ಸಮುದಾಯಕ್ಕೆ ಶೇ.6, ಬಲಗೈ ಸಮುದಾಯಕ್ಕೆ ಶೇ.6, ಲಂಬಾಣಿ, ಭೋವಿ ಕೊರಚ ಕೊರಮ, ಅಲೆ ಮಾರಿ ಸೇರಿದಂತೆ ಇತರೆ ಉಪಪಂಗಡಗಳಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಈ ಹಿಂದೆ ಎಡಗೈ ಸಮುದಾಯಕ್ಕೆ ಶೇ.6, ಬಲಗೈ ಸಮುದಾಯಕ್ಕೆ ಶೇ.5, ಲಂಬಾಣಿ ಭೋವಿ ಸಮುದಾಯಕ್ಕೆ ಶೇ.4, ಅಲೆಮಾರಿಗಳಿಗೆ ಶೇ.1, ಆದಿ ಕರ್ನಾಟಕ, ಅದಿ ದ್ರಾವಿಡ ಸಮುದಾಯಗಳಿಗೆ ಶೇ.1ರಷ್ಟು ಮೀಸಲಾತಿಗೆ ನಾಗಮೋಹನ್ ದಾಸ್ ಆಯೋಗ ಶಿಫಾರಸ್ಸು ಮಾಡಿತ್ತು.

ಎಡಗೈ, ಬಲಗೈ ಸಮುದಾಯದ ಮನವೊಲಿಸಿದ ಸಿಎಂ: ಅಲೆಮಾರಿ, ಆದಿ ಕರ್ನಾಟಕ, ಆದಿ ದ್ರಾವಿಡ ಪಂಗಡಗಳ ಮೀಸಲಾತಿ ನಮಗೆ ಕೊಡಿ ಎಂದು ಬಲಗೈ, ಲಂಬಾಣಿ ಭೋವಿ ಸಮಾಜ ಒತ್ತಾಯಿಸಿದ್ದವು. ಅಂತಿಮವಾಗಿ ಐದು ಪ್ರವರ್ಗಗಳ ಬದಲು ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಿ ಮೀಸಲಾತಿ ಹಂಚಿಕೆ ಮಾಡಲಾಗಿತ್ತು ಈ ಪ್ರಕಾರ ಎಡಗೈ, ಬಲಗೈ ಸಮುದಾಯಗಳಿಗೆ ತಲಾ ಶೇ.6ರಷ್ಟು ಮೀಸಲಾತಿ ಹಂಚಿಕೆ ಮಾಡಲು ಸರ್ಕಾರ ತೀರ್ಮಾನ ಮಾಡಿತ್ತು. ಈ ಮೂಲಕ ಎರಡೂ ಸಮುದಾಯಗಳ ಸಮಾಧಾನಪಡಿಸಿ ಸಿಎಂ ಸಿದ್ದರಾಮಯ್ಯ ಪ್ಲಾನ್ ಮಾಡಿದ್ದರು.

ಧರ್ಮಸ್ಥಳ ಪ್ರಕರಣ ತನಿಖೆ ಮಧ್ಯೆಯೇ ಎಸ್‌ಐಟಿ ಸದಸ್ಯ ಅನುಚೇತ್ ಅಮೆರಿಕ ಪ್ರವಾಸಕ್ಕೆ

ಬೆಂಗಳೂರು, ಆ.25– ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಸದಸ್ಯ, ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್. ಅನುಚೇತ್ ಅವರು ಅಮೆರಿಕ ಪ್ರವಾಸಕ್ಕೆ ತೆರಳಿದ್ದಾರೆ.


ಅನುಚೇತ್

ರಾಜ್ಯ ಸರ್ಕಾರವು ಆ.19ರಿಂದ 31ರವರೆಗೆ ವೇತನ ಸಹಿತ ರಜೆಯನ್ನು ಮಂಜೂರು ಮಾಡಿದ್ದು, ಅನುಚೇತ್ ಅವರು ಆ.18ರಿಂದ ಆರಂಭವಾಗಿರುವ 'ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟೇಷನ್ ಸೊಸೈಟಿ ಆಫ್ ಅಮೆರಿಕ ವರ್ಲ್ಡ್ ಕಾಂಗ್ರೆಸ್–2025'ರಲ್ಲಿ ಭಾಗವಹಿಸಲು ತೆರಳಿದ್ದಾರೆ ಎಂದು ಗೊತ್ತಾಗಿದೆ.

ವೇತನ ಸಹಿತ ರಜೆ ಮಂಜೂರು ಮಾಡುವಂತೆ ಕೋರಿ ಅನುಚೇತ್ ಅವರು ಜುಲೈ 16ರಂದು ಮನವಿ ಸಲ್ಲಿಸಿದ್ದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೂಚನೆಯ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಯವರು ಆ.1ರಂದೇ ಪ್ರವಾಸಕ್ಕೆ ಅನುಮತಿ ನೀಡಿ ಆದೇಶ ಹೊರಡಿಸಿದ್ದರು. ಅನುಚೇತ್ ಅವರು ಆ.18 ರಂದೇ ಅಮೆರಿಕಕ್ಕೆ ತೆರಳಿದ್ದಾರೆ. ಸೆ.3 ಅಥವಾ 4ರಂದು ವಾಪಸ್ ಬರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹುಟ್ಟುಹಬ್ಬದ ಶುಭಾಶಯ...


ಮೈಸೂರಿನ ಪಡುವಾರಳ್ಳಿಯ ಯಜಮಾನರೂ ಆದ ಹಿರಿಯ ಮುಖಂಡರು ತಿಮ್ಮೇಗೌಡರ 73ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಬಿಜೆಪಿ ಮುಖಂಡ ಸಂಜೀವಿನಿ ಕುಮಾರ್, ಕಂಟ್ರಾಕ್ಟರ್ ಸೋಮಣ್ಣ, ಫಾಲ್ಕನ್ ಮಾದೇಗೌಡ, ದೇವೇಗೌಡ, ಕುಮಾರ್, ರಾಜಣ್ಣ ಇತರರು ಸೋಮವಾರ ಅಭಿನಂದಿಸಿದರು.

ಅಂತರರಾಜ್ಯ ಅಥ್ಲೆಟಿಕ್ಸ್ 4x400 ಮೀ. ರಿಲೇಯಲ್ಲಿ ಕರ್ನಾಟಕಕ್ಕೆ ಚಿನ್ನ

ಬೆಂಗಳೂರು: ಪಿ.ಆರ್.ಪೂವಮ್ಮ, ದಿಶಾ ಎ., ದೀಕ್ಷಿತಾ ಗೌಡ ಹಾಗೂ ಪ್ರಿಯಾ ಮೋಹನ್ ಅವರಿದ್ದ ಕರ್ನಾಟಕ ತಂಡವು ಚೆನ್ನೈನಲ್ಲಿ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 4x400 ಮೀ. ರಿಲೇ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು. ಆದರೆ, ಪುರುಷರ ತಂಡವು ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು. ಮಹಿಳೆಯರ ಹೈಜಂಪ್‌ನಲ್ಲಿ ಪಲ್ಲವಿ ಪಾಟೀಲ ಹಾಗೂ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಎಸ್. ಲೋಕೇಶ್ ಬೆಳ್ಳಿ ಪದಕವನ್ನು ಗೆದ್ದುಕೊಂಡರು.

ಎಸ್‌ಐಟಿ ರಚನೆಯಿಂದ ಧರ್ಮಸ್ಥಳ ಕಳಂಕರಹಿತ ಕ್ಷೇತ್ರವೆಂದು ಸಾಬೀತು

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ



ಕೆ.ಹರೀಶ್‌ಗೌಡ

ಮೈಸೂರು,ಆ.25(ಜಿಎ)–ಧರ್ಮಸ್ಥಳ ಪ್ರಕರಣದಲ್ಲಿ ಸರ್ಕಾರ ಎಸ್‌ಐಟಿ ರಚನೆ ಮಾಡಿರುವುದರಿಂದ ಧರ್ಮಸ್ಥಳ ಕಳಂಕರಹಿತ ಕ್ಷೇತ್ರ ಎಂದು ಸಾಬೀತಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದಲ್ಲಿ ಸೌಜನ್ಯ ಪ್ರಕರಣ ಬಿಟ್ಟು ಬೇರೆ ಎಲ್ಲ ಪ್ರಕರಣದಲ್ಲಿ ಷಡ್ಯಂತ್ರವಾಗಿದೆ. ಹೆಣ್ಣು ಮಗಳ ಕೊಲೆಯಾಗಿರುವುದನ್ನು ಖಂಡಿಸುತ್ತೇನೆ. ಕೊಲೆ ಮಾಡಿರುವವರಿಗೆ ಭಗವಂತ, ನ್ಯಾಯಾಲಯವೂ ಶಿಕ್ಷೆ ನೀಡುತ್ತದೆ. ಧರ್ಮಸ್ಥಳ ಪ್ರಮುಖವಾದ ಶ್ರದ್ಧಾಕೇಂದ್ರವಾಗಿರುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ದಿಟ್ಟ ನಿರ್ಧಾರ ತೆಗೆದುಕೊಂಡು ಎಸ್‌ಐಟಿ ರಚನೆ ಮಾಡುವ ಮೂಲಕ ಕಳಂಕರಹಿತ ಕ್ಷೇತ್ರ ಎಂದು ಸಾಬೀತುಪಡಿಸುತ್ತಿದೆ. ಬಿಜೆಪಿಯವರು ಸುಮ್ಮನೆ ಬಾಯಿ ಬಡಿದುಕೊಳ್ಳುತ್ತಿದ್ದರು. ಈಗ ಎಸ್‌ಐಟಿ ರಚನೆ ಮಾಡಿರುವುದು ತಪ್ಪು ಎಂದು ಹೇಳುತ್ತಿದ್ದಾರೆ. ಆದರೆ, ಎಸ್‌ಐಟಿ ರಚನೆ ಮಾಡದಿದ್ದರೆ ಧರ್ಮಸ್ಥಳ ಕಳಂಕಿತ ಕ್ಷೇತ್ರವಾಗಿ ಉಳಿದುಕೊಳ್ಳುತ್ತಿತ್ತು.

ಧರ್ಮಸ್ಥಳಕ್ಕೆ ಎಸ್‌ಐಟಿ ತಂಡ ಭೇಟಿ ನೀಡಿ, ಎಲ್ಲಾ ಆಯಾಮಗಳಲ್ಲಿ ತನಿಖೆ ಮಾಡಿರುವ ಹಿನ್ನೆಲೆಯಲ್ಲಿ ಧರ್ಮಸ್ಥಳದಲ್ಲಿ ಏನೂ ಆಗಿಲ್ಲ ಎಂದು ತಿಳಿಯುತ್ತಿದೆ. ಅದನ್ನು ಮಾಡಿದ್ದು, ನಮ್ಮ ಕಾಂಗ್ರೆಸ್ ಸರ್ಕಾರ. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳ ದಿಟ್ಟ ನಿರ್ಧಾರದಿಂದ ಎಲ್ಲವೂ ಆಗಿದೆ. ಈಗಾಗಲೇ ಮಹೇಶ್ ಶೆಟ್ಟಿ ತಿಮ್ಮರೋಡಿ, ಗಿರೀಶ್ ಮಟ್ಟಣ ನವರು, ಸಮೀರ್ ತನಿಖೆ ಮಾಡುವ ಮೂಲಕ ಪಾರದರ್ಶಕವಾಗಿ ಕೆಲಸ ನಡೆಯುತ್ತಿದೆ. ಅದನ್ನು ಸಹಿಸಿಕೊಳ್ಳದೇ ಬಿಜೆಪಿಯವರು, ವಿಪಕ್ಷವಾಗಿ ಅವರು ಏನು ಮಾಡಬೇಕು ಅದನ್ನು ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಅದಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದರು.

ಪ್ರತಾಪ್ ಸಿಂಹನಿಗೆ ತಲೆ ಇಲ್ಲ

ದಸರಾ ಮಹೋತ್ಸವ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದನ್ನು ಮಾಜಿ ಸಂಸದ ಪ್ರತಾಪ್ ಸಿಂಹ ವಿರೋಧಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಪ್ರತಾಪ್ ಸಿಂಹನಿಗೆ ತಲೆ ಇಲ್ಲ. ನಿಸಾರ್ ಅಹಮ್ಮದ್ ಅವರನ್ನು ಆಯ್ಕೆ ಮಾಡಿದ್ದಾಗ ಇವರೇ ಸಂಸದರಾಗಿದ್ದರು. ಆಗ ಏಕೆ ಕೇಳಲಿಲ್ಲ. ಅವರು ಅನ್ಯಧರ್ಮೀಯರಾಗಿರಲಿಲ್ಲವಾ ಎಂದು ಪ್ರಶ್ನಿಸಿದರು.

ಬಾನು ಮುಷ್ತಾಕ್ ಅವರು ನಮ್ಮ ದೇಶದವರು. ಬೂಕರ್ ಪ್ರಶಸ್ತಿ ಪಡೆದುಕೊಂಡಿರುವವರಿಗೆ ನೀಡುವ ಗೌರವವನ್ನು ಸರ್ಕಾರದಿಂದ ನೀಡಲಾಗುತ್ತಿದೆ. ಚಾಮುಂಡಿ ತಾಯಿಯನ್ನು ಎಲ್ಲರೂ ಭಕ್ತಿಯಿಂದ ನೋಡುತ್ತಾರೆ. ಬಿಜೆಪಿಯವರು ಜಾತಿ, ಭಾಷೆ, ಧರ್ಮದ ವಿರುದ್ಧ ಮಾತನಾಡುವುದೇ ಸಿದ್ಧಾಂತ ಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ಗಣಪತಿ ವಿಸರ್ಜನಾ ಕಾರ್ಯಕ್ರಮಕ್ಕೆ ಆಹ್ವಾನ...



ಮೈಸೂರು ಸಾರ್ವಜನಿಕರ ಗಣೇಶ ವಿಸರ್ಜನಾ ಸಮಿತಿ ವತಿಯಿಂದ ಬೃಹತ್ ಗಣೇಶ ವಿಸರ್ಜನಾ ಮೆರವಣಿಗೆ ಕಾರ್ಯಕ್ರಮಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹರಿಗೆ ಆಹ್ವಾನ ನೀಡಲಾಯಿತು. ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್, ಶ್ರೀನಿವಾಸ್, ಸು.ಮುರುಳಿ, ಮಂಜುನಾಥ್, ದಿನೇಶ್‌ಗೌಡ, ಉಮೇಶ್, ದಿನೇಶ್, ಪರಮೇಶಗೌಡ, ಆನಂದ್, ಸಮಿತಿ ಸದಸ್ಯರು ಹಾಜರಿದ್ದರು.

ಶೇ.50 ರಿಯಾಯ್ತಿಯಲ್ಲಿ ಸಂಚಾರ ದಂಡ ಪಾವತಿಗೆ ಅವಕಾಶ
ಮೊದಲೆರಡು ದಿನದಲ್ಲಿ 55 ಲಕ್ಷ ಸಂಗ್ರಹ

●22154 ಪ್ರಕರಣ ಮುಕ್ತಾಯ ●ದಂಡ ಪಾವತಿಗೆ ಆನ್‌ಲೈನ್, ಕೇಂದ್ರಗಳ ವ್ಯವಸ್ಥೆ



124 ಕೇಸ್ ದಂಡ ಪಾವತಿಸಿದ ವ್ಯಕ್ತಿಗೆ ನೀಡಿದ ರಸೀದಿ ಹಿಡಿದು ನಿಂತಿರುವ ಎನ್.ಆರ್. ಸಂಚಾರ ಠಾಣೆ ಪೊಲೀಸರನ್ನು ಕಾಣಬಹುದು.

ಮೈಸೂರು, ಆ.25(ಆರ್‌ಕೆ, ಎಂಕೆ)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡದ ಮೊತ್ತ ಪಾವತಿಗೆ ರಾಜ್ಯ ಸರ್ಕಾರದಿಂದ ಶೇ.50 ರಷ್ಟು ರಿಯಾಯ್ತಿ ಘೋಷಣೆಯಾದ ಮೊದಲ ಎರಡು ದಿನ ಮೈಸೂರಿನಲ್ಲಿ 55 ಲಕ್ಷ ರೂ. ದಂಡ ಪಾವತಿಯಾಗಿದ್ದು, 22,154 ಪ್ರಕರಣಗಳು ಇತ್ಯರ್ಥಗೊಂಡಂತಾಗಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡ 400 ಕೋಟಿ ರೂ.ಗಳ ವಸೂಲಿ ಹಿನ್ನೆಲೆಯಲ್ಲಿ ಆ.23 ರಿಂದ ಸೆ.12ರವರೆಗೆ ಶೇ.50ರಷ್ಟು ರಿಯಾಯ್ತಿಯೊಂದಿಗೆ ದಂಡ ಪಾವತಿ ಮಾಡಲು ರಾಜ್ಯ ಸರ್ಕಾರ ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ವಸೂಲಿ ಕಾರ್ಯಾಚರಣೆ ಚುರುಕುಗೊಳಿಸಿರುವ ಮೈಸೂರು ಪೊಲೀಸರು, ಮೊದಲ ದಿನ(ಆ.23) 33,89,900 ರೂ. ಹಾಗೂ 2ನೇ ದಿನ 21,11,700 ರೂ. ಸೇರಿ ಒಟ್ಟು 55,01,600 ರೂ. ದಂಡ ವಸೂಲಿ ಮಾಡಿ ಒಟ್ಟಾರೆ 22,154 ಪ್ರಕರಣಗಳನ್ನು ಇತ್ಯರ್ಥಗೊಳಿಸಿದ್ದಾರೆ.

ಎನ್‌ಆರ್‌ನಲ್ಲೇ ಹೆಚ್ಚು: ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅತೀ ಹೆಚ್ಚು ದಂಡ ವಸೂಲಿಯಾಗಿದ್ದು, 8,922 ಪ್ರಕರಣಗಳಲ್ಲಿ 21,06,700 ರೂ. ಬಾಕಿ ದಂಡ ವಸೂಲಿಯಾಗಿದೆ. ಅದೇ ರೀತಿ ದೇವರಾಜ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 3291 ಪ್ರಕರಣಗಳಲ್ಲಿ 7,46,100 ರೂ., ದಂಡ ವಸೂಲಿಯಾದರೆ, ಕೃಷ್ಣರಾಜ ಸಂಚಾರ ಠಾಣೆ ವ್ಯಾಪ್ತಿಯಲ್ಲಿ 4692 ಪ್ರಕರಣಗಳಲ್ಲಿ 10,86,800 ರೂ., ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 1,468 ಪ್ರಕರಣಗಳಲ್ಲಿ 3,91,150 ರೂ., ವಿವಿಪುರಂ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 3,312 ಪ್ರಕರಣಗಳಲ್ಲಿ 8,34,600 ರೂ. ಹಾಗೆಯೇ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್(ಟಿಎಂಸಿ)ಗಳಲ್ಲಿ 1,407 ಪ್ರಕರಣಗಳಿಂದ 3,36,250 ರೂ. ದಂಡ ವಸೂಲಿ ಮಾಡಲಾಗಿದೆ.

ಆನ್‌ಲೈನ್‌ನಲ್ಲೂ ಪಾವತಿಗೆ ಅವಕಾಶ: ಸಂಚಾರ ಪೊಲೀಸ್ ಠಾಣೆ ಹಾಗೂ ದಂಡ ಪಾವತಿ ಕೇಂದ್ರಗಳಿಗೆ ಭೇಟಿ ನೀಡಲು ಸಾಧ್ಯವಾಗದವರಿಗೆ, ಕರ್ನಾಟಕ ಒನ್ https://www.karnatakaone.gov.in/. ಕರ್ನಾಟಕ ಪೊಲೀಸ್ ವೆಬ್‌ಸೈಟ್ https://echallan.ksp.gov.in/ ಮೂಲಕ ದಂಡ ಪಾವತಿಗೆ ಅವಕಾಶ ಮಾಡಿಕೊಡಲಾಗಿದೆ. ಆದರೆ, ಆನ್‌ಲೈನ್ ಮೂಲಕ ದಂಡ ಪಾವತಿ ಮಾಡಲು ಗೊಂದಲ ಉಂಟಾಗುತ್ತಿದೆ. ಕೆಲವೊಮ್ಮೆ ಸರ್ವರ್ ಡೌನ್ ಆಗುವುದರಿಂದ ತೊಂದರೆಯಾಗುತ್ತಿದೆ ಎಂದು ಕೆಲವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರತೀ ಠಾಣೆ ವ್ಯಾಪ್ತಿ ಎರಡು ಕೇಂದ್ರಗಳ ಸ್ಥಾಪನೆ: ಮೈಸೂರು ನಗರದಲ್ಲಿರುವ ಆಯಾ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಮುಖ ವೃತ್ತಗಳಲ್ಲಿ ದಂಡ ಪಾವತಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ದಂಡ ವಸೂಲಿಗಾಗಿಯೇ ಸಿಬ್ಬಂದಿ ನಿಯೋಜಿಸಲಾಗಿದೆ. ಪಾವತಿದಾರರ ಅನುಕೂಲಕ್ಕಾಗಿ ಸಂಚಾರ ಪೊಲೀಸ್ ಠಾಣೆ ಹಾಗೂ ಠಾಣೆ ವ್ಯಾಪ್ತಿಯ ಪ್ರಮುಖ 2 ಕಡೆಗಳಲ್ಲಿ ದಂಡ ಪಾವತಿ ಕೇಂದ್ರಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಓಲ್ಡ್ ಸ್ಟ್ಯಾಬ್ ವೃತ್ತ, ಗನ್‌ಹೌಸ್ ವೃತ್ತ, ರೈಲ್ವೆ ನಿಲ್ದಾಣ ವೃತ್ತದಲ್ಲಿ ದಂಡ ಪಾವತಿ ಕೇಂದ್ರ ತೆರೆಯಲಾಗಿದೆ.

ನೇರವಾಗಿ ಪಾವತಿಸಿ: ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ವಾಹನ ಸವಾರರು ನಗರದ ಎಲ್ಲಾ ಸಂಚಾರ ಪೊಲೀಸ್ ಠಾಣೆಗಳಲ್ಲಿ, ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಹಾಗೂ ವಾಹನ ತಪಾಸಣೆಯ ಸಮಯದಲ್ಲಿ ನೇರವಾಗಿ ಸಂಚಾರ ಪೊಲೀಸರಿಗೆ ದಂಡ ಪಾವತಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

124 ಕೇಸ್ ದಂಡ ಕಟ್ಟಿದ ಭೂಪ...!

ನರಸಿಂಹರಾಜ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನದ ಮಾಲೀಕನೋರ್ವ ತನ್ನ ಬೈಕ್ ಮೇಲಿದ್ದ ಬರೋಬ್ಬರಿ 124 ಕೇಸ್‌ಗಳ ಬಾಕಿ ಮೊತ್ತವನ್ನು ಪಾವತಿಸಿದ್ದಾನೆ. ರಿಯಾಯ್ತಿ ಹಿನ್ನೆಲೆಯಲ್ಲಿ 38 ಸಾವಿರ ರೂ. ದಂಡ ಕಟ್ಟಿರುವ ಆತನಿಗೆ ಮಾರುದ್ದ ರಸೀದಿ ನೀಡಲಾಗಿದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ವಿಯಾನ ಅನಾವರಣ



ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಹೊಸ ಸಂಗ್ರಹವಾದ ವಿಯಾನವನ್ನು(Vyana)ಅನಾವರಣಗೊಳಿಸಿತು. ರೂಪದರ್ಶಿಗಳಾದ ಮಿಸ್ ಮಾಲತಿ, ಮಿಸ್ ಸಿಂಚನಾ, ಮಿಸ್ ಕೀರ್ತನಾಸ್ವಾಮಿ, ಮಿಸ್ ಅಂಜುಮ್ ಅಫ್ರೀನ್, ಮಿಸ್ ಶುಭಾ, ಮಿಸ್ ರೇಷ್ಮಾ, ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್, ನಿರ್ವಹಣಾ ತಂಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗೌರಿ ಗಣೇಶ ಹಬ್ಬ: ಪೌರಕಾರ್ಮಿಕರಿಗೆ ಬಾಗಿನ



ಗೌರಿ ಗಣೇಶ ಹಬ್ಬದ ಅಂಗವಾಗಿ ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ನೀಡಿದರು.

ಮೈಸೂರು,ಆ.25– ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರ ರಾವ್ ಉದ್ಯಾನವನದಲ್ಲಿ ಗೌರಿ ಗಣೇಶ ಹಬ್ಬದ ಅಂಗವಾಗಿ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ನೇತೃತ್ವದಲ್ಲಿ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ನೀಡಿ, ಗೌರಿ–ಗಣೇಶ ಹಬ್ಬದ ಶುಭ ಕೋರಿದರು.

ಬಳಿಕ ಮಾತನಾಡಿದ ಅವರು, ಪೌರಕಾರ್ಮಿಕ ಮಹಿಳೆಯರು ತಮ್ಮ ಕುಟುಂಬದ ನಿರ್ವಹಣೆಯ ಜವಾಬ್ದಾರಿಯೊಂದಿಗೆ ನಗರದ ಜನರ ಆರೋಗ್ಯ, ಸುರಕ್ಷತೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ಸಹೋದರಿಯರಿಗೆ ಬಾಗಿನ ನೀಡುವುದನ್ನು ಪ್ರತಿವರ್ಷ ಅನುಸರಿಸುತ್ತಾ ಬಂದಿದ್ದೇವೆ. ಇಂತಹ ಮೌಲ್ಯಯುತ ಸೇವೆ ತಮಗೆ ಖುಷಿ ನೀಡಿದ್ದು, ನಮಗಾಗಿ ದುಡಿಯುವ ಪೌರಕಾರ್ಮಿಕ ಮಹಿಳೆಯರ ಮನ–ಮೊಗದಲ್ಲಿ ಸಂತಸ ಮೂಡಿರುವುದು ಸಾರ್ಥಕ್ಯ ತರಿಸಿದೆ ಎಂದರು.

ಪೌರಕಾರ್ಮಿಕ ಮಹಿಳೆಯರನ್ನು ಸಹೋದರಿಯ ಭಾವನೆಯಿಂದ ತಮ್ಮ ಮನೆಯ ಸದಸ್ಯರಂತೆ ಪರಿಗಣಿಸಿ ಅಭಿಮಾನದಿಂದ ನೀಡಿದ ಗೌರವ ಮಹತ್ವಪೂರ್ಣ. ನಮಗಾಗಿಯೂ ಮಿಡಿಯುವ ಮನಸ್ಸುಗಳು ಸಮಾಜದಲ್ಲಿ ನಮ್ಮೊಡನೆ ಜತೆಗಿವೆ ಎಂಬ ಆಶಯ ಅವರಲ್ಲಿ ಭರವಸೆಯಿಂದ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಿವೆ ಎಂದು ಶ್ಲಾಘಿಸಿದರು

ಡಾ. ಲಕ್ಷ್ಮೀದೇವಿ, ಶಾಂತಕ್ಕ, ಸೌಭಾಗ್ಯ ಮೂರ್ತಿ, ರೇಣುಕಾ, ಮಂಜುನಾಥ್, ಪ್ರವೀಣ್, ಲಕ್ಷ್ಮಿನಾರಾಯಣ, ನಿರಂಜನ್, ಮಹೇಶ್, ಶ್ರೀಕಂಠ, ಮಧು, ರವಿ, ಸೋಮೇಶ್, ಪವನ, ವಿನಯ್, ಸಾಗರ್, ಶಿವು, ಶ್ರೀನಿವಾಸ್ ನಾಯ್ಡು, ನಾಯಕ್ ಹಾಗೂ ಇತರರು ಹಾಜರಿದ್ದರು.

ನಿಸಾರ್ ಅಹಮದ್‌ಗೆ ಬಾನು ಮುಷ್ತಾಕ್ ಹೋಲಿಸಬೇಡಿ!



ಎಂ.ಜಿ.ಮಹೇಶ್

ಮೈಸೂರು, ಆ.25(ಎಂಕೆ)– ಯಾವ ರೂಪದಲ್ಲಾದರೂ ಮುಸ್ಲಿಮರನ್ನು ಓಲೈಸಬೇಕೆನ್ನುವ ಚಟ ಮುಖ್ಯಮಂತ್ರಿ ಸಿದ್ದರಾಮಯ್ಯರಿಗಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಆಯ್ಕೆ ಕುರಿತು ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬಾನು ಮುಷ್ತಾಕ್ ಅವರನ್ನು ಬೇರೆ ಯಾವುದಕ್ಕಾದರೂ ಅಧ್ಯಕ್ಷರನ್ನಾಗಿ ಮಾಡಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ದಸರಾ ಉದ್ಘಾಟನೆ ಮಾಡಿಸಿ ನಮ್ಮ ದೇವರಿಗೆ ಅವಮಾನ ಮಾಡಬೇಡಿ ಎಂದರು.

ದಸರಾ ಉದ್ಘಾಟನೆ ಮಾಡುವುದಕ್ಕೆ ಧಾರ್ಮಿಕ ಭಾವನೆ ಇರಬೇಕು. ಚಾಮುಂಡಿಯನ್ನು ಪೂಜಿಸಬೇಕು. ಬಾನು ಮುಷ್ತಾಕ್ ಅವರು, ಸ್ತ್ರೀ ಸಂವೇದನೆ ಇರುವ ಮಹಿಳೆ ಅಂತಾರಲ್ಲ. ಹಾಸನದಲ್ಲಿ ಅವರು ಎಷ್ಟು ಹೆಣ್ಣು ಮಕ್ಕಳಿಗೆ ತೊಂದರೆ ಕೊಟ್ಟಿದ್ದಾರೆ ಗೊತ್ತಾ... ಎಂದು ಹೇಳಿದರು.

ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅವರನ್ನು ಬಾನು ಮುಷ್ತಾಕ್ ಅವರಿಗೆ ಹೋಲಿಸಬೇಡಿ. ನಿಸಾರ್ ಅಹಮದ್ ಅವರು ಪ್ರಕೃತಿಯಲ್ಲಿ ತಾಯಿಯನ್ನು ಕಂಡವರು. ಸಿದ್ದರಾಮುಲ್ಲಾ ಖಾನ್ ಅಂತಹವರು ಇರುವವರೆಗೂ ಅರ್ಬನ್ ನಕ್ಸಲರ ಪೋಷಣೆ ನಡೆಯುತ್ತಲೇ ಇರುತ್ತದೆ ಎಂದು ದೂರಿದರು.

ಪ್ರಿಯಾಂಕ್ ಖರ್ಗೆಗೆ ಭಾರತ ಸೂಕ್ತವಲ್ಲ: ಆರ್‌ಎಸ್‌ಎಸ್ ಗಾಳಿ ತಾಕಬಾರದು ಎಂಬ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರಿಗೆ ಭಾರತ ಸೂಕ್ತವಲ್ಲ, ಆರ್‌ಎಸ್‌ಎಸ್ ಗಾಳಿ ತಾಕಬಾರದು ಅಂದ್ರೇ ಚಂದ್ರಗ್ರಹಕ್ಕೆ ಹೋಗಿ ವಾಸ ಮಾಡಬೇಕು. ಆರ್‌ಎಸ್‌ಎಸ್ ಅನ್ನು ದ್ವೇಷ ಮಾಡಿದಷ್ಟು ಎತ್ತರವಾಗಿ ಬೆಳೆಯುತ್ತದೆ. ನೀವು ಆರ್‌ಎಸ್‌ಎಸ್ ವಿರೋಧಿಯಾಗಿ ಮಾತನಾಡುತ್ತಿರುವುದು ಯಾವುದೋ ಒಂದು ಕುಟುಂಬವನ್ನು ಮೆಚ್ಚಿಸುವುದಕ್ಕೆ ಎಂದು ಟೀಕಿಸಿದರು.

ಸನ್ಮಾನ...



ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರೀಕ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಅಂತರರಾಷ್ಟ್ರೀಯ ಮಟ್ಟದ ವುಶು ಪಂದ್ಯಾವಳಿಯಲ್ಲಿ ಚಿನ್ನದ ಪದಕ ಪಡೆದ ಪೊಲೀಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಜಿ.ಪ್ರಣತಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ರಾಜ್ಯ ಕಾವಲು ಪಡೆ ಅಧ್ಯಕ್ಷ ಮೋಹನ್‌ಕುಮಾರ್‌ಗೌಡ, ಉಪಾಧ್ಯಕ್ಷ ವಿ.ಗಿರಿಧರ್, ರಂಗಪ್ಪಗೌಡ ಇನ್ನಿತರರಿದ್ದರು.

ಶ್ರೀಕೃಷ್ಣ ಪರಮಾತ್ಮನ ಬದುಕು ಜನಸಾಮಾನ್ಯರಿಗೆ ಮಾರ್ಗದರ್ಶನ

ಬೆಂಗಳೂರು ವಿವಿ (ಉತ್ತರ) ಕುಲಪತಿ ಡಾ.ನಿರಂಜನವಾನಳ್ಳಿ ಅಭಿಮತ



ಶ್ರೀಕೃಷ್ಣ ಜಯಂತಿ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಿದುಷಿ ಎಂ.ಎಸ್.ಶೀಲಾ, ಹಿರಿಯ ಸಂಗೀತಾ ವಿದ್ವಾಂಸ ವಿದ್ವಾನ್ ಸಿ.ಎ.ಶ್ರೀಧರ, ಹಿರಿಯ ರಂಗಕರ್ಮಿ ಪ್ರೊ.ಎಚ್.ಎಸ್.ಉಮೇಶ್ ಅವರನ್ನು ಸನ್ಮಾನಿಸಲಾಯಿತು.

> ನಾನು ಕುಲಪತಿಯಾಗಿ ಕರ್ತವ್ಯ ನಿರ್ವಹಿಸುವಾಗ ಪ್ರತಿವರ್ಷ ವಿಶ್ವವಿದ್ಯಾಲಯಗಳಿಂದ ಅರ್ಹರಿಗೆ ಗೌರವ ಡಿ.ಲಿಟ್ ನೀಡಿ, ಗೌರವಿಸುವುದು ವಾಡಿಕೆ. ಹೀಗೆಯೇ ಓರ್ವ ಹಿರಿಯ ಅರ್ಹ ಕಲಾವಿದರೊಬ್ಬರಿಗೆ ಗೌರವ ಡಾಕ್ಟರೇಟ್ ಪದವಿ ಸಿಗುವಂತೆ ನಾಲ್ಕು ಬಾರಿ ಪಟ್ಟಿ ಮಾಡಿ ಕಳುಹಿಸುತ್ತಿದ್ದೆ. ಆ ಪಟ್ಟಿ ಬಿಡುಗಡೆ ಹಂತದಲ್ಲಿ ಬೇರೆ ವ್ಯಕ್ತಿಯ ಹೆಸರು ನಮೂದಾಗುತ್ತಿತ್ತು. ಇಲ್ಲಿಯವರೆಗೆ ಅವರಿಗೆ ಡಾಕ್ಟರೇಟ್ ಪದವಿ ಕೊಡಿಸುವುದಕ್ಕೆ ಆಗಲಿಲ್ಲ ಎಂಬ ಕೊರಗಿದೆ.
>
> –ಡಾ.ನಿರಂಜನವಾನಳ್ಳಿ, ಕುಲಪತಿ, ಬೆಂಗಳೂರು ವಿವಿ(ಉತ್ತರ)

ಮೈಸೂರು,ಆ.25(ಎಸ್‌ಪಿಎನ್)–ಎಲ್ಲಾ ಹಂತವನ್ನು ಮೀರಿ, ಜನಸಾಮಾನ್ಯರ ಬದುಕಿಗೆ ಮಾರ್ಗದರ್ಶನದಂತಿರುವ ಶ್ರೀಕೃಷ್ಣ ಪರಮಾತ್ಮನ ಬದುಕು ನಮ್ಮೆಲ್ಲರಿಗೂ ಆದರ್ಶ ಎಂದು ಬೆಂಗಳೂರು ವಿವಿ (ಉತ್ತರ) ಕುಲಪತಿ ಡಾ.ನಿರಂಜನವಾನಳ್ಳಿ ಹೇಳಿದರು.

ಮೈಸೂರು ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ಗಾನಭಾರತೀ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಜೀವನದ ಎಲ್ಲ ಆಯಾಮಗಳಲ್ಲೂ ಸಾಧಿಸಬಲ್ಲವನ ವ್ಯಕ್ತಿತ್ವವೇ ಪೂರ್ಣವ್ಯಕ್ತಿತ್ವ. ಕೃಷ್ಣನಷ್ಟು ಜನಸಾಮಾನ್ಯರಲ್ಲಿ ಒಂದಾಗಿ ಬೆರೆಯಬಲ್ಲ ದೈವ ಇನ್ನೊಬ್ಬನಿಲ್ಲ ಎಂದರು.

ಸಾಮಾನ್ಯ ವ್ಯಕ್ತಿಯೋರ್ವ ಏನು ಮಾಡಲು ಸಾಧ್ಯವೋ ಅದೆಲ್ಲವನ್ನೂ ಶ್ರೀಕೃಷ್ಣನ ಬದುಕು ಅರ್ಥ ಮಾಡಿಸುತ್ತದೆ. ಧರ್ಮ, ಜಾತಿವಾದ ಎಲ್ಲವನ್ನೂ ಬದಿಗೊತ್ತಿ ಬದುಕುಕಟ್ಟಿಕೊಳ್ಳುವುದನ್ನು ಕೃಷ್ಣನ ಜೀವನ ನಮಗೆ ನಿದರ್ಶನವಾಗಿದೆ. ಎಲ್ಲಾ ರೀತಿಯ ಜೀವನ ಅನುಕರಿಸಲು–ಅನುಸರಣೆ ಮಾಡಲು ಕೃಷ್ಣನ ಬದುಕು ಜೀವಂತ ಸಾಕ್ಷಿಯಾಗಿದೆ ಎಂದು ಹೇಳಿದರು

ಗಾನಭಾರತಿ ಮಹಾಪೋಷಕ ಡಾ.ಸಿ.ಜಿ. ನರಸಿಂಹನ್ ಮಾತನಾಡಿ, ಯಾವುದೇ ವಿಚಾರದಲ್ಲಿಯೂ ಪ್ರತಿಫಲ ಸಿಗಬೇಕಾದರೆ ನಡವಳಿಕೆ ಮುಖ್ಯವಾಗುತ್ತದೆ. ನಮಗೆ ತಂದೆ–ತಾಯಿಯೇ ದೇವರು ಎಂಬುವುದನ್ನು ಅರ್ಥಮಾಡಿಕೊಂಡಾಗ ಮಾತ್ರ ಶ್ರೀಕೃಷ್ಣನ ಜೀವನಾದರ್ಶ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ.ಎಚ್.ಎಸ್.ಉಮೇಶ್, ನಮ್ಮ ನಡುವೆ ಎರಡು ದೈವಗಳಿವೆ. ಒಂದು ಶ್ರೀಕೃಷ್ಣ, ಮತ್ತೊಬ್ಬರು ಶ್ರೀರಾಮಚಂದ್ರ, ಶ್ರೀ ಕೃಷ್ಣ ಜೀವನ ಬಹುರೂಪಿಯಾಗಿದ್ದು, ಮಾನವೀಯ ಗುಣಗಳನ್ನು ಹೊಂದಿವೆ. ಶ್ರೀರಾಮಚಂದ್ರ ವ್ಯಕ್ತಿತ್ವ ಗಂಭೀರ ಸ್ವರೂಪದ್ದು ಎಂದರು.

ಈ ವೇಳೆ ಗಾನಭಾರತೀ ಅಧ್ಯಕ್ಷ ಹೆಚ್.ಆರ್.ಸುದರ್ಶನ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ವೇಳೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಿದುಷಿ ಎಂ.ಎಸ್.ಶೀಲಾ, ಹಿರಿಯ ಸಂಗೀತಾ ವಿದ್ವಾಂಸ ವಿದ್ವಾನ್ ಸಿ.ಎ. ಶ್ರೀಧರ, ಹಿರಿಯ ರಂಗಕರ್ಮಿ ಪ್ರೊ. ಎಚ್.ಎಸ್.ಉಮೇಶ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವೇಣುವಾದನ ಕಾರ್ಯಕ್ರಮದಲ್ಲಿ ವಿದ್ವಾನ್ ಹೇರಂಬ (ಕೊಳಲು), ಹೇಮಂತ (ಕೊಳಲು), ವಿದ್ವಾನ್ ತುಮಕೂರು ಬಿ.ರವಿಶಂಕರ್ (ಮೃದಂಗ), ವಿದ್ವಾನ್ ಗುರುಪ್ರಸನ್ನ ಖಂಜಿರ ನುಡಿಸಿ ಪ್ರೇಕ್ಷಕರ ಮನಸೆಳೆದರು. ಕನ್ನಡ ವಾಙ್ಮಯದಲ್ಲಿ ಕೃಷ್ಣ ಕುರಿತಾದ ಭಕ್ತಿಗೀತೆಗಳನ್ನು ವಿದುಷಿ ಮಾನಸ ನಯನ ಹಾಡಿದರು. ವಿದ್ವಾನ್ ಆರ್. ಅಚ್ಯುತರಾವ್ (ಪಿಟೀಲು), ವಿದ್ವಾನ್ ಆನೂರು ಅನಂತಕೃಷ್ಣ ಶರ್ಮಾ (ಮೃದಂಗ), ವಿದ್ವಾನ್ ಆನೂರು ಸುನಾದ್ (ಖಂಜಿರ) ನುಡಿಸಿ, ಪ್ರೇಕ್ಷಕರ ಮನಸೆಳೆದರು. ವಿವಿಧ ಗಾಯನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ದೇಶ - ವಿದೇಶ

ಬ್ರಿಟನ್: ಅಪರಾಧಿಗಳಿಗೆ ಪಬ್, ಕ್ರೀಡೆ, ಸಂಗೀತ ಕಾರ್ಯಕ್ರಮಗಳಿಗೆ ನಿರ್ಬಂಧ



ಲಂಡನ್: ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರು ಪಬ್, ಸಂಗೀತ ಕಾರ್ಯಕ್ರಮಗಳು ಹಾಗೂ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗಿಯಾಗದಂತೆ ನಿರ್ಬಂಧ ವಿಧಿಸುವಂತಹ ಹೊಸ ಕಾನೂನು ರೂಪಿಸಲು ಬ್ರಿಟನ್ ಸರ್ಕಾರ ಮುಂದಾಗಿದೆ.

ಸಮಾಜದ ಸ್ವಾಸ್ಥ್ಯ ಕಾಯ್ದುಕೊಳ್ಳುವ ಉದ್ದೇಶದಿಂದ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅಪರಾಧಿಗಳನ್ನು ಸಮಾಜದಿಂದ ದೂರ ಇಡುವಂತಹ ಈ ಕ್ರಮವನ್ನು ಅನುಸರಿಸಲು ಚಿಂತಿಸುತ್ತಿರುವುದಾಗಿ ಬ್ರಿಟನ್ ಕಾನೂನು ಸಚಿವಾಲಯದ ಕಾರ್ಯದರ್ಶಿ ಶಬಾನಾ ಮೊಹಮ್ಮದ್ ಹೇಳಿದ್ದಾರೆ. ಸಮಾಜದ ನಿಯಮಗಳನ್ನು ಮೀರಿ ಅಪರಾಧ ಕೃತ್ಯ ಎಸಗುವವರಿಗೆ ಶಿಕ್ಷೆ ಕಟ್ಟಿಟ್ಟಬುತ್ತಿ. ಅಲ್ಪ ಕಾಲ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಹೊರಬಂದು ಸಮಾಜದಲ್ಲಿದ್ದೇ ಶಿಕ್ಷೆಯ ಅವಧಿ ಕಳೆಯುತ್ತಿರುವವರಿಗೆ ಶಿಕ್ಷೆಯ ಕಟ್ಟುಪಾಡುಗಳು ಮುಂದುವರಿಯಬೇಕು. ಹೀಗಾಗಿ ಅವರಿಗೆ ಸಾಮಾಜಿಕ ನಿರ್ಬಂಧಗಳನ್ನು ವಿಧಿಸಲು ಯೋಜಿಸಲಾಗಿದೆ. ಅಲ್ಲದೆ, ಜೈಲಿನಿಂದ ಬಿಡುಗಡೆಗೊಂಡಿರುವವರ ಮೇಲೂ ನಿಗದಿತ ಅವಧಿಗೆ ನಿಗಾ ಇರಿಸಲಾಗುತ್ತದೆ. ಯಾವುದೇ ಕಾನೂನುಗಳನ್ನು ಉಲ್ಲಂಘಿಸಿದರೆ ಮತ್ತೆ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂದೂ ಶಬಾನಾ ತಿಳಿಸಿದ್ದಾರೆ.

ಗರ್ಭಿಣಿ ಪತ್ನಿ ಕೊಂದು, ದೇಹವನ್ನು ನದಿಗೆಸೆದ ಪತಿ



ಹೈದರಾಬಾದ್: ತೆಲಂಗಾಣದಲ್ಲಿ ಕೌಟುಂಬಿಕ ಕಲಹದಿಂದಾಗಿ ಗರ್ಭಿಣಿ ಪತ್ನಿಯನ್ನು ಆಕೆಯ ಗಂಡನೇ ಕೊಂದು ಹಾಕಿದ್ದು, ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ನದಿಗೆ ಬಿಸಾಡುವ ವೇಳೆ ಸಿಕ್ಕಿಬಿದ್ದಿದ್ದಾನೆ. ಹೈದರಾಬಾದ್‌ನ ಬಾಲಾಜಿಗುಟ್ಟದಲ್ಲಿ ಈ ಭೀಕರ ಘಟನೆ ನಡೆದಿದ್ದು, ಒಬ್ಬ ವ್ಯಕ್ತಿ ತನ್ನ ಗರ್ಭಿಣಿ ಪತ್ನಿ ಕೊಂದು, ಆಕೆಯ ದೇಹವನ್ನು ತುಂಡುಗಳಾಗಿ ಕತ್ತರಿಸಿ, ವಿಲೇವಾರಿ ಮಾಡಲು ಪ್ರಯತ್ನಿಸುತ್ತಿದ್ದಾಗ ಸಿಕ್ಕಿಬಿದ್ದಿದ್ದಾನೆ. ಆತನನ್ನು ಬಂಧಿಸಲಾಗಿದೆ. ಕಾಮರೆಡ್ಡಿಗೂಡಂನ ಸ್ವಾತಿ ಮತ್ತು ಮಹೇಂದರ್ ಪ್ರೀತಿಸಿ ಮದುವೆಯಾಗಿ ಬಾಲಾಜಿ ಗುಟ್ಟ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಮದುವೆ ಬಳಿಕ ಪತ್ನಿಯ ಶೀಲದ ಮೇಲೆ ಶಂಕೆ ವ್ಯಕ್ತಪಡಿಸಿದ್ದ. ಮುಖ್ಯವಾಗಿ ಆಕೆ ಗರ್ಭಿಣಿಯಾದ ಬಳಿಕ ಮಹೇಂದರ್ ಅನುಮಾನ ಜಾಸ್ತಿಯಾಗಿತ್ತು. ಆಕೆಯ ಹೊಟ್ಟೆಯಲ್ಲಿರುವ ಮಗು ತನ್ನದಲ್ಲ ಎಂದು ಭಾವಿಸಿದ್ದ. ಹೀಗಾಗಿ ಆಕೆಯನ್ನು ಕೊಲ್ಲುವ ಉದ್ದೇಶದಿಂದಲೇ ವಿಕಾರಾಬಾದ್‌ನಿಂದ ಬಾಲಾಜಿ ಗುಟ್ಟಕ್ಕೆ ಕರೆತಂದಿದ್ದಾಗಿ ಪೊಲೀಸ್ ವಿಚಾರಣೆ ವೇಳೆ ಬಾಯಿ ಬಿಟ್ಟಿದ್ದಾನೆ. ಪತ್ನಿ ಸ್ವಾತಿಯನ್ನು ಕೊಂದ ಬಳಿಕ ಮಹೇಂದರ್ ದೇಹದ ಭಾಗಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಪ್ಯಾಕ್ ಮಾಡಿ ಹೊರಗೆ ತೆಗೆದುಕೊಂಡು ಹೋಗಿ ಹೂಳಲು ಹೋಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸೂರ್ಯನಿಗಿಂತ ಹಳೆಯದಾದ ವಸ್ತು ಕ್ಷುದ್ರ ಗ್ರಹದಲ್ಲಿ ಪತ್ತೆ: ನಾಸಾ



ವಾಷಿಂಗ್ಟನ್: ಭೂಮಿಯಿಂದ 30.22 ಕೋಟಿ ಕಿ.ಮೀ ದೂರದಲ್ಲಿರುವ ಬೆನು ಕ್ಷುದ್ರಗ್ರಹದಿಂದ ಸಂಗ್ರಹಿಸಿದ ಕಲ್ಲು ಮತ್ತು ಧೂಳಿನ ಮಾದರಿಗಳಲ್ಲಿ ಸೂರ್ಯನಿಗಿಂತಲೂ ಹಿಂದಿನ ಅವಧಿಯ ವಸ್ತುಗಳನ್ನು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾದ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ವಿಜ್ಞಾನಿಗಳು ಬೆನುವಿನ ಸ್ಯಾಂಪಲ್‌ನಲ್ಲಿ ನಮ್ಮ ಸೌರವ್ಯವಸ್ಥೆಗೂ ಹಿಂದಿನ ಧಾನ್ಯಗಳನ್ನು ಗುರುತಿಸಿದ್ದಾರೆ. ನಕ್ಷತ್ರ ಧೂಳು ಎಂದು ಕರೆಯಲ್ಪಡುವ ಈ ಕಣಗಳು ಶತಕೋಟಿ ವರ್ಷಗಳ ಹಿಂದೆ (ಸೂರ್ಯನ ಜನನಕ್ಕಿಂತ ಮೊದಲು) ಸಾಯುತ್ತಿರುವ ನಕ್ಷತ್ರಗಳ ಸುತ್ತಲೂ ರೂಪುಗೊಂಡಿದ್ದು ಬಹುತೇಕ ಬದಲಾಗದೆ ಉಳಿದಿದೆ. ಈ ಕಣಗಳು ನಮ್ಮ ಸೌರವ್ಯೂಹದ ಆರಂಭದ ಬಗ್ಗೆ ಭೂಮಿ ಮೇಲೆ ಕಂಡುಬರುವ ಉಲ್ಕೆಗಳಿಗಿಂತ ನಿಖರವಾದ ನೋಟ ನೀಡುತ್ತದೆ ಎಂದು ಲಂಡನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ತಜ್ಞರನ್ನೊಳಗೊಂಡ ಅಂತಾರಾಷ್ಟ್ರೀಯ ತಂಡವು ತೀರ್ಮಾನಿಸಿದೆ. 'ಬೆನು' ಕ್ಷುದ್ರಗ್ರಹದಿಂದ ಸಂಗ್ರಹಿಸಿದ ಮಾದರಿಯು ಬಾಹ್ಯ ಸೌರಮಂಡಲದ ಸಾವಯವ ವಸ್ತುಗಳು, ಧೂಳು, ಹೊರಕ್ಕೆ ಚಲಿಸುವ ಮುನ್ನ ಸೂರ್ಯನ ಬಳಿ ರೂಪುಗೊಂಡ ಹೆಚ್ಚಿನ ತಾಪಮಾನದ ಕಣಗಳು ಸೇರಿದಂತೆ ವೈವಿಧ್ಯಮಯ ಶ್ರೇಣಿಯ ವಸ್ತುಗಳನ್ನು ಒಳಗೊಂಡಿದೆ.

ರೀಲ್ಸ್ ಮಾಡಲು ಹೋಗಿ ನೀರಿನಲ್ಲಿ ಕೊಚ್ಚಿ ಹೋದ ಯೂಟ್ಯೂಬರ್



ಒಡಿಶಾ: ರೀಲ್ಸ್ ಮಾಡಲು ಹೋಗಿ ಯೂಟ್ಯೂಬರ್ ಪ್ರಾಣವನ್ನೇ ಕಳೆದುಕೊಂಡಿರುವ ಘಟನೆ ಒಡಿಶಾದಲ್ಲಿ ನಡೆದಿದೆ. ಒಡಿಶಾದ ಕೊರಾಪುಟ್‌ನಲ್ಲಿರುವ ದುಡುಮಾ ಜಲಪಾತದಲ್ಲಿ 22 ವರ್ಷದ ಯೂಟ್ಯೂಬರ್ ಕೊಚ್ಚಿ ಹೋಗಿದ್ದಾರೆ. ಮಾಹಿತಿಯ ಪ್ರಕಾರ, ಗಂಜಾಂ ಜಿಲ್ಲೆಯ ಬೆರ್ಹಾಂಪುರ್ ನಿವಾಸಿಯಾದ ಯೂಟ್ಯೂಬರ್ ಸಾಗರ್ ತುಡು ತನ್ನ ಸ್ನೇಹಿತ ಅಭಿಜೀತ್ ಬೆಹೆರಾ ಅವರೊಂದಿಗೆ ಕೊರಾಪುಟ್‌ಗೆ ಹೋಗಿದ್ದರು. ವಿವಿಧ ಪ್ರವಾಸಿ ಸ್ಥಳಗಳ ವೀಡಿಯೊಗಳನ್ನು ಮಾಡಿ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ಸಾಗರ್ ಜಲಪಾತದ ಬಳಿಯ ಬಂಡೆಯ ಮೇಲೆ ನಿಂತು ಡ್ರೋನ್ ಕ್ಯಾಮೆರಾದೊಂದಿಗೆ ರೀಲ್ ರೆಕಾರ್ಡ್ ಮಾಡುತ್ತಿದ್ದ. ನಂತರ ಆ ಪ್ರದೇಶದಲ್ಲಿ ಭಾರೀ ಮಳೆಯಾಗಿದ್ದರಿಂದ ಮಚಕುಂಡ ಅಣೆಕಟ್ಟಿನಿಂದ ನೀರನ್ನು ಬಿಡುಗಡೆ ಮಾಡಲಾಯಿತು. ನೀರಿನ ಬಿಡುಗಡೆಯಿಂದಾಗಿ, ಜಲಪಾತದಲ್ಲಿ ನೀರಿನ ಮಟ್ಟ ಇದ್ದಕ್ಕಿದ್ದಂತೆ ಹೆಚ್ಚಾಗಿ, ಬಲವಾದ ಹರಿವು ಪ್ರಾರಂಭವಾಯಿತು. ಯೂಟ್ಯೂಬರ್ ಸಾಗರ್ ನಿಂತಿದ್ದ ಬಂಡೆಯು ನೀರಿನಿಂದ ಆವೃತವಾಗಿತ್ತು. ಅವರು ಸ್ವಲ್ಪ ಸಮಯದವರೆಗೆ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸಿದರು. ಆದರೆ ಬಲವಾದ ಪ್ರವಾಹಕ್ಕೆ ಸಿಲುಕಿ ಕೊಚ್ಚಿ ಹೋದರು.

ಗಾಝಾದ ಆಸ್ಪತ್ರೆ ಮೇಲೆ ಇಸ್ರೇಲ್ ದಾಳಿ: ಕನಿಷ್ಠ 15 ಮಂದಿ ಮೃತ್ಯು



ಗಾಝಾ: ಇಸ್ರೇಲ್ ಸೇನೆ ಗಾಝಾದ ನಾಸರ್ ಆಸ್ಪತ್ರೆಯ ಮೇಲೆ ನಡೆಸಿದ ದಾಳಿಯಲ್ಲಿ ನಾಲ್ವರು ಪತ್ರಕರ್ತರು ಸೇರಿದಂತೆ ಕನಿಷ್ಠ 15 ಜನರು ಮೃತಪಟ್ಟಿದ್ದಾರೆ. ಅವರಲ್ಲಿ ಓರ್ವರು ರಾಯಿಟರ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪ್ಯಾಲೆಸ್ತೀನ್‌ನ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ದಾಳಿಯಲ್ಲಿ ರಾಯಿಟರ್ಸ್ ಛಾಯಾಗ್ರಾಹಕ ಹುಸಮ್ ಅಲ್–ಮಸ್ರಿ ಮೃತಪಟ್ಟಿದ್ದಾರೆ ಮತ್ತು ಹಾತೆಮ್ ಖಲೀದ್ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ನಾಸರ್ ಆಸ್ಪತ್ರೆಯ ಮೇಲೆ ದಾಳಿ ನಡೆಸಿದಾಗ ಅಲ್ಲಿಗೆ ರಕ್ಷಣಾ ಕಾರ್ಯಕರ್ತರು, ಪತ್ರಕರ್ತರು ಮತ್ತು ಇತರರು ತೆರಳಿದ್ದಾರೆ. ಈ ವೇಳೆ ಎರಡನೇ ದಾಳಿ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮರಿಯಮ್ ಅಬು ದಗ್ಗಾ, ಮುಹಮ್ಮದ್ ಸಲಾಮಾ ಮತ್ತು ಮೋಝ್ ಅಬು ತಾಹಾ ಎಂಬ ಇತರ ಮೂವರು ಪತ್ರಕರ್ತರು ಮತ್ತು ಮತ್ತೋರ್ವ ರಕ್ಷಣಾ ಕಾರ್ಯಕರ್ತ ಮೃತಪಟ್ಟಿದ್ದಾರೆ ಎಂದು ಗಾಝಾದ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ. ಅಕ್ಟೋಬರ್ 7, 2023ರಂದು ಯುದ್ಧ ಪ್ರಾರಂಭವಾದಾಗಿನಿಂದ ಗಾಝಾದಲ್ಲಿ ಇಸ್ರೇಲ್ ದಾಳಿಗೆ ಈವರೆಗೆ 240ಕ್ಕೂ ಅಧಿಕ ಪ್ಯಾಲೆಸ್ತೀನ್ ಪತ್ರಕರ್ತರು ಮೃತಪಟ್ಟಿದ್ದಾರೆ.

ಬಾಳೆಲೆ ಎಪಿಸಿಎಂಎಸ್ ಸಂಕೀರ್ಣ ಲೋಕಾರ್ಪಣೆ



ಬಾಳೆಲೆ ವ್ಯವಸಾಯೋತ್ಪನ್ನ ಮಾರಾಟ ಮತ್ತು ಪರಿವರ್ತನಾ ಸಹಕಾರ ಸಂಘದ ಉದ್ಘಾಟನಾ ಫಲಕವನ್ನು ಸಂಸದ ಯದುವೀರ್ ಅನಾವರಣಗೊಳಿಸಿದರು.

ಗೋಣಿಕೊಪ್ಪ ಆ.25– ಬಾಳೆಲೆ ವ್ಯವಸಾಯೋತ್ಪನ್ನ ಮಾರಾಟ ಮತ್ತು ಪರಿವರ್ತನಾ ಸಹಕಾರ ಸಂಘದಿಂದ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಾಣಿಜ್ಯ ಕಟ್ಟಡವನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

ಸಂಸದ ಯದುವೀರ್ ಉದ್ಘಾಟನಾ ಫಲಕವನ್ನು ಅನಾವರಣಗೊಳಿಸಿ ಸಹಕಾರಿ ಸೇವೆಗೆ ಮತ್ತಷ್ಟು ಕ್ಷೇತ್ರಗಳ ಸೇರ್ಪಡೆಗೊಳಿಸುವ ಮೂಲಕ ಅಭಿವೃದ್ಧಿ ವಿಸ್ತಾರ ಪಡೆದುಕೊಂಡಿದೆ. ಕೊಡಗು ಸಹಕಾರಿ ಸಂಘಗಳು ವಿವಿಧ ಜಿಲ್ಲೆಗಳಿಗೆ ಮಾದರಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಟ್ಯಾಕ್ಸಿ, ವಿಮೆ, ಪ್ರವಾಸೋದ್ಯಮ, ರಿಯಲ್ ಎಸ್ಟೇಟ್ ಸೇವೆಯನ್ನು ಕೂಡ ಸಹಕಾರಿ ಕ್ಷೇತ್ರದಲ್ಲಿ ಸೇರಿಸಿಕೊಂಡು ಮುಂದುವರಿಯಲಾಗಿದೆ. ಡಿಜಿಟಲೀಕರಣ ಕೂಡ ಸಂಪೂರ್ಣವಾಗಿ ಮುಗಿದಿದೆ ಎಂದರು.

ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಸಂಕೀರ್ಣ ಉದ್ಘಾಟಿಸಿ, ರೈತರ ಏಳಿಗೆಗೆ ಸಹಕಾರ ಸಂಘಗಳ ಕೊಡುಗೆ ದೊಡ್ಡದು. ನೂತನ ವಿನ್ಯಾಸದೊಂದಿಗೆ ನಿರ್ಮಾಣವಾದ ಆಡಳಿತ ಕಟ್ಟಡ ಸಹಕಾರ ಸಂಘಗಳು ರೈತರ ಆರ್ಥಿಕ ಅಭಿವೃದ್ಧಿಗೆ ಬಹುದೊಡ್ಡ ಕೊಡುಗೆಯಾಗಲಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಅರಮಣಮಾಡ ಪಿ.ಗಣಪತಿ ಮಾತನಾಡಿ, ಸಂಘದ ಸದಸ್ಯರ ಅನುಕೂಲ, ಆದಾಯ ಮತ್ತು ಅಭಿವೃದ್ಧಿ ಹೆಚ್ಚಿಸುವ ದೃಷ್ಟಿಯಿಂದ ಪಟ್ಟಣದ ಹೃದಯ ಭಾಗದಲ್ಲಿ 1 ಕೋಟಿ ರೂ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಇದರ ಸದುಪಯೋಗವನ್ನು ಸದಸ್ಯರು ಪಡೆದುಕೊಳ್ಳಬೇಕಿದೆ ದಾನಿ ಪೋಡ ಮಾಡ ಚಂಗಪ್ಪ ಅವರು ಉದಾರವಾಗಿ ನೀಡಿದ ಜಾಗದಲ್ಲಿ ನಿರ್ಮಿಸಿರುವ ಸಂಘ ಸಾಕಷ್ಟು ಸೇವೆ ಒದಗಿಸುತ್ತಿದೆ. ದಾನಿ ಪೋಡಮಾಡ ನಾಚಪ್ಪ ಅವರು ರಸ್ತೆಗೆ ಜಾಗವನ್ನು ನೀಡಿ ಸಂಘದ ಏಳಿಗೆಯಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. ಹಿರಿಯ ಸಹಕಾರಿಗಳು ಮತ್ತು ದಾನಿಗಳನ್ನು ಸ್ಮರಿಸಿಕೊಳ್ಳಲಾಗುತ್ತಿದೆ ಎಂದರು.

ಬಾಳೆಲೆ, ಕೊಟ್ಟಗೇರಿ, ನಿಟ್ಟೂರು, ದೇವನೂರು, ಪೊನ್ನಪ್ಪಸಂತೆ, ಬಿಳೂರು, ಗ್ರಾಮಗಳ ರೈತರ ಬೇಡಿಕೆಗೆ ಸಂಘ ಸ್ಪಂದಿಸುತ್ತಿದೆ ಎಂದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ, ಸಂಘದ ಉಪಾಧ್ಯಕ್ಷ ಪಿ.ಜಿ. ಜಾನಕ್ಕಿ, ಬಾಳೆಲೆ ಪ್ಯಾಕ್ಸ್ ಅಧ್ಯಕ್ಷ ಚಿಮ್ಮಣಮಾಡ ಕೃಷ್ಣ ಗಣಪತಿ, ಬಾಳೆಲೆ ಗ್ರಾ. ಪಂ.ಅಧ್ಯಕ್ಷೆ ಸ್ಮಿತಾ ಪೊನ್ನಪ್ಪ, ಬಾಳೆಲೆ ಎಜುಕೇಷನ್ ಸೊಸೈಟಿ ಅಧ್ಯಕ್ಷ ಅಳಮೇಂಗಡ ಬೋಸ್ ಮಂದಣ್ಣ, ಪೊನ್ನಪ್ಪಸಂತೆ ಗ್ರಾಪಂ ಅಧ್ಯಕ್ಷ ತೀತರಮಾಡ ಎಸ್.ಕುಶಾಲಪ್ಪ, ನಿಟ್ಟೂರು ಗ್ರಾಪಂ ಅಧ್ಯಕ್ಷೆ ಪಿ.ಆರ್. ಅಮ್ಮಣಿ, ಸಂಘದ ಸಿಇಒ ಟಿ.ಎ.ಅನಿತಾ ಉಪಸ್ಥಿತರಿದ್ದರು.

ಧರ್ಮಸ್ಥಳ ಪ್ರಕರಣ: ಬಿಜೆಪಿ ಪ್ರತಿಭಟನೆ



ಧರ್ಮಸ್ಥಳ ಪ್ರಕರಣವನ್ನು ಖಂಡಿಸಿ ಭಾರತೀಯ ಜನತಾ ಪಕ್ಷ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ವಿರಾಜಪೇಟೆ ಆ.25– ಧರ್ಮದ ಉಳಿವಿಗಾಗಿ ಧರ್ಮಯುದ್ದ ಎಂಬ ಘೋಷವಾಕ್ಯ ದಡಿಯಲ್ಲಿ ಧರ್ಮಸ್ಥಳ ಪ್ರಕರಣವನ್ನು ಖಂಡಿಸಿ ಭಾರತೀಯ ಜನತಾ ಪಕ್ಷ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಇಲ್ಲಿನ ಗಡಿಯಾರ ಕಂಬದ ಬಳಿ ಸೇರಿದ ಬಿಜೆಪಿ ಕಾರ್ಯಕರ್ತರು ಮಾನವ ಸರಪಳಿಯ ಮೂಲಕ ಪ್ರಕರಣದ ರೂವಾರಿ ಮತ್ತು ಸರ್ಕಾರದ ವಿರುದ್ದ ಘೋಷಣೆಗಳನ್ನು ಕೂಗಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಂಸದ ಯದುವೀರ್ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗುವಂತೆ ಷಡ್ಯಂತ್ರ ರೂಪಿಸಿ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಅಪಮಾನ ಮಾಡುವ ರೀತಿಯಲ್ಲಿ ಕಾಣದ ಕೈಗಳು ಪ್ರತಿನಿಧಿಸುತ್ತಿದೆ. ಶ್ರದ್ದಾ ಕೇಂದ್ರಗಳ ಬಗ್ಗೆ ಅಪಪ್ರಚಾರ ಮಾಡಿರುವ ವ್ಯಕ್ತಿಗಳ ವಿರುದ್ದ ನಿರ್ಧಾಕ್ಷಿಣ್ಯ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಧರ್ಮ ಕೇಂದ್ರಗಳ ಮೇಲೆ ಅಪಪ್ರಚಾರಗಳು ನಡೆಯುವ ಸಂದರ್ಭದಲ್ಲಿ ಸಮಸ್ತ ಹಿಂದೂ ಬಾಂಧವರು ಒಂದಾಗಿ ಹೋರಾಟಕ್ಕೆ ಸಿದ್ದರಾಗಿರಬೇಕು. ಧರ್ಮಕೇಂದ್ರಗಳ ಉಳಿವಿಗಾಗಿ ಸ್ಥಿರ ನೆಲೆಗಾಗಿ ಹೋರಾಟಗಳು ಮುಖ್ಯ ಎಂದರು.

ಮಾಜಿ ಶಾಸಕ ಕೆಜಿ.ಬೋಪಯ್ಯ, ಭಾಜಪ ಜಿಲ್ಲಾಧ್ಯಕ್ಷ ರಾಬೀನ್ ದೇವಯ್ಯ, ಪ್ರಮುಖರಾದ ಪಟ್ಟಡ ರೀನಾ ಪ್ರಕಾಶ್ ಮತ್ತು ಕಾಂತಿ ಸತೀಶ್ ಮಾತನಾಡಿದರು. ಗಡಿಯಾರ ಕಂಭದ ಬಳಿಯಿಂದ ತಾಲೂಕು ಕಛೇರಿಗೆ ತೆರಳಿದ ಕಾರ್ಯಕರ್ತರು ತಹಶೀಲ್ದಾರ್ ಪ್ರವೀಣ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ತಾಲೂಕು, ಜಿಲ್ಲೆಯ ಪಕ್ಷದ ಪ್ರಮುಖರು, ಸುವಿನ್ ಗಣಪತಿ, ನೆಲ್ಲಿರ ಚಲನ್ ಕುಮಾರ್, ಶಶಿ ಸುಬ್ರಮಣಿ, ರಘು ನಾಣಯ್ಯ ಮತ್ತು ವಿವಿಧ ಮಂಡಲಗಳ ಪ್ರಮುಖರು ತಾಲೂಕಿನ ವಿವಿಧೆಡೆಗಳಿಂದ ಆಗಮಿಸಿದ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಸ್ವಚ್ಛತಾ ಕಾರ್ಯ ನಿರ್ವಹಿಸಿದ ಶೌರ್ಯ ವಿಪತ್ತು ನಿರ್ವಹಣಾ ಘಟಕ



ಶೌರ್ಯ ವಿಪತ್ತು ನಿರ್ವಹಣಾ ಘಟಕದಿಂದ ಸರ್ಕಾರಿ ಪದವಿ ಕಾಲೇಜಿನಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ನಾಪೋಕ್ಲು, ಆ.25–ಇಲ್ಲಿನ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ನಾಪೋಕ್ಲು ಸರಕಾರಿ ಪದವಿ ಕಾಲೇಜಿನಲ್ಲಿ ಆವರಣದಲ್ಲಿ ಗಿಡಗಂಟಿಗಳನ್ನು ಕಡಿದು ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಮಡಿಕೇರಿ ತಾಲೂಕು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಮಾಸ್ಟರ್ ದಿವ್ಯ ಮಂದಪ್ಪ, ಸದಸ್ಯರಾದ ಉಮಾಲಕ್ಷ್ಮಿ, ಚಂದ್ರಕಲಾ, ಶಂಕರ, ದಿಲಿಶ್, ರಮ್ಯಾ, ಪೊನ್ನಮ್ಮ, ಸುನಿತಾ, ಶರವಣ, ಮಾಯಿಲಪ್ಪ, ನಾರಾಯಣ, ಆಶಾಲತಾ ಉಪಸ್ಥಿತಿಯಲ್ಲಿ ಸ್ವಚ್ಛತಾ ಕಾರ್ಯವನ್ನು ಮಾಡಿದರು. ಗ್ರಾಪಂ ಅಭಿವೃದ್ಧಿ ಅಧಿಕಾರಿ ಚೋಂದಕ್ಕಿ, ಗ್ರಾಮ ಪಂಚಾಯತ್ ಸದಸ್ಯರಾದ ಅರುಣ್ ಬೇಬ, ಸಬಾ, ಕಾಲೇಜು ಪ್ರಾಂಶುಪಾಲರು ಸಿಬ್ಬಂದಿವರ್ಗದವರು, ಹಾಜರಿದ್ದರು.

ನಾಪೋಕ್ಲು ಮರ್ಕರ್ಯ್ ಶಾಲೆ ತಾಲೂಕು ಮಟ್ಟಕ್ಕೆ ಆಯ್ಕೆ



ಚೆರಿಯಪರಂಬು ಆಟದ ಮೈದಾನದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟ.

ನಾಪೋಕ್ಲು: ಶಾಲಾಶಿಕ್ಷಣ ಇಲಾಖೆ ಮತ್ತು ಪಾರಾಣೆ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಚೆರಿಯಪರಂಬು ಆಟದ ಮೈದಾನದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದ ಬಾಲಕರ ವಾಲಿಬಾಲ್ ಸ್ಪರ್ಧೆಯಲ್ಲಿ ಕೊಟ್ಟಮುಡಿಯ ಮರ್ಕರ್ಯ್ ಶಾಲೆಯ ತಂಡ ಪ್ರಥಮಸ್ಥಾನ ಗಳಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದೆ.

ಎಮ್ಮೆ ಮಾಡು ಪ್ರೌಢಶಾಲೆಯ ಬಾಲಕರ ತಂಡ ದ್ವಿತೀಯ ಸ್ಥಾನ ಗಳಿಸಿತು. ಬಾಲಕಿಯರ ವಾಲಿಬಾಲ್ ಪಂದ್ಯದಲ್ಲಿ ಹೊದವಾಡ ಸರ್ಕಾರಿ ಪ್ರೌಢಶಾಲೆಯ ತಂಡ ಪ್ರಥಮ ಸ್ಥಾನ ಗಳಿಸಿದರೆ, ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯ ತಂಡ ದ್ವಿತೀಯ ಸ್ಥಾನ ಗಳಿಸಿತು.

ಬಾಲಕರ ಥ್ರೋಬಾಲ್ ಟೂರ್ನಿಯಲ್ಲಿ ಎಮ್ಮೆಮಾಡು ಸರ್ಕಾರಿ ಪ್ರೌಢಶಾಲೆಯ ತಂಡ ಪ್ರಥಮ ಸ್ಥಾನ ಗಳಿಸಿದರೆ, ಬಲ್ಲಮಾವಟಿಯ ನೇತಾಜಿ ವಿದ್ಯಾಸಂಸ್ಥೆಯ ತಂಡ ದ್ವಿತೀಯ ಸ್ಥಾನ ಗಳಿಸಿತು. ಬಾಲಕಿಯರ ಥ್ರೋಬಾಲ್ ಪಂದ್ಯಾಟದಲ್ಲಿ ಎಮ್ಮೆಮಾಡು ಸರ್ಕಾರಿ ಪ್ರೌಢಶಾಲೆಯ ತಂಡ ಪ್ರಥಮ ಸ್ಥಾನವನ್ನು ಹೊದವಾಡ ಸರ್ಕಾರಿ ಪ್ರೌಢಶಾಲೆ ತಂಡ ದ್ವಿತೀಯ ಸ್ಥಾನವನ್ನು ಗಳಿಸಿತು.

ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಡಾ. ಅಂಬೇಡ್ಕರ್ ವಸತಿ ಶಾಲೆಯ ತಂಡ ಪ್ರಥಮ ಸ್ಥಾನ, ಕಕ್ಕಬೆ ಪ್ರೌಢಶಾಲೆ ದ್ವಿತೀಯ ಸ್ಥಾನ ಗಳಿಸಿತು. ಬಾಲಕಿಯರ ಕಬಡ್ಡಿ ಪಂದ್ಯಾಟದಲ್ಲಿ ಕಕ್ಕಬೆ ಪ್ರೌಢಶಾಲೆಯ ತಂಡ ಪ್ರಥಮ ಸ್ಥಾನ ಹಾಗೂ ಡಾ. ಅಂಬೇಡ್ಕರ್ ವಸತಿ ಶಾಲೆಯ ತಂಡ ದ್ವಿತೀಯ ಸ್ಥಾನ ಗಳಿಸಿತು. ವಿವಿಧ ಪ್ರೌಢಶಾಲೆಗಳ ವಿದ್ಯಾರ್ಥಿಗಳು, ಶಿಕ್ಷಕರು, ದೈಹಿಕ ಶಿಕ್ಷಕರು ಪಾಲ್ಗೊಂಡಿದ್ದರು.

ಸಿಎನ್‌ಸಿಯಿಂದ ನಾಳೆ ವಿ.ಪೇಟೆಯಲ್ಲಿ ಪ್ರತಿಭಟನೆ

ಮಡಿಕೇರಿ: ಸಂಸತ್ ಹಾಗೂ ವಿಧಾನ ಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಆ.27ರಂದು ವಿರಾಜಪೇಟೆಯಲ್ಲಿ 11ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಬುಧವಾರ ಬೆಳಿಗ್ಗೆ 10.30ಕ್ಕೆ ಅಲ್ಲಿನ ಗಡಿಯಾರ ಕಂಬದ ಬಳಿ ಮಾನವ ಸರಪಳಿ ನಿರ್ಮಿಸಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು. ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ವಿವರಿಸಲಾಗುವುದು. ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತಿಳಿಸಿದ್ದಾರೆ.

ಕೊಡವ ಸಮುದಾಯದ ಹಕ್ಕೊತ್ತಾಯಗಳಿಗೆ ಮತ್ತು ಜಾಗೃತಿ ಮೂಡಿಸುವುದಕ್ಕಾಗಿ ಮಾನವ ಸರಪಳಿ ಕಾರ್ಯಕ್ರಮವು ವಿರಾಜಪೇಟೆಯಲ್ಲಿ ಶಾಂತಿಯುತವಾಗಿ ನಡೆಯಲಿದ್ದು ಕದನೂರು, ಚೆಂಬೆಬೆಳ್ಳೂರು, ಬಿಟ್ಟಂ ಗಾಲ, ಬೇಟೋಳಿ, ಕಡಂಗಮರೂರು, ಮಗ್ಗುಲ, ಐಮಂಗಲ ಭಾಗದ ಕೊಡವ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಅಕ್ರಮ ಅಕ್ಕಿ ಸಾಗಿಸುತ್ತಿದ್ದವನ ಬಂಧನ



ಸೋಮವಾರಪೇಟೆ ಆಹಾರ ಇಲಾಖೆ ಅಧಿಕಾರಿಗಳು ಆರೋಪಿಯನ್ನು ಬಂಧಿಸಿ 4 ಟನ್ ಅಕ್ಕಿಯನ್ನು ವಶಕ್ಕೆ ಪಡೆದರು.

4 ಟನ್ ಅಕ್ಕಿ ವಶ

ಮಡಿಕೇರಿ: ಅಕ್ರಮವಾಗಿ ಸೊಸೈಟಿ ಅಕ್ಕಿ ಸಾಗಿಸುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಸೋಮವಾರಪೇಟೆ ಆಹಾರ ಇಲಾಖೆ ಅಧಿಕಾರಿಗಳು ಆರೋಪಿಯನ್ನು ಬಂಧಿಸಿ 4 ಟನ್ ಅಕ್ಕಿಯನ್ನು ವಶಕ್ಕೆ ಪಡೆದಿದ್ದಾರೆ.

ಕೊಣನೂರು ಗ್ರಾಮದ ನಿವಾಸಿ ಇದ್ರೀಸ್ ಎಂಬಾತನೇ ಅಕ್ಕಿಯನ್ನು ಸಾಗಿಸುತ್ತಿದ್ದವನಾಗಿದ್ದು, ಸಂತೆ ದಿನವಾದ ಸೋಮವಾರ ಪಟ್ಟಣದಲ್ಲಿ ಸೊಸೈಟಿ ಅಕ್ಕಿ ಸಂಗ್ರಹಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಆಹಾರ ಇಲಾಖೆ ಮತ್ತು ಪೊಲೀಸ್ ಇಲಾಖೆ ತಂಡ ಇಲ್ಲಿನ ತೋಟಗಾರಿಕಾ ಇಲಾಖೆ ಕಚೇರಿ ಸಮೀಪ ನಿಂತಿದ್ದ ಲಾರಿಯನ್ನು ಪರಿಶೀಲಿಸಿದಾಗ 1.42 ಲಕ್ಷ ರೂ. ಮೌಲ್ಯದ 4200 ಕೆ.ಜಿ ಅಕ್ಕಿಯನ್ನು ಚೀಲಗಳಲ್ಲಿ ಸಂಗ್ರಹಿಸಿ ಸಾಗಾಟ ಮಾಡಲು ಸಿದ್ದತೆ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಅಗತ್ಯ ವಸ್ತುಗಳ ಕಾಯಿದೆ ಅಡಿಯಲ್ಲಿ ಸೋಮವಾರಪೇಟೆ ಪೊಲೀಸರಿಗೆ ಆಹಾರ ಇಲಾಖೆ ಅಧಿಕಾರಿಗಳು ದೂರು ನೀಡಿದ್ದಾರೆ. ಬಳಿಕ ಆರೋಪಿಯನ್ನು ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಸೋಮವಾರಪೇಟೆ ಆಹಾರ ನಿರೀಕ್ಷಕಿ ಯಶಸ್ವಿನಿ, ಸಿಬ್ಬಂದಿ ವಿನೋದ್, ಗ್ರಾಮ ಆಡಳಿತಾಧಿಕಾರಿ ನಾಗೇಂದ್ರ ಹಾಗೂ ಪೊಲೀಸ್ ಸಿಬ್ಬಂದಿ ದಾಲಿ ಈ ಸಂದರ್ಭದಲ್ಲಿ ಹಾಜರಿದ್ದರು.

ಬೆಳ್ಳಿ ಹಬ್ಬದ ಅಂಗವಾಗಿ ರಾಜ್ಯ ಮಟ್ಟದ ಕ್ರೀಡೋತ್ಸವ

ಮಡಿಕೇರಿ,ಆ.25– ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ನ ರಾಜ್ಯ ಮಟ್ಟದ ಕ್ರೀಡೋತ್ಸವವನ್ನು ನಗರದಲ್ಲಿ ಹಮ್ಮಿಕೊಂಡಿತ್ತು.

ರಾಜ್ಯದ ವಿವಿಧೆಡೆಯಿಂದ ಆಗಮಿಸಿದ 50ಕ್ಕೂ ಹೆಚ್ಚಿನ ವೈದ್ಯರು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿದ್ದರು. ವೈದ್ಯರಿಗಾಗಿ ಶಟಲ್‌ನಲ್ಲಿ ಪುರುಷರು, ಮಹಿಳೆಯರು, ವಿದ್ಯಾರ್ಥಿಗಳ ವಿಭಾಗ ಹಾಗೂ ಸಂಘಟಿತ ವಿಭಾಗದಲ್ಲಿ ಕ್ರೀಡಾ ಸ್ಪರ್ಧೆಗಳು ಜರುಗಿದವು. ಇದರೊಂದಿಗೆ ಚೆಸ್ ಹಾಗೂ ಕೇರಂ ಸ್ಪರ್ಧೆಗಳು ಕೂಡ ಆಯೋಜಿಸಲ್ಪಟ್ಟಿದ್ದವು.

ಅ.18 ರಂದು ನಡೆಯಲಿರುವ ಬೆಳ್ಳಿ ಹಬ್ಬದ ಆಚರಣೆ ಕಾರ್ಯಕ್ರಮದಲ್ಲಿ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ವಿತರಿಸಲಾಗುವುದು.

ಖರೀದಿ ಕೇಂದ್ರದ ಬದಲು ಮದ್ಯದಂಗಡಿ ತೆರೆಯುತ್ತಿರುವ ಸರ್ಕಾರ

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಭಾಗ್ಯರಾಜ್ ಟೀಕೆ



ತಾಲೂಕು ನರಸಮಂಗಲದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಲಾಯಿತು.

ಚಾಮರಾಜನಗರ, ಆ.25– ರೈತರು ಬೆಳೆದ ಬೆಳೆಗಳನ್ನು ನ್ಯಾಯಯುತ ಬೆಲೆಯಲ್ಲಿ ಕೊಂಡು ಕೊಳ್ಳುವ ಸಲುವಾಗಿ ಗ್ರಾಮೀಣ ಭಾಗದಲ್ಲಿ ಖರೀದಿ ಕೇಂದ್ರ ತೆರೆಯದೆ ಮದ್ಯದ ಅಂಗಡಿ ತೆರೆಯಲು ಹೊರಟಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಟೀಕಿಸಿದರು.

ತಾಲೂಕಿನ ನರಸಮಂಗಲ ಗ್ರಾಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಬೆಳೆದ ಬೆಳೆಗಳನ್ನು ನ್ಯಾಯಯುತ ಬೆಲೆಯಲ್ಲಿ ಕೊಂಡುಕೊಳ್ಳುವ ಸಲುವಾಗಿ ಖರೀದಿ ಕೇಂದ್ರಗಳನ್ನು ತೆರೆಯಬೇಕೆಂಬುದು ರೈತರ ಒತ್ತಾಯ ಆದರೆ, ಗ್ರಾಮೀಣ ಭಾಗದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯದೆ ರಾಜ್ಯ ಸರ್ಕಾರ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮದ್ಯದ ಅಂಗಡಿ ತೆರೆಯಲು ಹೊರಟಿದೆ. ಮದ್ಯದ ಹಾವಳಿಯಿಂದ ಕುಟುಂಬಗಳು ನಾಶವಾಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಳೆ ವಿಮೆ ಬದಲಾವಣೆಗಾಗಿ ರೈತರು ಹೋರಾಟದ ಮೂಲಕವೇ ಪಡೆಯಬೇಕು ರೈತನ ಹೊಲದಲ್ಲಿನ ಬೆಳೆ ವಿಮೆ ಜಾರಿಗೆ ತರಬೇಕು. ಅದನ್ನು ಬಿಟ್ಟು ಹೋಬಳಿ ಮಟ್ಟ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬೆಳೆ ನಷ್ಟ ನಿಗದಿ ಮಾಡುವುದರಿಂದ ಎಲ್ಲರಿಗೂ ಬೆಳೆ ವಿಮೆಯ ನಷ್ಟ ಪರಿಹಾರ ಸಿಗುವುದು ಕಷ್ಟವಾಗಿದೆ. ಬೆಳೆ ನಷ್ಟ ಅನುಭವಿಸಿದ ರೈತನಿಗೆ ಸೂಕ್ತ ಬೆಳೆ ನಷ್ಟ ಸಿಗುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಬೆಳೆ ವಿಮೆಯ ಮಾನದಂಡವನ್ನು ಕೇಂದ್ರ ಸರ್ಕಾರ ತಕ್ಷಣ ಬದಲಾವಣೆ ಮಾಡಬೇಕು. ಶಾಸಕರು ಮತ್ತು ಸಂಸದರು ತಮ್ಮ ಸಂಬಳ ವೇತನ ಸಾರಿಗೆಯನ್ನು ಹಾಗೂ ಅಧಿಕಾರಿವರ್ಗದ ವೇತನಗಳನ್ನು ಪರಿಷ್ಕರಣೆಗಾಗಿ ವೇತನ ಆಯೋಗವನ್ನು ರಚನೆ ಮಾಡಿ ತಮಗೆ ಮನಬಂದಂತೆ ವೇತನವನ್ನು ಹೆಚ್ಚಿಸಿಕೊಳ್ಳುತ್ತವೆ. ಕೃಷಿ ಉತ್ಪನ್ನಗಳ ಸ್ಥಿರ ಬೆಲೆ ಕಾಯ್ದುಕೊಳ್ಳಲು ಕೃಷಿ ಆವರ್ತನಿಧಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಹಂಡುವಿನಹಳ್ಳಿ ರಾಜು, ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ವಳಗೆರೆ ಗಣೇಶ್, ನಾಗಮಲ್ಲಪ್ಪ ಮಲೆಯೂರು ಮಹೇಂದ್ರ ಪ್ರಕಾಶ್ ಗಾಂಧಿ ಸ್ವಾನಡ್ರಹಳ್ಳಿ ಮಲ್ಲು ಬಸವರಾಜು, ಗುರುವಿನಪುರ ಮೋಹನ್ ಚಂದ್ರು, ಹೊನ್ನಗೌಡನ ಹಳ್ಳಿ ಮಹೇಶ್ ಮುಕ್ಕಡಹಳ್ಳಿ ಇದ್ದರು.

ಹೆದ್ದಾರಿ ತಡೆಗೋಡೆ ಕುಸಿತ; ಸಂಸದರು ತಕ್ಷಣ ಬಾರದಿದ್ದರೆ ನಾಟಿ ಹಾಕಿ ಪ್ರತಿಭಟನೆ



ಹೆದ್ದಾರಿ ತಡೆಗೋಡೆ ಕುಸಿದು ಬಿದ್ದಿರುವುದು.

ಕೊಳ್ಳೇಗಾಲ: ತಡೆಗೋಡೆ ಕುಸಿತ ಪ್ರಕರಣದಲ್ಲಿ ಕೂಡಲೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಅಮಾನತ್ತುಗೊಳಿಸಬೇಕು, ಸಂಸದ ಸುನೀಲ್ ಬೋಸ್ ಮುಂದಿನ ಕ್ರಮಕೈಗೊಳ್ಳದಿದ್ದರೆ ಹೆದ್ದಾರಿ ರಸ್ತೆಯಲ್ಲೆ ನಾಟಿ ಮಾಡಿ ಪ್ರತಿಭಟಿಸಬೇಕಾಗುತ್ತದೆ ಎಂದು ಮಾಜಿ ಶಾಸಕ ಎಸ್. ಬಾಲರಾಜು ಹೇಳಿದರು

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ತಾಲೂಕಿನ ಉತ್ತಂಬಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯ ತಡೆಗೋಡೆ ಕುಸಿತವಾಗಿದ್ದರೂ ಸ್ಥಳಕ್ಕೆ ಆಗಮಿಸದಿರುವ ಬೆಳವಣಿಗೆ ಸರಿಯಲ್ಲ, ವಿಚಾರ ತಿಳಿದ ತಕ್ಷಣ ಬಾಗಲಕೋಟೆಯಿಂದ ಬಂದಿದ್ದೇನೆ, ಮೈಸೂರಿನಿಂದ ಬರಲು ಏಕೆ ತಡಮಾಡಿ ದ್ದಾರೆ ಎಂದು ಪ್ರಶ್ನಿಸಿದರು.

ಸಂಸದರು ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬರಬೇಕಿತ್ತು, ಸ್ಥಳೀಯ ಶಾಸಕರು ವಿಚಾರ ತಿಳಿದು ತಕ್ಷಣ ಬಂದು ವೀಕ್ಷಿಸಿದ್ದಾರೆ. ಆದರೆ ಮೈಸೂರಿನಲ್ಲಿರುವ ಸಂಸದರು ಬಾರದಿರುವ ಕ್ರಮ ಸರಿಯಲ್ಲ, ಅವರು ಬೇಗ ಏಳುವುದನ್ನ ರೂಡಿಸಿಕೊಳ್ಳಬೇಕು, ಅಭಿವೃದ್ಧಿಪರ, ಸ್ಪಂದನಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ತಡೆಗೋಡೆ ಕುಸಿತ ಸ್ಥಳಕ್ಕೆ ಉಸ್ತುವಾರಿ ಸಚಿವರು, ಮೈಸೂರು ಉಸ್ತುವಾರಿ ಸಚಿವರು ಆಗಮಿಸಬೇಕಿತ್ತು, ಇನ್ನು ಸಹ ಸ್ಥಳಕ್ಕೆ ಆಗಮಿಸದಿರುವುದು ಇವರ ಬೇಜವಾಬ್ದಾರಿತನ ಪ್ರದರ್ಶಿಸುವಂತಿದೆ. ಕೂಡಲೆ ಆಗಮಿಸಿ ತಡೆ ಗೋಡೆ ಕುಸಿತ ಸಂಬಂಧ ಅಧಿಕಾರಿಗಳಿಂದ ವರದಿ ಪಡೆದುಕೊಂಡು ತಪ್ಪಿತಸ್ಥರು ಯಾರೇ ಆಗಿದ್ದರೂ ಕ್ರಮವಹಿಸುವಂತಾಗಬೇಕು ಎಂದರು.

ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿದ್ಯಾಲಯದಲ್ಲಿ ರಕ್ತದಾನ ಶಿಬಿರ



ವಿಶ್ವಬಂಧುತ್ವ ದಿನದ ನಿಮಿತ್ತ ರಕ್ತದಾನ ಶಿಬಿರದಲ್ಲಿ ದಾನಿಗಳು ರಕ್ತವನ್ನು ನೀಡುತ್ತಿರುವುದು

ಯಳಂದೂರು, ಆ 25(ವಿ.ನಾಗರಾಜು)– ಪಟ್ಟಣದ ಅಗ್ರಹಾರ ಬೀದಿಯಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಭಾನುವಾರ ರೋಟರಿ ಗ್ರೀನ್‌ವೇ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಮಹಾಲಕ್ಷ್ಮೀಜಿ ಮಾತನಾಡಿ, ರಾಜಯೋಗಿನಿ ಪ್ರಕಾಶಮಣಿ ದಾದೀಜಿ ಪುಣ್ಯಸ್ಮೃತಿ ಮತ್ತು ವಿಶ್ವ ಬಂಧುತ್ವ ದಿನದ ಅಂಗವಾಗಿ ಹಮ್ಮಿಕೊಂಡಿದ್ದು, ಪ್ರತಿ ವರ್ಷ 20 ಲಕ್ಷಕ್ಕೂ ಅಧಿಕ ಜನರು ರಕ್ತದ ಕೊರತೆಯಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಪ್ರತಿಯೊಬ್ಬ 18 ರಿಂದ 60 ವರ್ಷ ಪ್ರಾಯದ ಆರೋಗ್ಯ ವ್ಯಕ್ತಿಯೂ ರಕ್ತದಾನ ಮಾಡುವುದು, ಇನ್ನೊಂದು ಜೀವ ಉಳಿಸುವ ಪುಣ್ಯದ ಕಾರ್ಯವಾಗಿರುವುದರಿಂದ ಪ್ರತಿಯೊಬ್ಬರೂ ರಕ್ತದಾನವನ್ನು ಮಾಡಬೇಕು ಎಂದರು.

ರೋಟರಿ ಕ್ಲಬ್‌ನ ಅಧ್ಯಕ್ಷ ವೈಜಿ. ನಿರಂಜನ್, ಖಜಾಂಚಿ ಗೌಡಹಳ್ಳಿ ರವಿ, ಸದಸ್ಯರಾದ ವೈಡಿ.ಸೂರ್ಯನಾರಾಯಣ, ವೈಕೆ. ಮೋಳೆ ನಾಗರಾಜು, ರುದ್ರಯ್ಯ, ಪ್ರಕಾಶ್ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ಶೋಭಾ, ಗೀತಾ, ಬಸವರಾಜಪ್ಪ, ಪುಟ್ಟಸ್ವಾಮಿ, ಜಾನಕಮ್ಮ, ಸಾವಿತ್ರಮ್ಮ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ರಂಜನಿ, ದುಗ್ಗಹಟ್ಟಿ ಕುಮಾರ್, ಸಾಹಸ್, ಚಂದ್ರು, ಈಶ್ವರ್, ಮಧು, ಶ್ರೀಧರ್, ಚೇತನ್ ಇದ್ದರು.

ಸೇತುವೆ ತಡೆಗೋಡೆಗೆ ಬೈಕ್ ಡಿಕ್ಕಿ; ಸವಾರ ಸಾವು



ಚಾಮರಾಜನಗರ: ಸುವರ್ಣಾವತಿ ಸೇತುವೆಗೆ ಬೈಕ್ ಡಿಕ್ಕಿಯಾಗಿ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಚಂದಕವಾಡಿ ಗ್ರಾಮದ ಬಳಿ ನಡೆದಿದೆ.

ತಾಲೂಕಿನ ಮಲ್ಲುಪುರ ಗ್ರಾಮದ ನಂದ ಕುಮಾರ್(30) ಮೃತ ವ್ಯಕ್ತಿ. ಈತ ಚಂದಕವಾಡಿ ಗ್ರಾಮದ ಕೆಇಬಿ ವಿಭಾಗದಲ್ಲಿ ನೌಕರರಾಗಿದ್ದು, ಶನಿವಾರ ರಾತ್ರಿ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಬೈಕ್ ನಿಯಂತ್ರಣ ತಪ್ಪಿ ಚಂದಕವಾಡಿ ಬಳಿ ಇರುವ ಸೇತುವೆಗೆ ಡಿಕ್ಕಿ ಹೊಡೆದಿದ್ದು, ತೀವ್ರ ಗಾಯಗೊಂಡಿದ್ದರು.

ಆತನನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ



ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಗಾಂಧಿವಾದಿ ಸಿ.ರಂಗಸ್ವಾಮಿ ಸ್ಮರಣೆ ಕಾರ್ಯಕ್ರಮವನ್ನು ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್ ಉದ್ಘಾಟಿಸಿದರು.

ಚಾಮರಾಜನಗರ: ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಕ್ವಿಟ್ ಇಂಡಿಯಾ ಚಳುವಳಿಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಗಾಂಧಿವಾದಿ ಸಿ. ರಂಗಸ್ವಾಮಿ ಅವರ ಸ್ಮರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರದಲ್ಲಿ ಗಾಂಧಿವಾದಿಗಳಾದ ರಂಗಸ್ವಾಮಿ ಹಾಗೂ ಇತರರು ಗಾಂಧೀಜಿಯವರ ಅನುಯಾಯಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಚಳವಳಿಗಳನ್ನು ಪ್ರೇರೇಪಿಸಿದರು. ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಪ್ರತಿಯೊಬ್ಬರೂ ವಿದೇಶಿ ವಸ್ತುಗಳನ್ನು ನಿರಾಕರಿಸಿ, ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ದೇಶಪ್ರೇಮವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿ, ಅನೇಕ ಮಹನೀಯರ ತ್ಯಾಗ, ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆತು 79 ವರ್ಷಗಳು ತುಂಬಿದೆ. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದಿಂದ ನಾವೆಲ್ಲರೂ ಚೆನ್ನಾಗಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರರನ್ನು ಸದಾ ಸ್ಮರಿಸುವ ಕೆಲಸ ಆಗಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶೈಲೇಶ್ ಕುಮಾರ್ ಮಾತನಾಡಿ, ಕ್ವಿಟ್ ಇಂಡಿಯಾ ಚಳವಳಿ ಬ್ರಿಟಿಷರಿಗೆ ಕೊಟ್ಟ ಶಾಪ. ಮಾಡು ಇಲ್ಲವೆ ಮಡಿ ಭಾರತೀಯರಿಗೆ ಕೊಟ್ಟ ಮಂತ್ರ. ವ್ಯಾಪಾರಕ್ಕಾಗಿ ಬ್ರಿಟಿಷರು ಭಾರತಕ್ಕೆ ಬಂದು ಭಾರತದಲ್ಲಿ ಸಂಪಾದನೆ ಮಾಡಿ ದೇಶದಲ್ಲಿ ದೌರ್ಜನ್ಯ ಮಾಡುತ್ತಿದ್ದರು. ಅವರ ವಿರುದ್ಧ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರತಿಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಅದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ರಾಷ್ಟ್ರ ಯುವ ಪ್ರಶಸ್ತಿ, ಪುರಸ್ಕೃತ ಸುರೇಶ್ ಎನ್.ಗುದ್ವೇದಿ ಮಾತನಾಡಿ, ವರ್ಷದಲ್ಲಿ 2 ದಿನವಾದರೂ ಕೂಡ ಖಾದಿಬಟ್ಟೆ ತೊಡುವ ಸಂಕಲ್ಪ ಮಾಡೋಣ. ಖಾದಿ ನಮ್ಮ ರಾಷ್ಟ್ರೀಯ ಹೆಮ್ಮೆಯ ಸಂಕೇತ, ಖಾದಿಗಾಗಿ, ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ತಮ್ಮ ಪ್ರಾಣ ಅರ್ಪಿಸಿದರು ಎಂದರು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಉದ್ಯಮಿ ಶ್ರೀನಿಧಿ ಕುದರ್ ಮಾತನಾಡಿದರು.

ಸನ್ಮಾನ: ಜಿಲ್ಲಾ ಗೃಹರಕ್ಷಕ ದಳದ ಕಮಾಂಡೆಂಟ್ ಎಸ್.ಜಿ.ಮಹಾಲಿಂಗಸ್ವಾಮಿ, ದೈಹಿಕ ಶಿಕ್ಷಣ ಶಿಕ್ಷಕಿ ಸುಶೀಲ, ಆಶ್ರಯ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ರಮೇಶ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಸದಸ್ಯ ಗಣೇಶದೀಕ್ಷಿತ್, ಚಾ.ವೆಂ.ರಾಜ್ ಗೋಪಾಲ್, ಮಹಾಸಭಾದ ಪಣ್ಯದ ಹುಂಡಿ ರಾಜು, ಮಹೇಶ್ ಗೌಡ, ಅರುಣ್‌ಕುಮಾರ್ ಗೌಡ, ಲೋಕೇಶ್ ಹೊಮ್ಮ, ಮುತ್ತಿಗೆ ಗೋವಿಂದರಾಜು, ನಂಜುಂಡಸ್ವಾಮಿ, ಮುತ್ತು ರಾಜ್, ಆಟೋ ಲಿಂಗರಾಜು, ಚನ್ನಶೆಟ್ಟಿ ಹಾಗೂ ಇತರರು ಹಾಜರಿದ್ದರು.

ಜಿಲ್ಲೆಯಾದ್ಯಂತ ಕೋಟ್ಪಾ ದಾಳಿ 86,240 ರೂ. ದಂಡ

ಚಾಮರಾಜನಗರ: ತಹಶೀಲ್ದಾರ್ ನೇತೃತ್ವದ ತಾಲೂಕು ಕೋಟ್ಪಾ ತನಿಖಾ ತಂಡ ದಾಳಿ ನಡೆಸಿ ಒಟ್ಟು 687 ಪ್ರಕರಣಗಳಲ್ಲಿ 86,240 ರೂ. ದಂಡ ವಿಧಿಸಿದೆ.

ನಗರ ತಾಲೂಕಿನ ಬಿಸಿಲವಾಡಿ, ಕೋಳಿಪಾಳ್ಯ, ಪುಣಜನೂರು, ನಾಗವಳ್ಳಿ, ಅರಕಲವಾಡಿ, ಕೊಳ್ಳೇಗಾಲ ಪಟ್ಟಣ, ತಾಲೂಕಿನ ಕಾಮಗೆರೆ, ಜಾಗೇರಿ, ಶಿವನಸಮುದ್ರ, ಟಗರಪುರ, ಹೊಸಮಾಲಂಗಿ, ಗುಂಡ್ಲುಪೇಟೆ ಪಟ್ಟಣ, ತಾಲೂಕಿನ ತೆರಕಣಾಂಬಿ, ಬೇಗೂರು, ಶಿಂಡನಪುರ, ಕಂದೇಗಾಲ, ಕಗ್ಗಳ, ಯಳಂದೂರು ಪಟ್ಟಣ, ತಾಲೂಕಿನ ಹೊನ್ನೂರು, ದುಗ್ಗಟ್ಟಿ, ಮೆಲ್ಲಹಳ್ಳಿ, ಕೃಷ್ಣಪುರ, ಉಪ್ಪಿನಮೋಳೆ, ಗುಂಬಳ್ಳಿ, ಬಿಳಿಗಿರಿರಂಗನಬೆಟ್ಟ ಯರಿಯೂರು ಮತ್ತು ಅಗರ–ಮಾಂಬಳ್ಳಿ, ಹನೂರು ಪಟ್ಟಣ, ತಾಲೂಕಿನ ಗೋಪಿಶೆಟ್ಟಿಯೂರು, ಪಳನಿಮೇಡು, ಕೆಂಪಯ್ಯನಹಟ್ಟಿ, ನಾಲ್ ರೋಡ್, ಸುದನಪಾಳ್ಯ, ಸುಳ್ವಾಡಿ, ಒಡೆಯರಪಾಳ್ಯ ಮತ್ತು ಬಂಡಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ದಾಳಿ ನಡೆಸಲಾಯಿತು.

ಶಿಕ್ಷಾರ್ಹ ಅಪರಾಧ ಕುರಿತ ನಾಮಫಲಕವನ್ನು ಪ್ರದರ್ಶಿಸದ ಅಂಗಡಿಗಳಿಗೆ, ಸಾರ್ವಜನಿಕವಾಗಿ ಧೂಮಪಾನ ಮಾಡುವವರಿಗೆ ಸ್ಥಳದಲ್ಲಿಯೇ ಪ್ರಕರಣಗಳನ್ನು ದಾಖಲಿಸಿದೆ.

ಲಿಯೋನೀರಾ ಮೇರಾಡ ನಿಧನ



ಚಾಮರಾಜನಗರ, ಆ.25– ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ನಿವಾಸಿ ರೈತ ಮಹಿಳೆ ಲಿಯೋನೀರಾ ಮೇರಾಡ (79) ಸೋಮವಾರ ನಿಧನರಾದರು. ಮೃತರು ರೈತ ಸಂಘದ ಹೋರಾಟಗಾರ್ತಿಯಾಗಿದ್ದರು. ಮೃತರು ಪತಿ, ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯ ಕ್ರಿಯೆ ಸ್ವಗ್ರಾಮದ ಕ್ರೈಸ್ತರುದ್ರಭೂಮಿಯಲ್ಲಿ ಮಂಗಳವಾರ ನಡೆಯಲಿದೆ.

ಮೈಸೂರಿನ ಕೆ.ಎಸ್.ಮಧುಸೂದನ್‌ಗೆ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ

ಸೆ. 5ರಂದು ರಾಷ್ಟ್ರಪತಿಯಿಂದ ಪ್ರದಾನ



ಮಧುಸೂದನ್

'ರಾಷ್ಟ್ರೀಯ ಉತ್ತಮ ಶಿಕ್ಷಕ' ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಮಧುಸೂದನ್ ಕೆ.ಎಸ್. ಅವರ ವ್ಯಕ್ತಿ-ವೃತ್ತಿ ಚಿತ್ರಾ ಆ.26 ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾಗಲಿದೆ.

ನವದೆಹಲಿ, ಆ. 25– ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಇಲಾಖೆಯಿಂದ ಈ ವರ್ಷದ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ವರ್ಷ 45 ಶಿಕ್ಷಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಅವರಲ್ಲಿ ಮೈಸೂರಿನ ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ವಿಜ್ಞಾನ ಶಿಕ್ಷಕರಾಗಿರುವ ಕೆ.ಎಸ್.ಮಧುಸೂದನ್ ಅವರಿಗೆ ಈ ವರ್ಷದ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಘೋಷಣೆಯಾಗಿದೆ. ಸೆಪ್ಟೆಂಬರ್ 5ರಂದು ನವದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಧುಸೂದನ್ ಸೇರಿದಂತೆ ಒಟ್ಟು 45 ಶಿಕ್ಷಕರಿಗೆ ಪ್ರಶಸ್ತಿ ನೀಡಲಿದ್ದಾರೆ.

ಶಿಕ್ಷಣದಲ್ಲಿ ಮತ್ತು ಯುವಜನರ ಬೆಳವಣಿಗೆಗೆ ಸಹಾಯ ಮಾಡಿದ್ದಕ್ಕಾಗಿ ಶಿಕ್ಷಕರಿಗೆ ಧನ್ಯವಾದ ಹೇಳಲು ಈ ಕಾರ್ಯಕ್ರಮವು ಪ್ರತಿ ವರ್ಷ ನಡೆಯುತ್ತದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರತಿಯೊಬ್ಬ ಶಿಕ್ಷಕರಿಗೆ ಪ್ರಮಾಣಪತ್ರ, ನಗದು ಬಹುಮಾನ ಮತ್ತು ಬೆಳ್ಳಿ ಪದಕವನ್ನು ನೀಡಲಾಗುತ್ತದೆ. ಪ್ರತಿವರ್ಷ ಶಿಕ್ಷಕರ ದಿನವಾದ ಸೆಪ್ಟೆಂಬರ್ 5ರಂದು ರಾಷ್ಟ್ರಪತಿಗಳು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

ಈ ವರ್ಷ ಆಯ್ಕೆಯಾದ ಶಿಕ್ಷಕರಲ್ಲಿ ತಲಾ ಮೂವರು ಮಹಾರಾಷ್ಟ್ರ ಮತ್ತು ಬಿಹಾರದವರು. ಮಧ್ಯಪ್ರದೇಶ, ಛತ್ತೀಸ್‌ಗಢ, ಗುಜರಾತ್, ಉತ್ತರ ಪ್ರದೇಶ, ತಮಿಳುನಾಡು, ಒಡಿಶಾ ಮತ್ತು ಪಶ್ಚಿಮಬಂಗಾಳದಿಂದ ತಲಾ ಇಬ್ಬರು ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕ, ಹರಿಯಾಣ, ಪುದುಚೇರಿ, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಲಕ್ಷದ್ವೀಪ, ಜಾರ್ಖಂಡ್, ಅಸ್ಸಾಂ, ತ್ರಿಪುರ, ಮೇಘಾಲಯ, ಸಿಕ್ಕಿಂ, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಅಂಡಮಾನ್ ನಿಕೋಬಾರ್, ಜಮ್ಮು ಮತ್ತು ಕಾಶ್ಮೀರ, ಗೋವಾ, ರಾಜಸ್ಥಾನ, ಚಂಡೀಗಢ, ಉತ್ತರಾಖಂಡ, ದೆಹಲಿ, ಪಂಜಾಬ್, ಹಿಮಾಚಲ ಪ್ರದೇಶದ ತಲಾ ಓರ್ವ ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪುರಸ್ಕೃತರಿಗೆ ಪ್ರಮಾಣಪತ್ರ, 50,000 ರೂ. ನಗದು ಬಹುಮಾನ ಮತ್ತು ಬೆಳ್ಳಿ ಪದಕ ನೀಡಲಾಗುವುದು. ಶಿಕ್ಷಣ ಸಚಿವಾಲಯವು ಆಯ್ಕೆಯಾದ ಶಿಕ್ಷಕರಿಗೆ ಸೆ.3ರಿಂದ 6ರವರೆಗೆ ನವದೆಹಲಿಯ ಹೋಟೆಲ್ 'ದಿ ಅಶೋಕ್'ನಲ್ಲಿ ತಂಗಲು ವ್ಯವಸ್ಥೆ ಮಾಡಿದೆ. ಶಿಕ್ಷಕರ ಸಭೆ ಸೆ.3ರಂದು ಸಂಜೆ 5 ಗಂಟೆಗೆ ಹೋಟೆಲ್‌ನಲ್ಲಿ ನಡೆಯಲಿದೆ.

ವಿಶ್ವ ಪ್ರವಾದಿ ಮಹಮ್ಮದ್ ಪೈಗಂಬರ್ ಜನ್ಮದಿನ ಹಿನ್ನೆಲೆ

ಸುನ್ನಿ ಯುವಜನ ಸಂಘದಿಂದ ಘೋಷಣಾ ಮೆರವಣಿಗೆ



ವಿಶ್ವ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನ ಅಂಗವಾಗಿ ಸುನ್ನಿ ಯುವಜನ ಸಂಘ (ಎಸ್‌ವೈಎಸ್)ವು ಸೋಮವಾರ ಸಂಜೆ ಘೋಷಣಾ ಮೆರವಣಿಗೆ ನಡೆಸಿತು.

ಮೈಸೂರು, ಆ.25(ಎಸ್‌ಪಿಎನ್)– ವಿಶ್ವ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನ ಅಂಗವಾಗಿ ಸುನ್ನಿ ಯುವಜನ ಸಂಘ(ಎಸ್‌ವೈಎಸ್)ವು ಸೋಮವಾರ ಸಂಜೆ ಘೋಷಣಾ ಮೆರವಣಿಗೆ ನಡೆಸಿತು.

ಮೈಸೂರು ಅಶೋಕ ರಸ್ತೆಯ ಮಿಲಾದ್ ಪಾರ್ಕ್ ಮುಂಭಾಗ ಎಸ್‌ವೈಎಸ್ ಸಂಘಟನೆಯ ರಾಜ್ಯಾಧ್ಯಕ್ಷ ಅಬ್ದುಲ್ ಬಶೀರ್ ಸಹದಿ ವಕ್ಫ್ ಬೋರ್ಡ್ ಜಿಲ್ಲಾ ಅಧ್ಯಕ್ಷ ಅಜೀಜ್ ಉಲ್ಲಾ ಅಜ್ಜು ಅವರಿಗೆ ಧ್ವಜ ಹಸ್ತಾಂತರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಬ್ದುಲ್ ಬಶೀರ್ ಸಹದಿ ಮಾತನಾಡಿ, ಎಸ್‌ವೈಎಸ್ ಸಂಘಟನೆಯು ರಾಜ್ಯದೆಲ್ಲೆಡೆ ಜಾಥಾ ಆಯೋಜಿಸುತ್ತಿದ್ದು, ಸಾಂಸ್ಕೃತಿಕ ನಗರದಲ್ಲಿ ಮೊದಲ ಮೆರವಣಿಗೆ ನಡೆಯುತ್ತಿರುವುದು ಸಂತಸದ ವಿಚಾರ. ಸಹಬಾಳ್ವೆಯ ಸಂಕೇತವಾಗಿ ಈ ಕಾರ್ಯಕ್ರಮ ನಡೆಯುತ್ತಿದೆ. ನಮ್ಮ ಸಂಘಟನೆಯು ದೇಶಾದ್ಯಂತ ನೂರಾರು ಜಾಥಾ, ಸಮಾವೇಶಗಳನ್ನು ಆಯೋಜಿಸಿದ್ದು ಕಾನೂನು ಉಲ್ಲಂಘನೆಯಾಗದಂತೆ ನೋಡಿಕೊಂಡಿದ್ದೇವೆ. ಇದು ಸಂಘದ ಬದ್ಧತೆಯನ್ನು ತೋರಿಸುತ್ತದೆ ಎಂದರು.

ಮದರಸ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು. ಮೆರವಣಿಗೆಯಲ್ಲಿ ಸಂಘಟನೆಯ ಬಾವುಟ ಬೀಸುತ್ತಾ ಸಾಗಿದರು. ಉಲ್ಮಾಗಳು, ಅರೇಬಿಕ್ ವಿದ್ಯಾರ್ಥಿಗಳು, ನಗರ ಸುನ್ನಿ ಮುಸ್ಲಿಂ ಜಮಾತ್, ಸೂಫಿಜಾಮ್, ಮುಶಾಯಿಕಿನ್‌ಗಳು, ಇತರೆ ಮುಖಂಡರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಮಿಲಾದ್ ಪಾರ್ಕ್ ಮುಂಭಾಗದಿಂದ ಆರಂಭವಾದ ಮೆರವಣಿಗೆಯು ಅಶೋಕ ರಸ್ತೆ, ಫೌಂಟೇನ್ ವೃತ್ತ, ಹಜರತ್ ಟಿಪ್ಪು ವೃತ್ತದ ಮೂಲಕ ಸಾಗಿ ಮೈಸೂರು–ಬೆಂಗಳೂರು ಹೆದ್ದಾರಿಯ ಮಿಲೇನಿಯಂ ಸರ್ಕಲ್ ತಲುಪಿತು. ರಾಜೇಂದ್ರ ನಗರದ ಕೆಸರೆಯಲ್ಲಿರುವ ಮಸ್ಜಿದ್ ಎ ಅಜ್ಜು (ಶಫಿ ಮಸೀದಿ)ಯಲ್ಲಿ ಮೌಲಿದ್ ಮಜ್ಲೀಸ್ ನಡೆಯಿತು. ಈ ವೇಳೆ ವಕ್ಫ್ ಮಂಡಳಿ ಸಲಹಾ ಸಮಿತಿ ಸದಸ್ಯ ಅಬ್ದುಲ್ ಸಲಾಂ ರಜ್ವಿ ಸಾಹೇಬ್, ಮೊಯೀನುದ್ದೀನ್ ಖಾದ್ರಿ, ಮೌಲಾನಾ ಸರ್ಕಾರ್ಜಿ ಉಸ್ಮಾನ್ ಶರೀಫ್ ಭಾಗವಹಿಸಿದ್ದರು.

ಅರಮನೆ ಆವರಣಕ್ಕೆ ಆಗಮಿಸಿದ ದಸರಾ ಗಜಪಡೆಯ ಎರಡನೇ ತಂಡದ ಐದು ಆನೆಗಳು

● ಸಾಂಪ್ರದಾಯಿಕ ಪೂಜೆಯೊಂದಿಗೆ ಸ್ವಾಗತ ● ದಸರಾದಲ್ಲಿ ಇದೇ ಮೊದಲು ಪಾಲ್ಗೊಂಡಿರುವ ಮೂರು ಆನೆ ● ದಸರಾ ಗಜಪಡೆಯಲ್ಲಿ ಅತ್ಯಂತ ಕಿರಿಯ ಆನೆ ಹೇಮಾವತಿ ; ಎಲ್ಲವೂ ಮಾನವ ಸ್ನೇಹಿ



ಮೈಸೂರು ಅರಮನೆಗೆ ಸೋಮವಾರ ದಸರಾ ಗಜಪಡೆಯ ಎರಡನೇ ತಂಡದ ಐದು ಆನೆಗಳು ಆಗಮಿಸಿದವು

ಇಂದು ಎರಡನೇ ತಂಡಕ್ಕೆ ತೂಕ ಪರೀಕ್ಷೆ...

ದಸರಾ ಗಜಪಡೆಗೆ ಸೆ.1ರಿಂದ ಭಾರ ಹೊರುವ ತಾಲೀಮು ಆರಂಭಿಸಲಾಗುವುದು. ನಾಳೆ (ಆ.26ರ ಮಂಗಳವಾರ) ಬೆಳಗ್ಗೆ 8 ಗಂಟೆಗೆ ಎರಡನೇ ತಂಡದ ಆನೆಗಳಿಗೆ ತೂಕ ಪರೀಕ್ಷೆಯನ್ನು ಮಾಡಲಾಗುವುದು. ತದನಂತರ ಮೊದಲನೇ ತಂಡ ಮತ್ತು ಎರಡನೇ ತಂಡದ ಎಲ್ಲಾ ಒಟ್ಟು 14 ಆನೆಗಳಿಗೆ ಆಯುರ್ವೇದಿಕ್ ಸರ್ಕಲ್‌ವರೆಗೆ ತಾಲೀಮು ನಡೆಸಲಾಗುವುದು. ಎಲ್ಲಾ ಆನೆಗಳ ಆರೋಗ್ಯ ಉತ್ತಮವಾಗಿದೆ. ಯಾವುದೇ ಸಮಸ್ಯೆ ಇಲ್ಲ. ಆನೆಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದ ಬಗ್ಗೆ ನಮಗೆ ಭರವಸೆ ಇದೆ. ಅಂತೆಯೇ ಸಾರ್ವಜನಿಕರು ಆನೆಗಳಿಂದ ಅಂತರ ಕಾಯ್ದುಕೊಳ್ಳುವುದು ಅಗತ್ಯ.

–**ಡಾ.ಐ.ಬಿ.ಪ್ರಭುಗೌಡ,** ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ).

ಮೈಸೂರು,ಆ.25(ಪಿಎಂ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಗಜಪಡೆಯ ಎರಡನೇ ತಂಡದ ಐದು ಆನೆಗಳು ಸೋಮವಾರ ಅರಮನೆ ಆವರಣ ಪ್ರವೇಶಿಸಿದವು.

ವಿವಿಧ ಶಿಬಿರಗಳಿಂದ ಲಾರಿಗಳ ಮೂಲಕ ನೇರವಾಗಿ ಅರಮನೆ ಅಂಗಳಕ್ಕೆ ಬಂದ ಐದು ಆನೆಗಳಿಗೆ ಸಾಂಪ್ರದಾಯಿಕವಾಗಿ ವಿಶೇಷ' ಪೂಜಾ ವಿಧಿವಿಧಾನಗಳೊಂದಿಗೆ ಬರಮಾಡಿಕೊಳ್ಳಲಾಯಿತು. ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ಎಲ್ಲಾ ಐದು ಆನೆಗಳನ್ನು ಸಾಲಾಗಿ ಅರಮನೆಯತ್ತ ಮುಖ ಮಾಡಿ ನಿಲ್ಲಿಸಿ ಪೂಜಾ ಕೈಂಕರ್ಯ ನಡೆಸಲಾಯಿತು. ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಎಲ್ಲಾ ಐದು ಆನೆಗಳ ಕಾಲುಗಳನ್ನು ತೊಳೆದು, ಪೂಜಾ ವಿಧಿವಿಧಾನ ನೆರವೇರಿಸಿದರು.

ಸಂಜೆಯ ಗೋಧೂಳಿ ಲಗ್ನದಲ್ಲಿ ಗಣಪತಿ ಪೂಜೆ ಆರಂಭಿಸಿದ ಅರ್ಚಕರು, ಆನೆಗಳ ಕಾಲುಗಳಿಗೆ ಅರಿಶಿನ–ಕುಂಕುಮ, ಗಂಧ ಲೇಪಿಸಿ, ಅವುಗಳ ಹಣೆ ಮೇಲೆ ಅರಿಶಿನ ಲೇಪಿಸಿ ಓಂಕಾರ ಬರೆದು, ಸೇವಂತಿಗೆ ಹೂ ಹಾರಗಳನ್ನು ಅವುಗಳ ಹಣೆಗೆ ಮುಡಿಸಿ, ಪೂಜಾ ವಿಧಿವಿಧಾನ ಕೈಗೊಂಡರು.

ಗಣಪತಿಗೆ ಪ್ರಿಯವಾದ ಚಕ್ಲಿ, ಎಳ್ಳುಂಡೆ ಜೇನುತುಪ್ಪ ಮೊದಲಾದ ತಿನಿಸುಗಳನ್ನು ಆನೆಗಳಿಗೆ ನೀಡಿದ ಬಳಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಆರ್‌ಎಫ್‌ಓ ಸೈಯದ್ ನದೀಮ್, ಪಶುವೈದ್ಯಾಧಿಕಾರಿ ಡಾ.ಆದರ್ಶ ಸೇರಿದಂತೆ ಮೊದಲಾದ ಅಧಿಕಾರಿಗಳು ಆನೆಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅರಮನೆಗೆ ಸ್ವಾಗತಿಸಿದರು.

ಆ ಮೂಲಕ ಎರಡನೇ ತಂಡದ ಆನೆಗಳಾದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮತ್ತಿಗೋಡು ಆನೆ ಶಿಬಿರದ ಶ್ರೀಕಂಠ (56 ವರ್ಷ, ಗಂಡಾನೆ), ಭೀಮನಕಟ್ಟೆ ಆನೆ ಶಿಬಿರದ ರೂಪ (44 ವರ್ಷ, ಹೆಣ್ಣಾನೆ), ಮಡಿಕೇರಿ ವಿಭಾಗದ ದುಬಾರೆ ಆನೆ ಶಿಬಿರದ ಗೋಪಿ (42 ವರ್ಷ, ಗಂಡಾನೆ), ಸುಗ್ರೀವ (43 ವರ್ಷ, ಗಂಡಾನೆ), ಹೇಮಾವತಿ (11 ವರ್ಷ, ಹೆಣ್ಣಾನೆ) ಅರಮನೆ ಆವರಣದ ಗಜಪಡೆ ಶಿಬಿರ ಸೇರಿಕೊಂಡವು. ಮೊದಲ ತಂಡದಲ್ಲಿ ಅಭಿಮನ್ಯು ನೇತೃತ್ವದಲ್ಲಿ ಆಗಮಿಸಿ ಅರಮನೆಯಲ್ಲಿ ಬೀಡುಬಿಟ್ಟಿರುವ 9 ಆನೆಗಳು ಸೇರಿದಂತೆ ಇದೀಗ ಒಟ್ಟು 14ನೇ ಆನೆಗಳು ನಾಳೆಯಿಂದ ಜಂಬೂ ಸವಾರಿಗಾಗಿ ತಾಲೀಮು ನಡೆಸಲಿವೆ.

3 ಆನೆಗಳಿಗೆ ಮೊಟ್ಟ ಮೊದಲ ದಸರಾ: ಮತ್ತಿಗೋಡು ಆನೆ ಶಿಬಿರದ ಶ್ರೀಕಂಠ, ಭೀಮನಕಟ್ಟೆ ಆನೆ ಶಿಬಿರದ ರೂಪ ಹಾಗೂ ದುಬಾರೆ ಆನೆ ಶಿಬಿರದ ಹೇಮಾವತಿ ಆನೆಗಳಿಗೆ ಇದು ಮೊಟ್ಟ ಮೊದಲ ದಸರಾವಾಗಿದೆ. ಶ್ರೀಕಂಠ ಆನೆಯನ್ನು 2014ರಲ್ಲಿ ಹಾಸನ ವಿಭಾಗದ ಶನಿವಾರ ಸಂತೆ ವಲಯದ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ತಂಡದ ಮೂಲಕ ಸುರಕ್ಷಿತವಾಗಿ ಸೆರೆಹಿಡಿಯಲಾಯಿತು. ಇದು ಉತ್ತಮ ಎತ್ತರ (2.86 ಮೀಟರ್), ಉದ್ದ ಶರೀರ (3.25 ಮೀಟರ್) ಹಾಗೂ ಅಂದಾಜು 5,500 ಕೆಜಿ ತೂಕ ಹೊಂದಿದೆ. ಶಾಂತ ಸ್ವಭಾವ ಹೊಂದಿರುವ ಇದು, ಜನರ ಜೊತೆಗೆ ಸುಲಭವಾಗಿ ಹೊಂದಿಕೊಳ್ಳುವ ಗುಣವೊಂದಿದೆ. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಸ್ಮರಣಾರ್ಥ ಇದಕ್ಕೆ ಶ್ರೀಕಂಠ ಎಂದು ನಾಮಕರಣ ಮಾಡಲಾಗಿದೆ. ಈ ಆನೆಯು ಕಾಡಾನೆ ಮತ್ತು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಳಗಿದ್ದು, ಅದರಲ್ಲೂ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಯಾವ ಅಂಜಿಕೆಯಿಲ್ಲದೇ ಮುನ್ನುಗ್ಗುವ ಧೈರ್ಯಶಾಲಿಯಾಗಿದೆ.

ಸರ್ಕಸ್‌ನಿಂದ ರಕ್ಷಿಸಲ್ಪಟ್ಟಿದ್ದ ಹೆಣ್ಣಾನೆ ರೂಪ: 44 ವರ್ಷದ ರೂಪ ಹೆಣ್ಣಾನೆಯನ್ನು 2016ರಲ್ಲಿ ಪ್ರಕೃತಿ ವಿರೋಧಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಒಂದು ಸರ್ಕಸ್ ಕಂಪನಿಯಿಂದ ರಕ್ಷಿಸಿ, ಅರಣ್ಯ ಇಲಾಖೆಯಿಂದ ಆನೆಶಿಬಿರಕ್ಕೆ ಸ್ಥಳಾಂತರಿಸಲಾಯಿತು. ಇದರಿಂದ ಇದಕ್ಕೆ ಉತ್ತಮ ಆರೈಕೆ, ಆಹಾರ ಮತ್ತು ಆರಾಮದಾಯಕ ವಾತಾವರಣ ಲಭಿಸಿತು. ಉತ್ತಮ ಪಾಲನೆ ಹಾಗೂ ತರಬೇತಿಯಿಂದ ಈ ಆನೆಯು ಶಾಂತಚಿತ್ತದಿಂದ ಜನರೊಂದಿಗೆ ಸಹಜವಾಗಿ ಬೆರೆಯುವ ಗುಣವನ್ನು ಬೆಳೆಸಿಕೊಂಡಿತು. ಈ ಹಿನ್ನೆಲೆಯಲ್ಲಿ ಸದರಿ ಆನೆಗೆ ಈ ಬಾರಿ ದಸರಾ ಮಹೋತ್ಸವದಲ್ಲಿ ಮೊದಲ ಬಾರಿಗೆ ಭಾಗವಹಿಸುವ ಅವಕಾಶ ದೊರೆತಿದೆ.

ಅತ್ಯಂತ ಕಿರಿಯ ಆನೆ ಹೇಮಾವತಿ: 11 ವರ್ಷದ ಹೇಮಾವತಿ ಆನೆಯು 2014ರ ನವೆಂಬರ್ ತಿಂಗಳಲ್ಲಿ ಕೊಡಗು ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆಶಿಬಿರದಲ್ಲಿ ಜನಿಸಿತು. ಉತ್ತಮ ಆರೈಕೆ ಹಾಗೂ ಪ್ರೀತಿಯೊಂದಿಗೆ ಬೆಳೆದ ಈ ಆನೆಯು ಶಿಬಿರದ ವಾತಾವರಣಕ್ಕೆ ಹೊಂದಿಕೊಂಡಿದೆ. ಮಾವುತರು ನೀಡಿದ ನಿತ್ಯದ ತರಬೇತಿಯಿಂದ ಶಿಸ್ತು, ಶಾಂತ ಸ್ವಭಾವ ಮತ್ತು ಕೌಶಲಗಳ ಮೈಗೂಡಿಸಿಕೊಂಡು ಗಮನ ಸೆಳೆದಿದೆ. ಇದೀಗ ಮೊದಲ ಬಾರಿಗೆ ಮೈಸೂರು ದಸರಾದಲ್ಲಿ ಭಾಗವಹಿಸುತ್ತಿದೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಎಲ್ಲಾ 14 ಆನೆಗಳ ಪೈಕಿ ಇದು ವಯಸ್ಸಿನಲ್ಲಿ ಅತ್ಯಂತ ಕಿರಿಯ ಆನೆಯಾಗಿದೆ.

ಪೂಜೆ ನೆರವೇರಿಸಿದ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಮಾತನಾಡಿ, ಇಂದು ಧನ್ವಂತರಿ ಜಯಂತಿಯಾಗಿದ್ದು, ತುಂಬ ಒಳ್ಳೆಯ ದಿನವಾಗಿದೆ. ಆರೋಗ್ಯ ಭಾಗ್ಯಕ್ಕೆ ಮೂಲ ಧನ್ವಂತರಿ ಭಗವಂತ. ಹಾಗಾಗಿ ಮೈಸೂರಿನ ಧನ್ವಂತರಿ ದೇವಸ್ಥಾನದಲ್ಲಿ ಆನೆಗಳ ಹೆಸರಿನಲ್ಲಿ ಪೂಜೆ ಮಾಡಿಸಿ ಅವುಗಳಿಗೆ ಒಳ್ಳೆಯ ಆರೋಗ್ಯ ಕಲ್ಪಿಸುವಂತೆ ಆ ದೇವರಲ್ಲಿ ಪ್ರಾರ್ಥಿಸಲಾಗಿದೆ ಎಂದು ಇದೇ ವೇಳೆ ತಿಳಿಸಿದರು.

ಮೈಸೂರು ಪತ್ರಕರ್ತ ಶಿವಕುಮಾರ್ ಸೇರಿ ನಾಲ್ವರು ವಿಧಾನಪರಿಷತ್‌ಗೆ ನಾಮನಿರ್ದೇಶನ ನಿರ್ಧಾರ

ರಾಜ್ಯಪಾಲರ ಅಂಗೀಕಾರಕ್ಕೆ ಪಟ್ಟಿ ರವಾನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಕೆ.ಶಿವಕುಮಾರ್



ರಮೇಶ್ ಬಾಬು



ಆರತಿ ಕೃಷ್ಣ



ಜಕ್ಕಪ್ಪನವರ್

ಬೆಂಗಳೂರು, ಆ.25– ತೀವ್ರ ಕುತೂಹಲ ಕೆರಳಿಸಿದ್ದ ವಿಧಾನಪರಿಷತ್‌ನ ನಾಲ್ಕು ಖಾಲಿ ಸ್ಥಾನಗಳ ನಾಮಕರಣ ಸದಸ್ಯರ ನೇಮಕಾತಿ ಕುರಿತ ಅಂತಿಮ ನಿರ್ಧಾರ ಹೊರ ಬಿದ್ದಿದ್ದು, ಹೈಕಮಾಂಡ್ ಅನುಮೋದನೆಯೊಂದಿಗೆ ನಾಲ್ವರ ಹೆಸರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಭವನಕ್ಕೆ ರವಾನಿಸಿದ್ದಾರೆ.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ರಮೇಶ್ ಬಾಬು, ಅನಿವಾಸಿ ಭಾರತೀಯ ಕೋಶದ (ಎನ್‌ಆರ್‌ಐ) ಉಪಾಧ್ಯಕ್ಷೆ ಆರತಿ ಕೃಷ್ಣ, ಪತ್ರಕರ್ತ ಮೈಸೂರು ಮೂಲದ ಶಿವಕುಮಾರ್ ಹಾಗೂ ಹುಬ್ಬಳ್ಳಿ–ಧಾರವಾಡ ಕಾಂಗ್ರೆಸ್ ಮುಖಂಡ ಜಕ್ಕಪ್ಪನವರ್ ಅವರ ಹೆಸರುಗಳನ್ನು ರವಾನಿಸಲಾಗಿದೆ.

ಸಹಕಾರ, ಸಮಾಜ ಸೇವೆ, ಮಾಧ್ಯಮ ಮತ್ತು ಶಿಕ್ಷಣ ವಲಯದಲ್ಲಿ ಈ ನಾಲ್ವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಇವರ ಹೆಸರುಗಳಿಗೆ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಪಾಲರಿಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಈ ಸ್ಥಾನಗಳಿಗೆ ನಾಮಕರಣ ಮಾಡಲು ಅಂತಿಮಗೊಳಿಸಲಾಗಿದ್ದ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಹಾಗೂ ದಲಿತ ಹೋರಾಟಗಾರ ಡಿಜಿ ಸಾಗರ್ ಅವರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಇಬ್ಬರ ಬದಲಿಗೆ ದಲಿತ ಮುಖಂಡ ಹಾಗೂ ಹುಬ್ಬಳ್ಳಿ ಧಾರವಾಡ ಕಾಂಗ್ರೆಸ್ಸಿನ ಪ್ರಭಾವಿ ನಾಯಕ ಜಕ್ಕಪ್ಪನವರ್ ಮತ್ತು ಪತ್ರಕರ್ತ ಶಿವಕುಮಾರ್ ಹೆಸರನ್ನು ಅಂತಿಮಗೊಳಿಸಲಾಗಿದೆ.

ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ನಾನಾ ಕ್ಷೇತ್ರಗಳ ಸಾಧಕರ ಕೋಟಾದಲ್ಲಿ ನಾಮನಿರ್ದೇಶನಕ್ಕಾಗಿ ಹಲವು ಮಂದಿ ಆಕಾಂಕ್ಷಿಗಳಿದ್ದರು. ಸಿಎಂ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೂಲಕ ಸಂಭಾವ್ಯರ ಪಟ್ಟಿ ಪಡೆದುಕೊಂಡಿದ್ದ ಎಐಸಿಸಿ ವರಿಷ್ಠ ನಾಯಕರು ಈ ನಾಲ್ವರನ್ನು ಅಂತಿಮಗೊಳಿಸಿದ್ದಾರೆ.

ತವರೂರು ಲಕ್ನೋದಲ್ಲಿ ಶುಭಾಂಶು ಶುಕ್ಲಾಗೆ ಭರ್ಜರಿ ಸ್ವಾಗತ



ಲಕ್ನೋ: ಯಶಸ್ವಿ ಬಾಹ್ಯಾಕಾಶ ಯಾತ್ರೆಯ ನಂತರ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಮೊದಲ ಬಾರಿಗೆ ತಮ್ಮ ತವರೂರು ಲಕ್ನೋಗೆ ಬಂದಿಳಿದಿದ್ದು, ವಿಮಾನ ನಿಲ್ದಾಣದಲ್ಲಿ ಭರ್ಜರಿ ಸ್ವಾಗತ ನೀಡಲಾಯಿತು.

ಸೋಮವಾರ ಬೆಳಿಗ್ಗೆ (ಆ.25) ಲಕ್ನೋ ವಿಮಾನ ನಿಲ್ದಾಣದಲ್ಲಿ ಶುಭಾಂಶು ಶುಕ್ಲಾ ಅವರು ಕಲಿತ ಹಳೆಯ ಶಾಲೆ ಸಿಟಿ ಮಾಂಟೆಸ್ಸರಿಯ ವಿದ್ಯಾರ್ಥಿಗಳು ಸ್ವಾಗತಿಸಿದರು. ಇದೇ ವೇಳೆ ಉತ್ತರ ಪ್ರದೇಶದ ಉಪಮುಖ್ಯಮಂತ್ರಿ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬ್ರಜೇಶ್ ಪಾಠಕ್ ಗೌರವಪೂರ್ವಕವಾಗಿ ಸ್ವಾಗತಿಸಿದರು. ನಿಲ್ದಾಣದಲ್ಲಿ ಶುಭಾಂಶು ಕುಟುಂಬಸ್ಥರು ಸೇರಿದಂತೆ ಲಕ್ನೋದ ಜನರು ಸಂಭ್ರಮದಲ್ಲಿ ವಿಜಯ ಘೋಷಣೆಗಳನ್ನು ಕೂಗಿದರು.

ಬಳಿಕ ಸಿಟಿ ಮಾಂಟೆಸ್ಸರಿ ಶಾಲೆಯ 63,000 ವಿದ್ಯಾರ್ಥಿಗಳು ವಿಮಾನ ನಿಲ್ದಾಣದಿಂದ ಜಿ 20 ಚೌಕ್‌ವರೆಗೆ ವಿಜಯಯಾತ್ರೆ ನಡೆಸಿದರು. ಇದೇ ವೇಳೆ ಪತ್ರಿಕಾಗೋಷ್ಠಿಯಲ್ಲಿ ಯುಪಿ ಡಿಸಿಎಂ ಪಾಠಕ್ ಮಾತನಾಡಿ, ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಭಾರತವು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಎತ್ತರಕ್ಕೆ ತಲುಪಿದೆ. ನಮ್ಮೂರಿನ ಹೆಮ್ಮೆಯ ಪುತ್ರನನ್ನು ಸ್ವಾಗತಿಸಲು ನಮಗೆ ನಿಜಕ್ಕೂ ತುಂಬಾ ಹೆಮ್ಮೆ ಎನಿಸುತ್ತದೆ. ಶುಭಾಂಶು ಶುಕ್ಲಾ ಇಡೀ ಜಗತ್ತಿಗೆ ಹೊಸ ಮಾರ್ಗವನ್ನು ತೋರಿಸಿದ್ದಾರೆ. ಈ ಹಿನ್ನೆಲೆ ರಾಜ್ಯ ಸರ್ಕಾರವು ಅವರ ಗೌರವಾರ್ಥವಾಗಿ ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ಮೂಲಕ ಶುಭಾಂಶು ಯುವಕರಿಗೆ ಸ್ಫೂರ್ತಿಯಾಗಲಿದ್ದಾರೆ ಎಂದರು.

ಮಹಾರಾಜ ಟ್ರೋಫಿ-2025

ಹುಬ್ಬಳ್ಳಿ ಟೈಗರ್ಸ್, ಮಂಗಳೂರು ಡ್ರ್ಯಾಗನ್ಸ್‌ಗೆ ಭರ್ಜರಿ ಜಯ



ಮೈಸೂರು, ಆ.25– ಇಲ್ಲಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಶಿವಮೊಗ್ಗ ಲಯನ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್, ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಮಂಗಳೂರು ಡ್ರ್ಯಾಗನ್ಸ್ ಭರ್ಜರಿ ಜಯ ಸಾಧಿಸಿದೆ.

ಹುಬ್ಬಳ್ಳಿಗೆ ಜಯ: ಕೃಷ್ಣನ್ ಶ್ರೀಜಿತ್, ಅಭಿನವ್ ಮನೋಹರ್ ಅವರ ಅರ್ಧಶತಕದ ನೆರವಿನಿಂದ ಶಿವಮೊಗ್ಗ ಲಯನ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 105 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ತಂಡದ ಮೊತ್ತ 71 ರನ್ ಆಗುವಷ್ಟರಲ್ಲಿ ನಾಯಕ ದೇವದತ್ ಪಡಿಕ್ಕಲ್ 33, ಮೊಹಮ್ಮದ್ ತಾಹ 8, ಕೆ.ಪಿ.ಕಾರ್ತಿಕೇಯ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಕೃಷ್ಣನ್ ಶ್ರೀಜಿತ್ 40 ಎಸೆತಗಳಲ್ಲಿ 6 ಸಿಕ್ಸರ್, 2 ಬೌಂಡರಿ ಒಳಗೊಂಡ ಅಜೇಯ 66, ಅಭಿನವ್ ಮನೋಹರ್ 35 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 63 ರನ್ ಗಳಿಸಿದರು. ಇವರಿಬ್ಬರೂ 4ನೇ ವಿಕೆಟ್‌ಗೆ 124 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಅಂತಿಮವಾಗಿ ಹುಬ್ಬಳ್ಳಿ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿತು. ಶಿವಮೊಗ್ಗ ಪರ ಮರಿಬಸವಗೌಡ 2, ಧ್ರುವ್ ಪ್ರಭಾಕರ್ 1 ವಿಕೆಟ್ ಪಡೆದರು.

ಬಳಿಕ ಗುರಿ ಬೆನ್ನತ್ತಿದ ಶಿವಮೊಗ್ಗ 15.5 ಓವರ್‌ಗಳಲ್ಲಿ 90 ರನ್‌ಗಳಿಗೆ ಆಲೌಟಾಗುವ ಮೂಲಕ ಹೀನಾಯ ಸೋಲು ಅನುಭವಿಸಿತು. ತಂಡದ ಪರ ಅನಿಶ್ವರ್ ಗೌತಮ್ 14, ಧ್ರುವ್ ಪ್ರಭಾಕರ್ 29, ಹಾರ್ದಿಕ್ ರಾಜ್ 10 ರನ್ ಗಳಿಸಿದರು. ಹುಬ್ಬಳ್ಳಿ ಪರ ಯಶ್‌ರಾಜ್ ಪೂಂಜಾ 3, ಶ್ರೀಶಾ ಆಚಾರ್, ಕೆ.ಸಿ. ಕಾರ್ಯಪ್ಪ ತಲಾ 2, ನಿತಿನ್ ನಾಗರಾಜ, ರಿತೀಶ್ ಭಟ್ಕಳ್ ಹಾಗೂ ಕಾರ್ತಿಕೇಯ ತಲಾ ಒಂದೊಂದು ವಿಕೆಟ್ ಪಡೆದರು. ಕೃಷ್ಣನ್ ಶ್ರೀಜಿತ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮಂಗಳೂರಿಗೆ ಗೆಲುವು: ಸಚಿನ್ ಶಿಂಧೆ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಮಂಗಳೂರು ಡ್ರ್ಯಾಗನ್ಸ್ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 39 ರನ್‌ಗಳ ಗೆಲುವು ದಾಖಲಿಸಿದೆ.

ಮಂಗಳೂರು ನೀಡಿದ 181 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗಾ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 141 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಲುವ್ನಿತ್ ಸಿಸೋಡಿಯಾ 29, ಹರ್ಷವರ್ಧನ್ ಖೂಬ 12, ಕೃಷ್ಣಮೂರ್ತಿ ಸಿದ್ಧಾರ್ಥ 19, ಬೆಂಗಳೂರು ಮೋಹಿತ್ 16, ಪ್ರವೀಣ್ ದುಬೆ 18, ಪೃಥ್ವಿರಾಜ್ ಶೇಖಾವತ್ 13, ಶಶಿಕುಮಾರ್ ಕುಂಬ್ಳೆ 22 ರನ್ ಗಳಿಸಿದರು. ಮಂಗಳೂರು ಪರ ಸಚಿನ್ ಶಿಂಧೆ 4, ಶ್ರೇಯಸ್ ಗೋಪಾಲ್, ಮ್ಯಾಕ್ನಿಲ್, ಕ್ರಾಂತಿ ಕುಮಾರ್, ಶ್ರೀವತ್ಸ ಆಚಾರ್ಯ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ತಂಡದ ಪರ ಬಿ.ಆರ್.ಶರತ್ 19, ತಿಪ್ಪಾರೆಡ್ಡಿ 45, ಅನೀಶ್ 12, ಶ್ರೇಯಸ್ ಗೋಪಾಲ್ 17, ಆದರ್ಶ ಪ್ರಜ್ವಲ್ 27, ಎಸ್.ಶಿವರಾಜ್ 22 ಎಸೆತಗಳಲ್ಲಿ 2 ಸಿಕ್ಸರ್, 5 ಬೌಂಡರಿ ಒಳಗೊಂಡ 46 ರನ್ ಗಳಿಸಿದರು. ಗುಲ್ಬರ್ಗಾ ಪರ ಪ್ರವೀಣ್ ದುಬೆ, ಪೃಥ್ವಿರಾಜ್ ಶೇಖಾವತ್ ತಲಾ 2, ಲ್ಯಾವಿಶ್ ಕುಶಲ್, ಬನ್ನೂರು ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸಚಿನ್ ಶಿಂಧೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಹಕಾರ ಸಂಘಗಳಲ್ಲಿ ಎಸ್ಸಿ–ಎಸ್ಟಿ ಮೀಸಲಾತಿ; ಶಾಸಕ ಜಿಟಿಡಿ ಹೇಳಿಕೆ ಖಂಡಿಸಿ ಕಾಂಗ್ರೆಸ್, ದಲಿತ ಸಂಘಟನೆಗಳ ಪ್ರತ್ಯೇಕ ಪ್ರತಿಭಟನೆ





ಸಹಕಾರ ಸಂಘಗಳಲ್ಲಿ ಎಸ್ಸಿ, ಎಸ್ಟಿ ಮೀಸಲಾತಿ ವಿರೋಧಿಸಿರುವ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆಯನ್ನು ಖಂಡಿಸಿ ಇರ್ವಿನ್ ರಸ್ತೆ ನೆಹರು ವೃತ್ತದಲ್ಲಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಹಾಗೂ ಅಶೋಕ ವೃತ್ತದಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಆ.25(ಎಸ್‌ಪಿಎನ್)– ಸಹಕಾರ ಸಂಘಗಳಲ್ಲಿ ಎಸ್ಸಿ, ಎಸ್ಟಿ ಮೀಸಲಾತಿ ವಿರೋಧಿಸಿರುವ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆಯನ್ನು ಖಂಡಿಸಿ ಇರ್ವಿನ್ ರಸ್ತೆ ನೆಹರು ವೃತ್ತದಲ್ಲಿ ಮೈಸೂರು ಮತ್ತು ಚಾಮರಾಜನಗರ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಮುಂಭಾಗ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಹಾಗೂ ಅಶೋಕ ವೃತ್ತದಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ಪ್ರತ್ಯೇಕವಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ: ಪ್ರತಿಭಟನೆಯ ನೇತೃತ್ವವನ್ನು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ವಹಿಸಿ, ಜೆಡಿಎಸ್ ಹಾಗೂ ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಮೀಸಲಾತಿ ಏಕಾಏಕಿ ಜಾರಿಗೆ ತಂದಿದ್ದಲ್ಲ. ಜಂಟಿ ಸೆಲೆಕ್ಷನ್ ಕಮಿಟಿ, ಪಕ್ಷದ ಶಾಸಕರ ಸಭೆಯಲ್ಲಿ ಚರ್ಚೆಯಾಗಿ, ಸಹಕಾರ ಸಂಘಗಳ ಅಧಿಕಾರಿ ವರ್ಗ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ರಾಜ್ಯ ಸರ್ಕಾರ ಜಾರಿಗೆ ತಂದಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡರು ವಿಧಾನ ಸಭೆಯಲ್ಲಿ ನೀಡಿದ ಹೇಳಿಕೆಯು ಎಸ್ಸಿ, ಎಸ್ಟಿ ಸಮುದಾಯದವರು ಸಹಕಾರ ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷರಾಗಲು ರಾಜ್ಯ ಸರ್ಕಾರ ಮೀಸಲಾತಿ ನಿಗದಿ ಮಾಡಿದರೆ, ಸಹಕಾರ ಸಂಸ್ಥೆಗಳು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಹೇಳಿಕೆ ಅಸ್ಪೃಶ್ಯ ವ್ಯವಸ್ಥೆ ಪರೋಕ್ಷವಾಗಿ ಜಾರಿಯಲ್ಲಿದೆ ಎಂಬುದನ್ನು ತೋರಿಸಿಕೊಟ್ಟಿದೆ ಎಂದು ಟೀಕಿಸಿದರು.

ಎಸ್.ಎ.ರಹೀಂ, ಶಿವಶಂಕರಮೂರ್ತಿ, ಕೆಪಿಸಿಸಿ ಅಸಂಘಟಿತ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ಸುನೀಲ್ ಕುಮಾರ್, ಡಿ.ಜಿ.ಕೇಶವ್, ಓಂಕಾರ್ ರವಿ, ಮೈಸೂರು–ಚಾಮರಾಜನಗರ ಉಸ್ತುವಾರಿ ಧನಪಾಲ್ ರಂಗಸ್ವಾಮಿ, ಮುಖಂಡರಾದ ಬಾಬು, ಜಯರಾಮ್, ಸೈಯದ್ ಫಾರುಖ್, ಕುಕ್ಕರ್‌ಹಳ್ಳಿ ನಂಜುಂಡಸ್ವಾಮಿ, ರಾಜಶೇಖರ್, ಎಸಿಸಿ ಕಾರ್ಯದರ್ಶಿ ಗಂಟಯ್ಯ ಕೃಷ್ಣಪ್ಪ ಉಪಸ್ಥಿತರಿದ್ದರು.

ದಲಿತ ಸಂಘಟನೆಗಳ ಒಕ್ಕೂಟ: ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯ ಅಶೋಕ ವೃತ್ತದಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಸಹಕಾರ ಸಂಘಗಳಲ್ಲಿ ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ಕುರಿತು ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆಯನ್ನು ಖಂಡಿಸಿ ಮಾಜಿ ಮೇಯರ್ ಪುರುಷೋತ್ತಮ್ ನೇತೃತ್ವದಲ್ಲಿ ಸೋಮವಾರ ಸಂಜೆ ಪ್ರತಿಭಟನೆ ನಡೆಸಿದರು.

ಈ ವೇಳೆ ಪ್ರತಿಭಟನಾಕಾರರು ಜಿ.ಟಿ.ದೇವೇಗೌಡರ ಹೇಳಿಕೆಯನ್ನು ಖಂಡಿಸಿ ವಿವಿಧ ಘೋಷಣೆಗಳನ್ನು ಕೂಗಿದರು. ಬಳಿಕ ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು ಈ ದೇಶದ ಆಡಳಿತ ಚುಕ್ಕಾಣಿ ಹಿಡಿಯಲು ಸಮರ್ಥರಿದ್ದಾರೆ. ಈಗಾಗಲೇ ರಾಷ್ಟ್ರಪತಿ, ಮುಖ್ಯಮಂತ್ರಿಗಳಾಗಿ ಹಾಗೂ ಅಲ್ಲದೆ, ಐಎಎಸ್, ಐಪಿಎಸ್ ಹುದ್ದೆಗಳನ್ನು ಅಲಂಕರಿಸಿ, ದೇಶದ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ.

ಶಾಸಕರು ಈ ರೀತಿಯ ಮನಸ್ಥಿತಿಯಿಂದ ಹೊರಬರಬೇಕು. ಅವರ ಈ ಹೇಳಿಕೆ ಗಮನಿಸಿದರೆ ಜಾತಿ ವ್ಯವಸ್ಥೆ ಹಾಗೂ ವರ್ಣಾಶ್ರಮ ಪದ್ಧತಿ ಜಾರಿಯಲ್ಲಿಡುವ ಹುನ್ನಾರವಾಗಿದೆ ಎಂದರು. ಮುಖಂಡರಾದ ವಿಶ್ವ, ಈಶ್ವರ್, ನಗರಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಸುನಿಲ್, ವಿನಯ್, ಪುಟ್ಟರಾಜು, ಸುರೇಶ್, ಎಲ್ಲಾ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಹಿನ್ನೆಲೆ

ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ತಿ.ನರಸೀಪುರ, ಆ.25– ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾಯಿಸಿದ ವರುಣ ಮತ್ತು ತಿ.ನರಸೀಪುರ ಕ್ಷೇತ್ರಗಳ ಕಾರ್ಯಕರ್ತರು ಹಾಗೂ ಮುಖಂಡರು ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಎಂಎಲ್‌ಸಿ ಸಿ.ರಮೇಶ್ ಮಾತನಾಡಿ, ಅನಾಮಿಕ ವ್ಯಕ್ತಿ ನೀಡಿದ ದೂರಿನ ಮೇರೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುತ್ತಿದೆ. ಆದರೆ ತನಿಖಾ ವರದಿ ಬರುವ ಮುನ್ನಾ ಕೆಲ ಕಿಡಿಗೇಡಿಗಳು ಪ್ರಚೋದನಾಕಾರಿ ಹೇಳಿಕೆ ನೀಡುತ್ತಾ ಧರ್ಮಸ್ಥಳ, ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ತೇಜೋವಧೆ ಮಾಡುತ್ತಿದ್ದಾರೆ. ಹೀಗಾಗಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸಿ ಅವರ ಆದಾಯದ ಮೂಲಗಳನ್ನು ಪರಿಶೀಲಿಸಬೇಕು. ಕ್ಷೇತ್ರದ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳುಸುದ್ದಿ ಹರಡುತ್ತಿರುವ ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕಾದ ಸಿಎಂ ಸಿದ್ದರಾಮಯ್ಯ ಬುದ್ಧಿ ಭ್ರಮಣೆಯಾದವರಂತೆ ವರ್ತಿಸುತ್ತಿದ್ದಾರೆ. ಅನಾಮಿಕ ವ್ಯಕ್ತಿ ಹೇಳಿದನೆಂದು ಎಸ್‌ಐಟಿ ರಚಿಸಿರುವುದು ಎಷ್ಟರ ಮಟ್ಟಿಗೆ ಸರಿ. ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಕಳಂಕ ತರುವಲ್ಲಿ ರಾಜ್ಯ ಸರ್ಕಾರ ಹಾಗೂ ಸಿಎಂ ಸಿದ್ದರಾಮಯ್ಯ ಅವರ ಪಾಲು ಇದ್ದು, ಧರ್ಮಸ್ಥಳದ ಮಂಜುನಾಥಸ್ವಾಮಿ ಶಾಪ ಅವರಿಗೆ ತಟ್ಟದೇ ಇರದು. ಶೀಘ್ರ ಅವರು ಅಧಿಕಾರ ಕಳೆದುಕೊಳ್ಳುವ ಜೊತೆಗೆ ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಬರಲಿದೆ ಎಂದು ಭವಿಷ್ಯ ನುಡಿದರು.



ಬಿಜೆಪಿ ಕಾರ್ಯಕರ್ತರು ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಅಪಪ್ರಚಾರ ತಡೆಗಟ್ಟುವಲ್ಲಿ ವಿಫಲವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಮಂತ್ರಿ ಡಾ.ಜಿ. ಪರಮೇಶ್ವರ್ ರಾಜ್ಯದ ಜನತೆ ಕ್ಷಮೆಯಾಚಿಸಬೇಕು. ಇಲ್ಲವಾದರೆ ಪ್ರತಿಭಟನೆ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಧರ್ಮಸ್ಥಳ ಸತ್ಯ, ಧರ್ಮಕ್ಕೆ ಹೆಸರುವಾಸಿಯಾಗಿದ್ದು, ಕೋಟ್ಯಾಂತರ ಭಕ್ತರನ್ನು ಹೊಂದಿದೆ. ಧರ್ಮಸ್ಥಳಕ್ಕೆ ತನ್ನದೇ ಆದ ಪಾವಿತ್ರ್ಯತೆ ಇದ್ದು, ಅಲ್ಲಿ ನಡೆಯುತ್ತಿರುವ ಸೇವೆಗಳು ಅವಿಸ್ಮರಣೀಯ ಧರ್ಮಸ್ಥಳ ಕ್ಷೇತ್ರ ಯಾವುದೇ ಧರ್ಮ, ಜಾತಿ, ಭೇದವಿಲ್ಲದೆ ನಿರಂತರವಾಗಿ ದಾನ–ಧರ್ಮ ನಡೆಸಿಕೊಂಡು ಬರುತ್ತಿದ್ದು, ಎಲ್ಲಾ ಜನಾಂಗದ ಶ್ರದ್ಧಾ ಕೇಂದ್ರವಾಗಿದ್ದು, ಅಲ್ಲಿನ ಚಿಂತನೆಗಳು ಸದಾ ಅನುಕರಣೀಯವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರು ಅಪಪ್ರಚಾರ ನಡೆಸುವ ಮೂಲಕ ಕ್ಷೇತ್ರದ ಧರ್ಮಸ್ಥಳದ ಪಾವಿತ್ರ್ಯತೆಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಅಲ್ಲದೇ ಭಕ್ತರಲ್ಲಿ ಅಪನಂಬಿಕೆ ಮೂಡಿಸಿ, ಶಾಂತಿ ಕದಡಲು ಯತ್ನಿಸುತ್ತಿರುವುದು ಖಂಡನೀಯ. ಧರ್ಮಸ್ಥಳ ಕ್ಷೇತ್ರ ಸರ್ಕಾರ ಮಾಡದ ಕೆಲಸ ಮಾಡುತ್ತಿದೆ. ಮದ್ಯವರ್ಜನ ಶಿಬಿರ, ಕೆರೆಕಟ್ಟೆಗಳ ಸಂರಕ್ಷಣೆ, ಗ್ರಾಮೀಣ ಜನರಿಗೆ ಉದ್ಯೋಗ, ಅನ್ನದಾನ ಮಾಡುತ್ತಿದೆ. ಮಹಿಳಾ ಸಬಲೀಕರಣದಲ್ಲಿ ಧರ್ಮಸ್ಥಳದ ಪಾತ್ರ ಬಹಳ ದೊಡ್ಡದು. ಅಂತಹ ಪವಿತ್ರ ಕ್ಷೇತ್ರದ ಬಗ್ಗೆ ಷಡ್ಯಂತ್ರ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ವರುಣ ಕ್ಷೇತ್ರದ ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಮಾತನಾಡಿದರು. ಇದೇ ವೇಳೆ ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ತಿ.ನರಸೀಪುರ ಕ್ಷೇತ್ರದ ಅಧ್ಯಕ್ಷ ಶಿವಕುಮಾರ್, ವರುಣ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಡಾ.ಮಲ್ಲಿಕಾರ್ಜುನಸ್ವಾಮಿ, ಆಲಗೂಡು ವೆಂಕಟರಮಶೆಟ್ಟಿ, ಮಾಜಿ ಜಿಪಂ ಸದಸ್ಯ ಎ.ಎಂ.ಗುರುಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಡವಾಡಿ ಮಹೇಶ್, ಟೌನ್ ಅಧ್ಯಕ್ಷ ಅಕ್ಕಿ ನಂಜುಂಡಸ್ವಾಮಿ, ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ ಪಟೇಲ್, ದಾಸಯ್ಯ, ಪುರಸಭೆ ಮಾಜಿ ಸದಸ್ಯ ಎನ್.ಲೋಕೇಶ್, ಪುಟ್ಟಸ್ವಾಮಿ, ಮಹಾದೇವಸ್ವಾಮಿ, ಎಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್, ತಾಲೂಕು ಅಧ್ಯಕ್ಷ ಸಿದ್ದರಾಜು, ಚಂದ್ರಶೇಖರ್, ಮಾದಪ್ಪ , ಕಾಳೇಗೌಡ, ಕರೋಹಟ್ಟಿ ರಾಜಶೇಖರ ಮತ್ತು ಮಹಿಳಾ ಮುಖಂಡರು, ಹಿಂದೂ ಕಾರ್ಯಕರ್ತರು ಭಾಗವಹಿಸಿದ್ದರು.

ಭೇರ್ಯ: ಲಾಡ್ಜ್‌ನಲ್ಲಿ ಮಹಿಳೆ ಹತ್ಯೆ

ಭೇರ್ಯ, ಆ.25– ಲಾಡ್ಜ್‌ವೊಂದರಲ್ಲಿ ಮಹಿಳೆಯನ್ನು ಹತ್ಯೆ ಮಾಡಿರುವ ಘಟನೆ ಭೇರ್ಯ ಗ್ರಾಮದಲ್ಲಿ ಶನಿವಾರ ನಡೆದಿದೆ.



ಸಿದ್ದರಾಜು

ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಗೆರಸನಹಳ್ಳಿ ಗ್ರಾಮದ ನಿವಾಸಿ ರಕ್ಷಿತಾ (20) ಹತ್ಯೆಗೊಳಗಾದವರು. ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದ ನಿವಾಸಿ ಸಿದ್ದರಾಜು ಹತ್ಯೆಗೈದ ಆರೋಪಿ.

ವಿವರ: ಗೆರಸನಹಳ್ಳಿ ಗ್ರಾಮದ ನಿವಾಸಿ ರಕ್ಷಿತಾ ಕೇರಳ ಮೂಲದ ವ್ಯಕ್ತಿಯನ್ನು ಮದುವೆಯಾಗಿದ್ದಳು. ಆತ ಕೇರಳದಲ್ಲಿ ಕೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಇತ್ತ ರಕ್ಷಿತಾ ಬೆಟ್ಟದಪುರ ಗ್ರಾಮದ ತನ್ನ ಸೋದರ ಸಂಬಂಧಿ ಸಿದ್ದರಾಜು ಎಂಬಾತನೊಂದಿಗೆ ಸಂಬಂಧ ಇಟ್ಟುಕೊಂಡಿದ್ದಳು ಎನ್ನಲಾಗಿದೆ.

ಶನಿವಾರ ಅಮಾವಾಸ್ಯೆ ಪ್ರಯುಕ್ತ ಕಪ್ಪಡಿಗೆ ಹೋಗೋಣವೆಂದು ಸಿದ್ದರಾಜು ರಕ್ಷಿತಾಳನ್ನು ಪುಸಲಾಯಿಸಿ ಕಪ್ಪಡಿಗೆ ಕರೆದೊಯ್ದಿದ್ದಾನೆ. ಬಳಿಕ ಭೇರ್ಯ ಗ್ರಾಮದ ಲಾಡ್ಜ್‌ಗೆ ಕರೆದುಕೊಂಡು ಬಂದು ಕೊಲೆ ಮಾಡಿದ್ದಾನೆ ಎನ್ನಲಾಗಿದೆ.

ಮೊಬೈಲ್ ಬ್ಲಾಸ್ಟ್: ಸಿದ್ದರಾಜು ರಕ್ಷಿತಾಳನ್ನು ತನ್ನ ಪತ್ನಿ ಎಂದು ಹೇಳಿ ಭೇರ್ಯದ ಲಾಡ್ಜ್‌ನಲ್ಲಿ ರೂಂ ಪಡೆದಿದ್ದ. ಈ ವೇಳೆ ಇಬ್ಬರ ನಡುವೆ ಜಗಳ ನಡೆದು ಸಿದ್ದರಾಜು ಆಕೆಯನ್ನು ಹತ್ಯೆ ಮಾಡಿ ಬಳಿಕ ಮೊಬೈಲ್ ಬ್ಲಾಸ್ಟ್ ಆಗಿ ರಕ್ಷಿತಾ ಸಾವನ್ನಪ್ಪಿದ್ದಾಳೆ ಎಂದು ಕಥೆ ಕಟ್ಟಿ ಪರಾರಿಯಾಗಲು ಯತ್ನಿಸಿದ್ದ. ಈ ವೇಳೆ ಲಾಡ್ಜ್‌ನ ಮ್ಯಾನೇಜರ್ ಭೇರ್ಯ ಗ್ರಾಮದ ಉಪ ಪೊಲೀಸ್ ಠಾಣೆಗೆ ಕರೆ ಮಾಡಿ ವಿಷಯ ಮುಟ್ಟಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಶಶಿಕುಮಾರ್ ಹಾಗೂ ಮುಖ್ಯಪೇದೆ ಆನಂದ್ ಪರಿಶೀಲನೆ ನಡೆಸಿ, ಸಿದ್ದರಾಜುನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಭೇರ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆ.30ಕ್ಕೆ, ವಾರ್ಷಿಕ ಮಹಾಸಭೆ

ಹುಣಸೂರು, ಆ.25– ನಗರದ ಸರ್ಕಾರಿ ನೌಕರರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷ ಶಶಿಕುಮಾರ್ ಅಧ್ಯಕ್ಷತೆಯಲ್ಲಿ ಆ.30ರಂದು ಮಧ್ಯಾಹ್ನ 12 ಗಂಟೆಗೆ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಯಮ ಪಾಲಿಸಿ ಗೌರಿ–ಗಣೇಶ ಪ್ರತಿಷ್ಠಾಪಿಸಿ

ಆರಕ್ಷಕ ನಿರೀಕ್ಷಕ ಸಿ.ಎಂ.ಲಿಂಗರಾಜು

ಕೆ.ಆರ್.ನಗರ, ಆ.25– ಪಟ್ಟಣ ಸೇರಿದಂತೆ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮಗಳಲ್ಲಿ ಗೌರಿ–ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸುವವರು ಕಡ್ಡಾಯವಾಗಿ ಸರ್ಕಾರದ ನಿಯಮಗಳನ್ನು ಪಾಲಿಸಬೇಕು ಎಂದು ಆರಕ್ಷಕ ನಿರೀಕ್ಷಕ ಸಿ.ಎಂ.ಲಿಂಗರಾಜು ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣಪತಿ ಪ್ರತಿಷ್ಠಾಪನೆ ಮಾಡುವವರು ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಅಲ್ಲದೇ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕು ಎಂದರು.

ಕಳೆದ ವರ್ಷ ಠಾಣಾ ವ್ಯಾಪ್ತಿ 197 ಕಡೆಗಳಲ್ಲಿ ಗೌರಿ–ಗಣೇಶ ಪ್ರತಿಷ್ಠಾಪಿಸಲಾಗಿತ್ತು. ಈ ಬಾರಿ ಇಲ್ಲಿವರೆಗೆ ನೂರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಪ್ರತಿಷ್ಠಾಪನೆಗೆ ಅವಕಾಶ ಕೋರಿ ಮನವಿ ಮಾಡಿದ್ದ ಎಲ್ಲರಿಗೂ ಪೊಲೀಸ್ ಇಲಾಖೆಯಿಂದ ಅನುಮತಿ ನೀಡಲಾಗುವುದು ಎಂದರು.

ಇದೇ ಮೊದಲ ಬಾರಿಗೆ ಗಣಪತಿ ವಿಸರ್ಜನೆ ಮಾಡುವ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಮಾಡುವ ಜೊತೆಗೆ ಸಿಸಿ ಕ್ಯಾಮರಾಗಳನ್ನು ಅಳವಡಿಸುತ್ತಿದ್ದು, ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಿ ಅಗತ್ಯ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದರು.



ಸುದ್ದಿಗೋಷ್ಠಿಯಲ್ಲಿ ಆರಕ್ಷಕ ನಿರೀಕ್ಷಕ ಸಿ.ಎಂ.ಲಿಂಗರಾಜು ಮಾತನಾಡಿದರು.

ಗಣಪತಿ ಪ್ರತಿಷ್ಠಾಪನೆ ಸ್ಥಳಗಳಲ್ಲಿ ಬೆಳಗ್ಗೆ 6 ರಿಂದ ರಾತ್ರಿ 9 ರವರೆಗೆ ಇರಲು ಅನುಮತಿ ನೀಡಿದ್ದು, ಇದನ್ನು ಹೊರತುಪಡಿಸಿ ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ ಪೊಲೀಸ್ ಉಪನಿರೀಕ್ಷಕರು ರಸಮಂಜರಿ ಸೇರಿದಂತೆ ಇತರೆ ಯಾವುದೇ ವೇದಿಕೆ ಕಾರ್ಯಕ್ರಮಗಳಿದ್ದರೂ ಮುಂಚಿತವಾಗಿ ಪೊಲೀಸ್ ಠಾಣೆಯಿಂದ ಅನುಮತಿ ಪಡೆಯಬೇಕು ಎಂದು ನುಡಿದರು.

ಗಣಪತಿ ಪ್ರತಿಷ್ಠಾಪನೆಗೆ ಅನುಮತಿ ಪಡೆಯಲು ತಾಲೂಕು ಕಚೇರಿಯಲ್ಲಿರುವ ಕೊಠಡಿ ಸಂಖ್ಯೆ 8 ರಲ್ಲಿ ಪ್ರತ್ಯೇಕ ಕೇಂದ್ರ ತೆರೆಯಲಾಗಿದ್ದು, ಇದರೊಂದಿಗೆ ವಿಸರ್ಜನೆ, ವಿಶೇಷ ಕಾರ್ಯಕ್ರಮಗಳಿಗೆ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿ ಪೂರ್ವಾನುಮತಿ ಪಡೆಯಬಹುದು ಎಂದರು.

ತಾಲೂಕು ಕಚೇರಿ ಮತ್ತು ಪೊಲೀಸ್ ಠಾಣೆಗೆ ಅರ್ಜಿ ಸಲ್ಲಿಸದೆ ಗಣಪತಿ ಪ್ರತಿಷ್ಠಾಪನೆ ಮಾಡುವುದು ಶಿಕ್ಷಾರ್ಹ ಅಪರಾಧ ಇದಕ್ಕೆ ಯಾರೂ ಮುಂದಾಗಬಾರದು. ಎಲ್ಲರೂ ಸೇರಿ ಸಂತಸದಿಂದ ಹಬ್ಬವನ್ನು ಆಚರಿಸಬೇಕು ಎಂದು ಸಲಹೆ ನೀಡಿದರು.

ಎಎಸ್‌ಐ ಹೆಚ್.ಶ್ರೀನಿವಾಸ್, ಮುಖ್ಯ ಪೇದೆಗಳಾದ ಪರಶುರಾ ಮೇಗೌಡ, ಸಿ.ಆರ್.ಅನಿಲ್ ಕುಮಾರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

ಹೈಕೋರ್ಟ್ ಆದೇಶ ಹಿನ್ನೆಲೆ ಅಕ್ರಮ ಕಟ್ಟಡ ತೆರವಿನ ವೇಳೆ

ಅಧಿಕಾರಿಗಳು, ಕಟ್ಟಡ ಮಾಲೀಕರ ನಡುವೆ ಮಾತಿನ ಚಕಮಕಿ

ಅಧಿಕಾರಿಗಳಿಂದ ಕ್ಯಾಂಟೀನ್ ತೆರವು, ಕಟ್ಟಡ ತೆರವಿಗೆ ಟೆಂಡರ್: ಪೌರಾಯುಕ್ತೆ

ಹುಣಸೂರು, ಆ.25– ನಗರದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡ ತೆರವುಗೊಳಿಸುವಂತೆ ಹೈಕೋರ್ಟ್ ಆದೇಶದ ಮೇರೆಗೆ ನಗರಸಭೆ ಅಧಿಕಾರಿಗಳು, ಸಿಬ್ಬಂದಿ ಪೊಲೀಸ್ ಬಿಗಿ ಭದ್ರತೆಯೊಂದಿಗೆ ತೆರವುಗೊಳಿಸಲು ಮುಂದಾದಾಗ ಅಧಿಕಾರಿಗಳು ಹಾಗೂ ಕಟ್ಟಡ ಮಾಲೀಕರ ನಡುವೆ ಮಾತಿನ ಚಕಮಕಿ ನಡೆಯಿತು.

ನಗರಸಭೆ ಅಧಿಕಾರಿಗಳು ಹೈಕೋರ್ಟ್ ಆದೇಶದಂತೆ ಆ.7ರಂದು ವಾರದೊಳಗೆ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡ ತೆರವುಗೊಳಿಸುವಂತೆ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಿದ್ದರು. ಆದರೆ ಕಟ್ಟಡ ತೆರವುಗೊಳಿಸದ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಪೌರಾಯುಕ್ತೆ ಮಾನಸ, ಎಇಇಗಳಾದ ಶರ್ಮಿಳಾ, ಸೌಮ್ಯ, ಹೆದ್ದಾರಿ ಇಂಜಿನಿಯರ್ ತಬ್ಸುಮ್ ನೇತೃತ್ವದ ಸಿಬ್ಬಂದಿ ಜೆಸಿಬಿಯೊಂದಿಗೆ ಕಟ್ಟಡದ ಬಳಿ ಬರುತ್ತಿದ್ದಂತೆಯೇ ಕಟ್ಟಡದ ಮಾಲೀಕ ಡಾ.ಲೋಹಿತ್, ಸಿಬ್ಬಂದಿ ಹಾಗೂ ನಗರಸಭೆ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು.



ನಗರಸಭೆ ಅಧಿಕಾರಿಗಳು ಕ್ಯಾಂಟೀನ್ ತೆರವುಗೊಳಿಸಿದರು.

ಕಟ್ಟಡದ ಹಿಂಭಾಗದಲ್ಲಿರುವ ನಗರಸಭೆ ಪಾರ್ಕ್‌ನಲ್ಲಿ ತ್ಯಾಜ್ಯ ನೀರು ಸಂಗ್ರಹಣೆಗಾಗಿ ನಿರ್ಮಿಸಿರುವ ಅಕ್ರಮ ಸೆಪ್ಟಿಕ್ ಟ್ಯಾಂಕ್ ತೆರವುಗೊಳಿಸಬೇಕು. ವಿದ್ಯುತ್ ಪ್ಯಾನಲ್ ತೆರವುಗೊಳಿಸಬೇಕು ಎಂದು ಅಧಿಕಾರಿಗಳು ತಿಳಿಸಿದಾಗ ಮಾತಿನ ಸಮರವೇ ನಡೆಯಿತು. ಈ ವೇಳೆ ಕಟ್ಟಡದ ಮಾಲೀಕ ಡಾ.ಲೋಹಿತ್ ಕಟ್ಟಡ ತೆರವುಗೊಳಿಸಲು ಒಂದು ವಾರ ಕಾಲಾವಕಾಶ ಕೇಳಿದರು. ಈ ವೇಳೆ ಅಧಿಕಾರಿಗಳು ಕಾಲಾವಕಾಶ ನೀಡಿದರು.

ಕ್ಯಾಂಟಿನ್ ತೆರವು: ಕಟ್ಟಡದ ಮುಂಭಾಗದ ತೆರೆಯಲಾಗಿದ್ದ ಕ್ಯಾಂಟೀನ್ ತೆರವುಗೊಳಿಸಲು ನಗರಸಭೆ ಅಧಿಕಾರಿಗಳು ಮುಂದಾದಾಗ ಕಟ್ಟಡದ ಮಾಲೀಕ ಡಾ.ಲೋಹಿತ್ ಹಾಗೂ ಬೆಂಬಲಿಗರು ಜೆಸಿಬಿಗೆ ಅಡ್ಡ ಬಂದರು. ಈ ವೇಳೆ ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಮತ್ತಿತರರು ಕಟ್ಟಡದ ಮಾಲೀಕರೇ ತೆರವುಗೊಳಿಸುತ್ತಾರೆ. ಕಾಲಾವಕಾಶ ನೀಡುವಂತೆ ತಿಳಿಸಿದರು. ಈ ವೇಳೆ ಅಧಿಕಾರಿಗಳು ನ್ಯಾಯಾಲಯದ ಆದೇಶ ಪಾಲಿಸಲು ಅವಕಾಶ ನೀಡಿ. ನಮ್ಮ ಕೆಲಸಕ್ಕೆ ಅಡ್ಡಿಪಡಿಸಬೇಡಿ ಎಂದು ಸ್ಥಳದಲ್ಲಿದ್ದವರಿಗೆ ಮನವರಿಕೆ ಮಾಡಿಕೊಟ್ಟರು. ಈ ಸಂದರ್ಭ ಕಟ್ಟಡದ ಮಾಲೀಕ ಡಾ.ಲೋಹಿತ್, ಅವರ ವಕೀಲರು ತಡೆಯಾಜ್ಞೆ ಸಿಕ್ಕಿದ್ದು ತಂದು ಕೊಡುತ್ತೇವೆ ಎಂದು ಮಾಹಿತಿ ನೀಡಿದರಾದರೂ ಯಾವುದೇ ಮಾಹಿತಿ ನೀಡಲಿಲ್ಲ. ಬದಲಿಗೆ ಮಾತಿನ ಚಕಮಕಿ ಮುಂದುವರೆದಿತ್ತು. ಅಂತಿಮವಾಗಿ ಡಿವೈಎಸ್‌ಪಿ ಗೋಪಾಲಕೃಷ್ಣ ಅವರ ಆದೇಶ ಮೇರೆಗೆ ಪೊಲೀಸರು ಬ್ಯಾರಿಕೇಡ್ ಹಾಕಿ ಜನರನ್ನು ಚದುರಿಸಿ ಕ್ಯಾಂಟೀನ್ ತೆರವುಗೊಳಿಸಲಾಯಿತು.

ದೂರು ದಾಖಲು: ಕಟ್ಟಡ ತೆರವಿಗೆ ಅಧಿಕಾರಿಗಳು ತೆರಳಿದ ವೇಳೆ ಕಟ್ಟಡದ ಮಾಲೀಕ ಡಾ.ಲೋಹಿತ್ ಹಾಗೂ ಸಿಬ್ಬಂದಿ ಮತ್ತು ಬೆಂಬಲಿಗರು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ನಗರ ಠಾಣೆಗೆ ಪೌರಾಯುಕ್ತರು ದೂರು ದಾಖಲಿಸಿದ್ದು, ಡಾ.ಲೋಹಿತ್ ಮತ್ತಿತರರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ತಿಳಿಸಿದ್ದಾರೆ.

ಕಟ್ಟಡ ತೆರವಿಗೆ ಟೆಂಡರ್: ಹೈಕೋರ್ಟ್ ನಿರ್ದೇಶನದಂತೆ ಕಟ್ಟಡ ತೆರವಿಗೆ ಕ್ರಮ ವಹಿಸಿದ್ದೇವೆ. ಪಾರ್ಕ್‌ನಲ್ಲಿದ್ದ ಕಟ್ಟಡದ ತ್ಯಾಜ್ಯ ನೀರಿನ ಪೈಪ್‌ಗೆ ಎಂಡ್ ಕ್ಯಾಪ್ ಹಾಕಲಾಗಿದೆ. ಹೆದ್ದಾರಿ ಪ್ರಾಧಿಕಾರದವರ ಮನವಿಯಂತೆ ಕ್ಯಾಂಟೀನ್ ತೆರವುಗೊಳಿಸಲಾಗಿದೆ. ನಮ್ಮ ಸಿಬ್ಬಂದಿಯಿಂದ ಕಟ್ಟಡ ತೆರವುಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಶೀಘ್ರ ಟೆಂಡರ್ ಕರೆಯಲಾಗುವುದು ಎಂದು ಪೌರಾಯುಕ್ತೆ ಮಾನಸ ತಿಳಿಸಿದ್ದಾರೆ.

ಬಸವನಹಳ್ಳಿ ಡೇರಿಗೆ 10.87 ಲಕ್ಷ ರೂ. ಲಾಭ



ಸಭೆಯಲ್ಲಿ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಸದಸ್ಯರನ್ನು ಗೌರವಿಸಲಾಯಿತು.

ಬನ್ನೂರು, ಆ.25– ಪ್ರಸಕ್ತ ಸಾಲಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ 10.87 ಲಕ್ಷ ರೂ. ಲಾಭ ಗಳಿಸಿದೆ ಎಂದು ಬಸವನಹಳ್ಳಿ ಡೇರಿ ಅಧ್ಯಕ್ಷ ಮಹದೇವ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಸದಸ್ಯರಿಗೆ ಹಾಲು ಕರೆಯುವ ಯಂತ್ರ ಮತ್ತು ಮೇವು ಕತ್ತರಿಸುವ ಯಂತ್ರವನ್ನು ಸಬ್ಸಿಡಿಯಲ್ಲಿ ನೀಡಲಾಗುತ್ತಿದ್ದು, ಇದನ್ನು ಸದಸ್ಯರು ಸದುಪಯೋಗಪಡಿಸಿಕೊಳ್ಳಬೇಕು. ಮ್ಯಾಟ್ ಅವಶ್ಯಕತೆಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ವಿತರಿಸಲಾಗುವುದು ಎಂದರು.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಸಿದ್ದರಾಜು ಮಾತನಾಡಿದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಸದಸ್ಯರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷ ಬಸವರಾಜು, ಒಕ್ಕೂಟದ ವಿಸ್ತರಣಾಧಿಕಾರಿ ಪ್ರಮೋದ್, ದಿವ್ಯಾ, ನಿರ್ದೇಶಕರಾದ ಕುಮಾರ, ಮಹದೇವ, ಮಂಚುಗೌಡ, ಬಿ.ಕೆ.ಶಿವಕುಮಾರ್, ಸುಬ್ಬೇಗೌಡ, ಶಿವಣ್ಣ, ಶಿವಮ್ಮ, ವಿಜಯ, ಸುನೀತ, ಬಿ.ಎನ್. ಮಹೇಂದ್ರ, ಹಾಲು ಪರೀಕ್ಷಕ ಶ್ರೀನಿವಾಸ್, ಸಹಾಯಕ ಬಿ.ಕೆ.ಶಂಭುಗೌಡ, ಬಿ.ಎಸ್. ಪವನ ಸೇರಿದಂತೆ ಇತರರಿದ್ದರು.

ಆ.29ಕ್ಕೆ, ರಕ್ತದಾನ ಶಿಬಿರ

ಸರಗೂರು, ಆ.25– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ, ರೋಟರಿ ಮೈಸೂರು, ಮೆಟ್ರೋ ಮತ್ತು ರಕ್ತನಿಧಿ ಕೇಂದ್ರ ಕೆ.ಆರ್.ಆಸ್ಪತ್ರೆ ಮೈಸೂರು, ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆ.29ರಂದು ವಿವೇಕಾ ನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ರಕ್ತದಾನ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆ.ಎಸ್.ಮಹೇಶ್ ಕುಮಾರ್

ಮೈಸೂರು: ಡಾ.ಸಿ.ಡಿ.ಪರಶುರಾಮ ಅವರ ಮಾರ್ಗದರ್ಶನದಲ್ಲಿ ಕೆಎಸ್. ಮಹೇಶ್ ಕುಮಾರ್ ಅವರು ಹೆಗ್ಗಡದೇವನಕೋಟೆ ತಾಲೂಕು: ಸಾಂಸ್ಕೃತಿಕ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಸಹಕಾರ ಸಂಘದ ಅಭಿವೃದ್ಧಿಗೆ ಸಹಕರಿಸಿ

ಮಲ್ಕುಂಡಿ, ಆ.25– ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿಸಿ ಸಹಕಾರ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ತಿಳಿಸಿದರು.

ಇಲ್ಲಿಗೆ ಸಮೀಪದ ಹುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಂಘ ಸಾಕಷ್ಟು ಸಾಲ ನೀಡುತ್ತಾ ಬಂದಿದೆ. ಆದರೆ ಸಾಲ ಪಡೆದ ರೈತರು ಸಾಲ ಮರುಪಾವತಿಸದ ಕಾರಣ ಸಹಕಾರ ಸಂಘ ಕೆಲವೊಮ್ಮೆ ಲಾಭ ಗಳಿಸಲು ಸಾಧ್ಯವಿಲ್ಲ. ಪ್ರಸ್ತುತ ನಮ್ಮ ಸಹಕಾರ ಸಂಘ 1,15,794 ರೂ. ನಿವ್ವಳ ಲಾಭಗಳಿಸಿದೆ. ರೈತರು ಸಂಘದಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿದರೆ ಸಂಘವು ಹೆಚ್ಚಿನ ಲಾಭಗಳಿಸುವುದರ ಜೊತೆಗೆ ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದರು.



ವಾರ್ಷಿಕ ಮಹಾಸಭೆಯನ್ನು ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ಉದ್ಘಾಟಿಸಿದರು.

ಸಂಘದ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ ಮಾತನಾಡಿ, ಸಂಘದಲ್ಲಿ ರೈತರ ಆರೋಗ್ಯದ ದೃಷ್ಟಿಯಿಂದ ಸಹಕಾರ ಸಂಘದಿಂದ ಯಶಸ್ವಿನಿ ವಿಮೆ ಮಾಡಲಾಗುತ್ತಿದೆ. ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವಾರ್ಷಿಕ ಮಹಾಸಭೆ ನಡಾವಳಿಯನ್ನು ಸಂಘದ ಸಿಇಓ ನಾಗರಾಜಮೂರ್ತಿ ಮಂಡಿಸಿದರು. ಸಂಘದ ಅಧ್ಯಕ್ಷ ಸಣ್ಣಮಾದಪ್ಪ, ನಿರ್ದೇಶಕರಾದ ಎಂ.ವಿ.ಶಿವಕುಮಾರ್, ಗುರುಮಲ್ಲಪ್ಪ, ಪಿಣ್ಣಪ್ಪ, ಮಹದೇವನಾಯಕ, ಗುಮಾಸ್ತ ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಗೌರಿ–ಗಣೇಶ ಹಬ್ಬ ಆಚರಿಸಿ

ಪೂರ್ವಭಾವಿ ಸಭೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ

ತಿ.ನರಸೀಪುರ, ಆ.25– ಸರ್ಕಾರದ ನಿಯಮಗಳನ್ನು ಉಲ್ಲಂಘಿಸದೆ, ಶಾಂತಿ ಸೌಹಾರ್ದತೆ ಕದಡದೆ, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಗೌರಿ–ಗಣೇಶ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸುವಂತೆ ಪಟ್ಟಣದ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗೌರಿ–ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಡಿ.ಜೆ.ಸೌಂಡ್‌ಗೆ ಅವಕಾಶ ಇಲ್ಲ. ಹೀಗಾಗಿ ಅನುಮತಿ ನೀಡಲು ಶಿಫಾರಸ್ಸು ಮಾಡಿಸಬೇಡಿ. ನಿತ್ಯ ಸಾರ್ವಜನಿಕ ಸಂಚಾರವಿರುವ ರಸ್ತೆಯಲ್ಲಿ ಗೌರಿ–ಗಣೇಶನನ್ನು ಪ್ರತಿಷ್ಠಾಪಿಸಬಾರದು. ಖಾಸಗಿ ಅಥವಾ ಸಾರ್ವಜನಿಕ ನಿವೇಶನದಲ್ಲಿ ಗೌರಿ–ಗಣೇಶ ಕೂರಿಸಲು ಸ್ಥಳೀಯ ಪುರಸಭೆ, ಇಲ್ಲವೇ ಗ್ರಾಪಂನಿಂದ ಅನುಮತಿ ಪಡೆಯಬೇಕು ಎಂದರು.

ವಿದ್ಯುತ್ ಸಂಪರ್ಕಕ್ಕೆ ಸೆಸ್ಕ್‌ನಿಂದ ಅನುಮತಿ ಪಡೆದು, ಅಗ್ನಿಶಾಮಕ ದಳ ಸೂಚಿಸುವ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು. ಮಸೀದಿ ರಸ್ತೆಯಲ್ಲಿ ಗೌರಿ–ಗಣೇಶ ಮೆರವಣಿಗೆಯನ್ನು ಸರ್ಕಾರವೇ ನಿರ್ಬಂಧಿಸಿ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಅಲ್ಲದೇ ಸೆ.5ರಂದು ನಡೆಯುವ ಈದ್ ಮಿಲಾದ್ ಹಬ್ಬದ ದಿನ ಮೆರವಣಿಗೆ ಮಾಡಬಾರದು. ಉತ್ಸವದ ವೇಳೆ ಪೊಲೀಸ್ ಭದ್ರತೆ ಕಡ್ಡಾಯವಾಗಿ ಪಡೆಯಬೇಕು. ಸಾಧ್ಯವಾದಷ್ಟು ಸಂಜೆಯೊಳಗೆ ಗೌರಿ–ಗಣೇಶ ಮೆರವಣಿಗೆ ನಡೆಸುವುದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದು. ಸ್ಥಳೀಯ ಸಂಸ್ಥೆಗಳು ನಿಗದಿತಪಡಿಸಿದ ಸ್ಥಳದಲ್ಲೇ ವಿಸರ್ಜಿಸಬೇಕು. ನದಿ ಅಥವಾ ಕಾಲುವೆಗಳಲ್ಲಿ ಗೌರಿ–ಗಣೇಶನನ್ನು ವಿಸರ್ಜನೆ ಮಾಡುವಾಗ ಮಕ್ಕಳನ್ನು ಯಾವುದೇ ಕಾರಣಕ್ಕೂ ಕರೆದೊಯ್ಯಬಾರದು ಎಂದು ಮನವಿ ಮಾಡಿದರು.



ಗೌರಿ–ಗಣೇಶ, ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ತಾಲೂಕಿನಲ್ಲಿ ಇದುವರೆವಿಗೂ ಗೌರಿ–ಗಣೇಶ ಹಬ್ಬದ ವೇಳೆ ಯಾವುದೇ ಸಂಘರ್ಷವಾಗಿಲ್ಲ. ಹನುಮ ಜಯಂತಿ ವೇಳೆ ಕ್ಷುಲ್ಲಕ ಕಾರಣಕ್ಕೆ ಆದ ಜಗಳ ಕೊಲೆಯಲ್ಲಿ ಅಂತ್ಯವಾಗಿ ರಾಜ್ಯ ಮಟ್ಟದ ವಿವಾದದ ಸ್ವರೂಪ ಪಡೆಯಿತು. ಸಾಮಾಜಿಕ ಜಾಲತಾಣಗಳಲ್ಲಿಯೂ ಕೋಮು ಸಂಘರ್ಷಕ್ಕೆ ಎಡೆ ಮಾಡಿಕೊಡುವ ಸಂದೇಶಗಳ ಬಗ್ಗೆಯೂ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಯಾವುದೇ ಸಂಘರ್ಷಕ್ಕೆ ಕಾರಣವಾಗುವ ಘಟನೆಗಳು ಕಂಡುಬಂದ ಕೂಡಲೇ ಪೊಲೀಸರ ಗಮನಕ್ಕೆ ತರಬೇಕು. ಇಲ್ಲವೇ ಪೊಲೀಸ್ ತುರ್ತು ಕರೆ ಸಂಖ್ಯೆ: 112ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದರು.

ಗೌರಿ–ಗಣೇಶ ಹಬ್ಬ ಹಿಂದೂಗಳ ಪ್ರಮುಖ ಧಾರ್ಮಿಕ ಹಬ್ಬವಾದ್ದರಿಂದ ಕೆಲವು ನಿಯಮಗಳಿಗೆ ವಿನಾಯಿತಿ ನೀಡಿ, ಸಂಭ್ರಮದ ಆಚರಣೆಗೆ ಅವಕಾಶ ಕಲ್ಪಿಸಬೇಕೆಂದು ಬಿಜೆಪಿ ಮುಖಂಡ ಎ.ಎನ್.ರಂಗನಾಯಕ ಮನವಿ ಮಾಡಿದರು.

ಪಪಂ ಮಾಜಿ ಸದಸ್ಯ ಎನ್.ಲೋಕೇಶ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಒಳಗೆ ಹೊರಗೆ ಆಟೋಗಳ ಅಡ್ಡಾದಿಡ್ಡಿ ಸಂಚಾರಕ್ಕೆ ಕಡಿವಾಣ ಹಾಕಬೇಕೆಂದರು. ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರು ಶಾಲಾ ಕಾಲೇಜುಗಳ ಬಳಿ ಮುಖ್ಯ ರಸ್ತೆಗಳಲ್ಲಿ ಹೆಣ್ಣು ಮಕ್ಕಳನ್ನು ಚುಡಾಯಿಸುವ ಪುಂಡರ ಹಾವಳಿ ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕೆಂದರು. ಪ್ರಸಾದ್ ನಾಯಕ ಮಾತನಾಡಿ, ಖಾಸಗಿ ಬಸ್ ನಿಲ್ದಾಣದಿಂದ ತಿರುಮಕೂಡಲು ಕಡೆ ಹೋಗುವ ಬಸ್ಸುಗಳು ನಿಧಾನಗತಿಯಲ್ಲಿ ಸಂಚರಿಸಿ ಸಂಚಾರಿ ಸಮಸ್ಯೆಗಳನ್ನು ತಂದೊಡ್ಡುತ್ತಿರುವುದನ್ನು ತಪ್ಪಿಸಬೇಕೆಂದು ಪೊಲೀಸರಲ್ಲಿ ಮನವಿ ಮಾಡಿದರು. ಅಲ್ಲದೇ ಕಾಲೇಜು, ಲಿಂಕ್ ಹಾಗೂ ಮಾರುಕಟ್ಟೆ ರಸ್ತೆಯಲ್ಲಿ ಪಾದಚಾರಿ ರಸ್ತೆಯನ್ನು ಮತ್ತೆ ರಸ್ತೆಬದಿ ವ್ಯಾಪಾರಿಗಳು ಆಕ್ರಮಿಸಿಕೊಂಡು ಸುಗಮ ಸಂಚಾರ ಹಾಳುಗೆಡವಿರುವ ಬಗ್ಗೆಯೂ ವ್ಯಾಪಕ ದೂರುಗಳು ಕೇಳಿ ಬಂದವು.

ಡ್ರಗ್ಸ್ ದಂಧೆಯನ್ನು ಬೇರು ಸಮೇತ ಕಿತ್ತೊಗೆಯುವೆ

ತಿ.ನರಸೀಪುರ: ಪಟ್ಟಣದಲ್ಲಿ ಬೇರೂರುತ್ತಿರುವ ಡ್ರಗ್ಸ್ ಮಾಫಿಯಾ ಬಗ್ಗೆ ಖಚಿತ, ನಿಖರ ಮಾಹಿತಿಯೊಂದಿಗೆ ಸುಳಿವು ಕೊಟ್ಟರೆ ಡ್ರಗ್ಸ್ ದಂಧೆಯನ್ನು ಬೇರು ಸಮೇತ ಕಿತ್ತೊಗೆಯುವೆ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಗುಡುಗಿದರು.

ಬಿಜೆಪಿ ಮುಖಂಡ ವೆಂಕಟರಮಣಶೆಟ್ಟಿ ಅವರು ಪಟ್ಟಣದ ಆಯ್ದ ಸ್ಥಳಗಳಲ್ಲಿ ಡ್ರಗ್ಸ್ ದಂಧೆ ನಡೆಯುತ್ತಿರುವ ಬಗ್ಗೆ ದೂರಿದ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ ಅವರು, ಅಲ್ಲಂತೆ, ಇಲ್ಲಂತೆ ಅನ್ನುವ ಗಾಳಿ ಸುದ್ದಿ ಬದಲು ನಿರ್ದಿಷ್ಟ ಸ್ಥಳ, ಇಂಥದ್ದೇ ರೂಪದಲ್ಲಿ ಜಾಲ ಇದೆ ಎಂಬುದನ್ನು ತಿಳಿಸಿಕೊಡಬೇಕೆಂದು ಮನವಿ ಮಾಡಿದರು.

ಆಟೋಗಳಿಗೆ ಸೂಕ್ತ ನಿಲ್ದಾಣ ಕಲ್ಪಿಸಿಲ್ಲ. ರಸ್ತೆ ಬದಿ ವ್ಯಾಪಾರಸ್ಥರಿಂದ ಸುಂಕ ವಸೂಲಿ ಮಾಡುತ್ತಿರುವುದರಿಂದ ಪೊಲೀಸರ ಕಠಿಣ ಕ್ರಮಕ್ಕೆ ಸ್ವಲ್ಪಮಟ್ಟಿಗೆ ಹಿನ್ನಡೆಯಾಗಿದೆ. ಕಾಲೇಜುಗಳ ಬಳಿ ವಿದ್ಯಾರ್ಥಿನಿಯರನ್ನು ಚುಡಾಯಿಸುವವರಿಗೆ ಈಗಾಗಲೇ ಬಿಸಿ ಮುಟ್ಟಿಸಿದ್ದೇವೆ. ಪೊಲೀಸ್ ಠಾಣೆಯಲ್ಲಿ 15 ಪೇದೆಗಳು ಮತ್ತು ಮೂವರು ಎಸ್‌ಐಗಳ ಕೊರತೆ ಇದೆ. ಒಟ್ಟಾರೆ ಪಟ್ಟಣದ ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಣಕ್ಕೆ ತರಲು ಪ್ರಮುಖ ಸ್ಥಳಗಳಲ್ಲಿ ಸಿಸಿ ಟಿವಿ ಕ್ಯಾಮರಾಗಳ ಕಣ್ಗಾವಲು ಇಡಲು ಈಗಾಗಲೇ ಯೋಜನೆ ರೂಪಿಸಿ ಪುರಸಭೆ ನೆರವು ಕೋರಿದ್ದೇವೆ. ಉದ್ದೇಶಿತ ಯೋಜನೆ ಕಾರ್ಯಗತಗೊಂಡಲ್ಲಿ ಪೊಲೀಸ್ ಠಾಣೆಯಲ್ಲಿ ಕುಳಿತು ಪಟ್ಟಣದಲ್ಲಿನ ಸಂಚಾರ ಮತ್ತು ಕಾನೂನು ಉಲ್ಲಂಘಿಸುವವರನ್ನು ನಿಯಂತ್ರಿಸುವ ಕೆಲಸವಾಗಲಿದೆ ಎಂದು ಇನ್ಸ್‌ಪೆಕ್ಟರ್ ಧನಂಜಯ ತಿಳಿಸಿದರು.

ಸಭೆಯಲ್ಲಿ ಮುಖ್ಯಪೇದೆ ಸಿದ್ದರಾಜು, ಎಸ್‌ಪಿ ಡ್ಯೂಟಿ ಪೇದೆ ಶಂಕರ್, ಪುರಸಭೆ ಸದಸ್ಯ ಗುರುಸ್ವಾಮಿ, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಶಂಕರ್, ಹಿರಿಯ ಮುಖಂಡ ಬಿ.ಪಿ.ಪರಶಿವಮೂರ್ತಿ, ಯಜಮಾನ್ ಚಂದ್ರೇಗೌಡ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ರಾಜಣ್ಣ, ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಸ್.ಕೆ.ಶಿವಕುಮಾರ್, ದಸಂಸ ಜಿಲ್ಲಾ ಸಂಚಾಲಕ ರಾಜು, ಮರಿಸ್ವಾಮಿ, ಮನೋಜ್ ಕುಮಾರ್, ನಾಗರಾಜ ಮೂರ್ತಿ, ಮಲ್ಲು, ಶ್ರೀನಿವಾಸ್, ಮರಿಸ್ವಾಮಿ, ವೆಂಕಟರಮಣಶೆಟ್ಟಿ ಕೆನಂಜುಂಡಸ್ವಾಮಿ, ಸಿ.ಪುಟ್ಟಯ್ಯ, ಯೋಗೇಶ್, ನಾಗರಾಜಮೂರ್ತಿ, ಮಹದೇವ, ಎಚ್.ಎನ್.ವೀರೇಶ್, ನಿಂಗರಾಜು, ರಾಜೇಂದ್ರ, ಸೋಮ ಇತರರಿದ್ದರು.

ಮಾದೇಗೌಡ ನಿಧನ


ಹೆಚ್.ಡಿ.ಕೋಟೆ, ಆ.25– ತಾಲೂಕಿನ ಹೈರಿಗೆ ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಅಧ್ಯಕ್ಷ ಮಾದೇಗೌಡ (65) ಸೋಮವಾರ ನಿಧನರಾದರು.



ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್.ಶಿವಣ್ಣ

ಕೆ.ಆರ್.ನಗರ, ಆ.25– ಪಟ್ಟಣದ ಪಿಎಲ್‌ಡಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ, ಪುರಸಭೆ 1ನೇ ವಾರ್ಡ್ ಮಧುವನಹಳ್ಳಿ ನಿವಾಸಿ ಎಂ.ಎಸ್.ಶಿವಣ್ಣ ಭಾನುವಾರ ಸಂಜೆ ನಿಧನರಾದರು.



ಮೃತರು ಪತ್ನಿ ಶಾಂತಮ್ಮ, ಓರ್ವ ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚೀರ್ನಹಳ್ಳಿಯಲ್ಲಿರುವ ಮೃತರ ತೋಟದಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇದೇ ವೇಳೆ ಅನೇಕ ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

ಮೈಸೂರಿನಲ್ಲಿ ಅದ್ಧೂರಿ 'ಪರಮೋತ್ಸವ' ಸಮಾರಂಭ

ದಲಿತರು ತಮ್ಮ ಹಕ್ಕು, ಅಧಿಕಾರ ಪಡೆಯಲು ಹೋರಾಟಕ್ಕೆ ಸಿದ್ಧರಾಗಬೇಕು

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕರೆ



ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ಡಾ.ಜಿ.ಪರಮೇಶ್ವರ ಅಭಿಮಾನಿಗಳ ಬಳಗದವರು ಆಯೋಜಿಸಿದ್ದ ಪರಮೋತ್ಸವ ಸಮಾರಂಭದಲ್ಲಿ 74ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಗೃಹ ಸಚಿವ ಡಾ.ಪರಮೇಶ್ವರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಆ.25(ಬಿಎಲ್‌ಯು)– ದಲಿತ ಸಮುದಾಯದವರು ತಮ್ಮ ಹಕ್ಕು ಮತ್ತು ಅಧಿಕಾರ ಪಡೆಯಲು ಹೋರಾಟಕ್ಕೆ ಸಿದ್ಧರಾಗಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕರೆ ನೀಡಿದ್ದಾರೆ.

ದಲಿತರಿಗೆ ಮುಖ್ಯಮಂತ್ರಿ ಹುದ್ದೆ ದೊರೆಯಬೇಕು ಎಂಬ ಕೂಗಿಗೆ ಡಾ.ಪರಮೇಶ್ವರ್ ಅವರು ಮಾರ್ಮಿಕವಾಗಿ ನುಡಿದರು. ಸಮಾನತೆಯ ಹಕ್ಕು ಮತ್ತು ಅಧಿಕಾರ ಪಡೆಯದಿದ್ದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಇಂದು ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗ ಆಯೋಜಿಸಿದ್ದ ತಮ್ಮ 74 ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ದಲಿತರಿಗೆ ಮುಖ್ಯಮಂತ್ರಿ ಹುದ್ದೆ ಸಿಗಬೇಕು ಎಂಬ ಘೋಷವಾಕ್ಯ ಮೊಳಗಿದ ಸಂದರ್ಭ ದಲ್ಲಿ, ದಲಿತ ಸಮುದಾಯದವರು ತಮ್ಮ ಹಕ್ಕು ಮತ್ತು ಅಧಿಕಾರ ಪಡೆಯಲು ಹೋರಾಟಕ್ಕೆ ಸಿದ್ಧರಾಗಿ ಎಂದು ಸೂಚ್ಯವಾಗಿ ಹೇಳಿದರು.

ಸಮಾನತೆ, ಸ್ಥಾನಮಾನ ಪಡೆಯಲು ನಾವು ಇನ್ನೆಷ್ಟು ದಿನ ಕಾಯಬೇಕು ಎಂದು ಪ್ರಶ್ನಿಸಿದ ಡಾ.ಪರಮೇಶ್ವರ್, ಭಾರತ ವಿಶ್ವದಲ್ಲಿ 3 ನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಚಂದ್ರಯಾನ ಕೈಗೊಂಡಿದ್ದೇವೆ, ಬಲಿಷ್ಠ ಮಿಲಿಟರಿ ಪಡೆ ಇದೆ, ಆದರೆ ಎಲ್ಲರೂ ಸಮಾನರು ಎಂಬ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯವಾಗಿಲ್ಲ. ದೇಶದಲ್ಲಿ ಸಮಾನತೆಯ ಬಾಳು ಕಾಣಲು ಸಾಧ್ಯವಾಗದ ಪರಿಸ್ಥಿತಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮ ಸಮಾಜ ನಿರ್ಮಾಣವಾಗಿ ಹೃದಯ ಶ್ರೀಮಂತಿಕೆ ಬಂದಾಗ ಮಾತ್ರ ಭಾರತಕ್ಕೆ ಗೌರವ ಬರುತ್ತದೆ. ಆದರೆ ಸಮಾನತೆಯಿಂದ ಬಾಳ್ವೆ ಮಾಡುವ ಸಮಾಜ ಕಾಣದಿರುವುದು ನೋವಿನ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನನ್ನ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಣೆ ಮಾಡಿದ್ದೀರಾ. ನಿಮ್ಮ ಅಭಿಮಾನಕ್ಕೆ ನಾನು ಆಭಾರಿಯಾಗಿದ್ದೇನೆ. ಅನೇಕ ಅಡೆತಡೆಗಳು ಎದುರಾದರೂ ಅದನ್ನೆಲ್ಲಾ ಎದುರಿಸಿ ಯಶಸ್ವಿಯಾಗಿ ಕಾರ್ಯಕ್ರಮ ಮಾಡಿರುವುದು ನನಗೆ ಸಂತಸವಾಗಿದೆ. ಇಂದಿನ ಈ ಕಾರ್ಯಕ್ರಮವನ್ನು ನಾನು ಎಂದೂ ಮರೆಯುವುದಿಲ್ಲ ಎಂದು ಡಾ.ಪರಮೇಶ್ವರ್ ಹೇಳಿದರು.

ಇದೇ ವೇಳೆ ಪರಮ ಪಯಣ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಶಾಸಕ ತನ್ವೀರ್ ಸೇಠ್, ಸಜ್ಜನ ವ್ಯಕ್ತಿತ್ವ, ನೇರ ನಡೆ ನುಡಿಯ ಜನರು ಕಡಿಮೆಯಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಡಾ.ಪರಮೇಶ್ವರ್ ಅವರು ಸ್ವಚ್ಛ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದಾರೆ. ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಡಾ.ಪರಮೇಶ್ವರ್ ಅವರು ಶಿಕ್ಷಣದ ಮೂಲಕ ಯುವಕರ ಉಜ್ವಲ ಭವಿಷ್ಯ ಕೂಡ ರೂಪಿಸುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಜ್ಜನ ರಾಜಕಾರಣಿ ಡಾ.ಪರಮೇಶ್ವರ್ ಅವರನ್ನು ಉನ್ನತ ಸ್ಥಾನ (ಮುಖ್ಯಮಂತ್ರಿ ಹುದ್ದೆ)ದಲ್ಲಿ ನೋಡಬೇಕೆಂಬುದು ಎಲ್ಲರ ಅಭಿಲಾಷೆಯಾಗಿದೆ. ಈ ಸ್ಥಾನ ಸಿಗಲು ಅವರೊಂದಿಗೆ ನಾವು ಹೆಜ್ಜೆ ಹಾಕುತ್ತೇವೆ ಎಂದು ಹೇಳಿದರು.

ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಶೋಕಪುರಂನ ಶ್ರೀ ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಶಾಸಕರಾದ ಕೆ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕಾರ್ಯಕ್ರಮದ ಆಯೋಜಕ ಬಿಳಿಗೆರೆ ರಾಜು, ನಿವೃತ್ತ ಪ್ರಾಧ್ಯಾಪಕ ಡಾ.ಕೆ.ವಿ.ಅಯ್ಯಣ್ಣ ಮಂಜುನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದರೂ ದಲಿತರಿಗೆ ಸಿಎಂ ಸ್ಥಾನ ಇನ್ನೂ ಸಿಕ್ಕಿಲ್ಲ

ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿರುವ ದಲಿತ ಸಮುದಾಯಕ್ಕೆ ಇನ್ನೂ ಕೂಡ ಮುಖ್ಯಮಂತ್ರಿ ಸ್ಥಾನ ದೊರೆತಿಲ್ಲ. ಈಗಲಾದರೂ ರಾಜಕೀಯ ಪಕ್ಷಗಳ ನೇತಾರರು ನ್ಯಾಯ ದೊರಕಿಸಬೇಕು ಎಂದು ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಲಹೆ ನೀಡಿದರು.

ಒಂದು ಸಮುದಾಯದವರು 9 ಬಾರಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದರೆ, ಮತ್ತೊಂದು ಸಮುದಾಯಕ್ಕೆ 7 ಬಾರಿ ಮುಖ್ಯಮಂತ್ರಿ ಸ್ಥಾನ ದೊರಕಿದೆ. ಇನ್ನೊಂದು ಸಮುದಾಯಕ್ಕೆ 2 ಬಾರಿ ಮುಖ್ಯಮಂತ್ರಿ ಹುದ್ದೆ ದೊರಕಿದೆ. ಸಣ್ಣಪುಟ್ಟ ಸಮುದಾಯಕ್ಕೂ ಸಿಎಂ ಆಗುವ ಯೋಗ ಬಂದಿದೆ. ಆದರೆ ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿರುವ ದಲಿತ ಸಮುದಾಯದವರಿಗೆ ಇನ್ನು ಕೂಡ ಮುಖ್ಯಮಂತ್ರಿ ಆಗುವ ಅವಕಾಶ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶೋಷಿತ ವರ್ಗಕ್ಕೆ ಅಧಿಕಾರ ನೀಡಬೇಕೆಂಬುದು ನಾಡಿನ ಜನರ ಒತ್ತಾಯ. ಇಲ್ಲದಿದ್ದರೆ ಪ್ರಜಾಪ್ರಭುತ್ವದ ಆಶಯಕ್ಕೆ ಕಪ್ಪು ಚುಕ್ಕೆ ಇಟ್ಟಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಡಾ.ಪರಮೇಶ್ವರ್ ಅವರು ಸಂವೇದನಾಶೀಲ ರಾಜಕಾರಣಿಯಾಗಿದ್ದು, ಯಾರೊಂದಿಗೂ ಸಂಘರ್ಷ ಮಾಡಿಕೊಂಡಿಲ್ಲ. ಇಂತಹ ಸಜ್ಜನ ರಾಜಕಾರಣಿಗೆ ಉನ್ನತ ಸ್ಥಾನ ಸಿಗಬೇಕು ಎಂದು ಸ್ವಾಮೀಜಿ ಹೇಳಿದರು.

ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವ ಅಗತ್ಯವಿಲ್ಲ

- ಮೈಸೂರಿನಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ
- ಎಸ್‌ಐಟಿ ಪೊಲೀಸರು ಸಮರ್ಥರಿದ್ದಾರೆ
- ಸರ್ಕಾರ ಯಾವ ಹಸ್ತಕ್ಷೇಪ ಮಾಡುವುದಿಲ್ಲ
- ಚಿನ್ನಯ್ಯನ ಮಂಪರು ಪರೀಕ್ಷೆಗೊಳಪಡಿಸುವುದು ಪೊಲೀಸರ ವಿವೇಚನೆಗೆ
- ಆಕ್ಷೇಪಾರ್ಹ ಹೇಳಿಕೆ ನಿಲ್ಲಿಸಿ, ಎಸ್‌ಐಟಿ ತನಿಖೆಗೆ ಸಹಕಾರ ನೀಡಿ

ಮೈಸೂರು, ಆ.25(ಬಿಎಲ್‌ಯು)– ಧರ್ಮಸ್ಥಳ ವಿರುದ್ಧ ಷಡ್ಯಂತ್ರ ರೂಪಿಸಿರುವ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವ ಅಗತ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವ ಪ್ರಕರಣದಲ್ಲಿ ಅಂತರರಾಜ್ಯ ಮಟ್ಟದಲ್ಲಿ ಹಣದ ವಹಿವಾಟು ನಡೆದಿರುವ ಹಿನ್ನೆಲೆಯಲ್ಲಿ ಎನ್‌ಐಎಗೆ ವಹಿಸಬೇಕು ಎಂಬ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಆಗ್ರಹಕ್ಕೆ ಡಾ.ಪರಮೇಶ್ವರ್ ಸ್ಪಷ್ಟನೆ ನೀಡಿದರು.

ಎಸ್‌ಐಟಿ ತಂಡ ಸಮರ್ಥವಾಗಿ ತನಿಖೆ ಮಾಡುತ್ತಿರುವಾಗ ಎನ್‌ಐಎ ತನಿಖೆಗೆ ವಹಿಸುವ ಅಗತ್ಯವಿಲ್ಲ ಎಂದು ಪುನರ್ ಸ್ಪಷ್ಟನೆ ನೀಡಿದರು.

ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಪ್ರಕರಣದ ಬಗ್ಗೆ ಹೀಗೆ ತನಿಖೆ ಮಾಡಿ, ಹಾಗೆ ತನಿಖೆ ಮಾಡಿ ಎಂದೇಳಲು ನಾವು ಯಾರು ಎಂದು ಪ್ರಶ್ನಿಸಿದ ಡಾ.ಪರಮೇಶ್ವರ್, ತನಿಖೆಗೆ ಏನು ಅವಶ್ಯವೋ ಅದನ್ನು ಎಸ್‌ಐಟಿಯವರು ಮಾಡುತ್ತಾರೆ ಎಂದರು.

ಷಡ್ಯಂತ್ರ ರೂಪಿಸಿದ್ದಾರೆಂಬ ಆರೋಪದ ಮೇಲೆ ಬಂಧಿತನಾಗಿರುವ ಚಿನ್ನಯ್ಯನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕೇ, ಬೇಡವೆ ಎಂಬುದನ್ನು ನಾನು ನಿರ್ಧಾರ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ಎಸ್‌ಐಯವರು ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

ಎಸ್‌ಐಟಿಯವರು ಸಮರ್ಥ ಹಾಗೂ ನ್ಯಾಯಸಮ್ಮತವಾಗಿ ತನಿಖೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಆರೋಪಿ ಚಿನ್ನಯ್ಯನನ್ನು ಮಂಪರು ಪರೀಕ್ಷೆಗೆ ಒಳಪಡಿಸುವುದು ಸೇರಿದಂತೆ ಯಾವುದೇ ತೀರ್ಮಾನ ಕೈಗೊಳ್ಳುವ ವಿವೇಚನಾ ಅಧಿಕಾರವನ್ನು ಸರ್ಕಾರ ಎಸ್‌ಐಟಿಗೆ ನೀಡಿದೆ.

ಸರ್ಕಾರದಲ್ಲಿ ಗೃಹ ಸಚಿವನಾಗಿ ಹಾಗೂ ವಿರೋಧ ಪಕ್ಷದ ನಾಯಕರುಗಳಾಗಿ ನಾವೆಲ್ಲ ಏನೇ ಹೇಳಿಕೆಗಳನ್ನು ನೀಡಿದರೂ ಸತ್ಯಾಂಶ ಹೊರಬರುವುದಿಲ್ಲ. ನಿಷ್ಪಕ್ಷಪಾತ ತನಿಖೆ ಮಾಡಿದರೆ ಮಾತ್ರ ಸತ್ಯ ಬಯಲಾಗುತ್ತಿದೆ. ಈ ಕಾರ್ಯವನ್ನು ಎಸ್‌ಐಟಿ ತಂಡ ಮಾಡುತ್ತಿದೆ. ಈ ಕಾರಣದಿಂದ ಸರ್ಕಾರದಲ್ಲಿರುವ ನಾವಾಗಲೀ ಅಥವಾ ವಿರೋಧ ಪಕ್ಷಗಳ ನಾಯಕರುಗಳಾಗಲೀ ಈ ವಿಚಾರದ ಬಗ್ಗೆ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಸಲಹೆ ನೀಡಿದರು. ಇಂತಿಷ್ಟೇ ಸಮಯದಲ್ಲಿ ತನಿಖೆ ನಡೆಸಿ ವರದಿ ನೀಡಿ ಎಂದು ಎಸ್‌ಐಟಿಗೆ ಕಾಲಮಿತಿ ವಿಧಿಸಲು ಸಾಧ್ಯವಿಲ್ಲ. ಆದರೆ ಶೀಘ್ರವೇ ತನಿಖೆ ಮುಗಿಸಿ ವರದಿ ನೀಡಿ ಎಂದಷ್ಟೆ ಸೂಚಿಸಿದ್ದೇನೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಮಂಜುನಾಥನ ದರ್ಶನಕ್ಕೆ ಹೋಗಿರಬೇಕು: ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವವರನ್ನು ಬಂಧಿಸುವಂತೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಧರ್ಮಸ್ಥಳಕ್ಕೆ ರ್‍ಯಾಲಿ ನಡೆಸುತ್ತಿರುವ ಬಗ್ಗೆ ಡಾ.ಪರಮೇಶ್ವರ್, ಅವರೆಲ್ಲಾ ಮಂಜುನಾಥೇಶ್ವರನ ದರ್ಶನ ಮಾಡಲು ಹೋಗುತ್ತಿರಬೇಕು. ಹೋಗಲಿ ಬಿಡಿ ಎಂದು ಮಾರ್ಮಿಕವಾಗಿ ನುಡಿದರು.

ಮಂಜುನಾಥನ ದರ್ಶನ ಪಡೆಯಲು ಹೋಗುವವರನ್ನು ತಡೆಯಲು ಸಾಧ್ಯವೇ ಎಂದು ಮರು ಪ್ರಶ್ನಿಸಿದ ಡಾ.ಪರಮೇಶ್ವರ್, ಈ ಪ್ರಕರಣದಲ್ಲಿ ಯಾರೂ ಕೂಡ ರಾಜಕೀಯ ಮಾಡಬಾರದು ಎಂದಷ್ಟೆ ನಾನು ಮನವಿ ಮಾಡುತ್ತೇನೆ ಎಂದರು.

ಬಾನು ಮುಷ್ತಾಕ್ ಆಹ್ವಾನಿಸಿರುವುದರಲ್ಲಿ ತಪ್ಪಿಲ್ಲ

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಒಂದು ಜಾತಿ, ಧರ್ಮಕ್ಕೆ ಸೀಮಿತವಲ್ಲ. ಈ ಹಿನ್ನೆಲೆಯಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಗೃಹ ಸಚಿವ ಡಾ.ಪರಮೇಶ್ವರ್ ಅವರು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು. ಮೈಸೂರು ರಾಜರ ಆಳ್ವಿಕೆಯಲ್ಲಿ ಮಿರ್ಜಾ ಇಸ್ಮಾಯಿಲ್ ದಿವಾನರಾಗಿ ದಸರಾ ಮಾಡಲಿಲ್ಲವೇ, ನಿಸಾರ್ ಅಹಮ್ಮದ್ ಅವರು ದಸರಾ ಉದ್ಘಾಟನೆ ಮಾಡಲಿಲ್ಲವೇ ಎಂದು ಪ್ರಶ್ನಿಸಿದ ಡಾ.ಪರಮೇಶ್ವರ್, ಒಂದು ಸಮುದಾಯವನ್ನು ಹೊರಗಿಟ್ಟು ದಸರಾ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಬಗ್ಗೆ ತಕರಾರು ಎತ್ತುವುದು ಸರಿಯಲ್ಲ. ಚಾಮುಂಡೇಶ್ವರಿಯನ್ನು ನಂಬುವುದು, ಬಿಡುವುದು ಅವರಿಗೆ ಸೇರಿದ ವಿಚಾರ. ಈಗ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಸರ್ಕಾರ ಕ್ರಮ ಸಂದರ್ಭೋಚಿತ ಎಂದರು. ದಸರಾ ಊರ ಹಬ್ಬವಾಗಿದ್ದು, ಊರಿನ ಎಲ್ಲಾ ಜಾತಿ, ಸಮುದಾಯದವರು ಸೇರಿ ಇದನ್ನು ಆಚರಣೆ ಮಾಡಬೇಕು ಎಂದು ಡಾ.ಪರಮೇಶ್ವರ್ ಸಲಹೆಯಿತ್ತರು.

ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ

ಡಿ.ಕೆ.ಶಿ ಕ್ಷಮೆ ಯಾಚಿಸಲು ಬಿ.ಕೆ. ಹರಿಪ್ರಸಾದ್ ಆಗ್ರಹ



ಬೆಂಗಳೂರು, ಆ.25(ಕೆಎಂಶಿ)–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಹುದ್ದೆ ವ್ಯಾಪ್ತಿಯಡಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿದ್ದರೆ ಕ್ಷಮೆ ಕೇಳಬೇಕು ಎಂದು ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಆಗ್ರಹಿಸಿದ್ದಾರೆ.

ವಿಧಾನಸಭೆಯಲ್ಲಿ ಶಿವಕುಮಾರ್ ಆರ್‌ಎಸ್‌ಎಸ್ ಗೀತೆ ಹಾಡಿದ್ದನ್ನು ಬಿಜೆಪಿ ಸಮರ್ಥಿಸಿಕೊಳ್ಳುತ್ತಿದೆ. ಉಪಮುಖ್ಯಮಂತ್ರಿಯಾಗಿ ಪ್ರಾರ್ಥನೆ ಮಾಡಿದ್ದರೆ ನಮ್ಮದೇನು ಅಭ್ಯಂತರವಿಲ್ಲ. ಏಕೆಂದರೆ ಸರ್ಕಾರ ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದಲ್ಲ, ಕರ್ನಾಟಕ 7 ಕೋಟಿ ಜನತೆಯ ಸರ್ಕಾರ, ರಾಜ್ಯದಲ್ಲಿ ಆರ್‌ಎಸ್‌ಎಸ್, ಜಮಾಅತ್ ಇಸ್ಲಾಮಿ ಸೇರಿದಂತೆ ಎಲ್ಲ ವರ್ಗದ ಜನ ಇದ್ದಾರೆ, ತಾಲಿಬಾನಿಗಳೂ ಇದ್ದಾರೆ ಎಂದು ಹರಿಪ್ರಸಾದ್ ಹೇಳಿದ್ದಾರೆ.

ಆರ್‌ಎಸ್‌ಎಸ್ ಮಹಾತ್ಮ ಗಾಂಧಿ ಕೊಂದಂತಹ ಸಂಘಟನೆ. ಮೂರು ಬಾರಿ ನಿಷೇಧಕ್ಕೆ ಒಳಗಾಗಿದೆ. ಆದ್ದರಿಂದ ಕಾಂಗ್ರೆಸ್ ಅಧ್ಯಕ್ಷರಾಗಿ ಸಂಘದ ಪ್ರಾರ್ಥನೆ ಮಾಡುವುದು ಸರಿಯಲ್ಲ ಎಂದರು. ಶಿವಕುಮಾರ್‌ಗೆ ಹಲವು ಮುಖಗಳಿವೆ. ತಾವು ಕೃಷಿಕರು, ಕ್ವಾರಿ ಮಾಲೀಕ, ಎಜುಕೇಷನಿಸ್ಟ್, ಉದ್ಯಮಿ ಎಂದೆಲ್ಲಾ ಹೇಳಿಕೊಳ್ಳುತ್ತಾರೆ, ಯಾರಿಗೆ ಏನು ಸಂದೇಶ ಕೊಡಬೇಕೆಂದಿದ್ದಾರೆ, ಯಾರನ್ನು ಮೆಚ್ಚಿಸುತ್ತಿದ್ದಾರೆ ಎಂಬುದು ಗೊತ್ತಿಲ್ಲ ಎಂದರು.

ರಸ್ತೆ, ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ, ಜಾನುವಾರು ಬಿಡದಂತೆ ಎಚ್ಚರಿಕೆ


ಮೈಸೂರು,ಆ.25– ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬಿಡಾಡಿ ಹಂದಿ ಹಾಗೂ ದನ–ಕರುಗಳನ್ನು ಸಾಕುತ್ತಿರುವ ಸಾಕಾಣಿದಾರರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಮೈಸೂರು ನಗರದ ರಸ್ತೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ ಹಾಗೂ ಬಿಡಾಡಿ ದನ–ಕರುಗಳನ್ನು ಬಿಡುವುದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ತುಂಬಾ ಅಡಚಣೆ ಆಗುತ್ತಿದ್ದು, ಹಲವು ಬಾರಿ ವಾಹನ ಸವಾರರು ಮಾರಣಾಂತಿಕ ಅಪಘಾತಕ್ಕೆ ಈಡಾಗಿರುವುದು ಕಂಡು ಬಂದಿರುತ್ತದೆ.

ಬಿಡಾಡಿ ಹಂದಿ ಹಾಗೂ ಬಿಡಾಡಿ ದನ–ಕರುಗಳು ಕಸದ ತೊಟ್ಟಿಗಳಲ್ಲಿ ಆಹಾರ ಸೇವಿಸುವುದಕ್ಕಾಗಿ ತೊಟ್ಟಿಯಲ್ಲಿರುವ ಕಸವನ್ನೆಲ್ಲ ಚೆಲ್ಲಾಡುವುದರಿಂದ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ಈಗಾಗಲೇ ಮೌಖಿಕವಾಗಿ ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಸಹ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ ಹಾಗೂ ದನ–ಕರು ಬಿಡುತ್ತಿರುವುದು ಕಂಡು ಬಂದಿರುತ್ತದೆ.

ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿದ್ದು, ನಗರದ ಜನತೆಯ ಆರೋಗ್ಯ ಹಿತದೃಷ್ಟಿಯಿಂದ ಹಾಗೂ ಸ್ವಚ್ಛತೆ ನಿರ್ವಹಣೆಗಾಗಿ ಇನ್ನು ಮುಂದೆ ಬಿಡಾಡಿ ಹಂದಿ ಮತ್ತು ಬಿಡಾಡಿ ದನ–ಕರು ಸಾಕಾಣಿಕೆದಾರರು ಮೈಸೂರು ನಗರದ ರಸ್ತೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ ಹಾಗೂ ಬಿಡಾಡಿ ದನ–ಕರು ಬಿಡಬಾರದೆಂದು ಈ ಮೂಲಕ ಎಚ್ಚರಿಸಲಾಗಿದ್ದು, ಅದರಂತೆ ನಗರಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ ಹಾಗೂ ಬಿಡಾಡಿ ದನ–ಕರು ಅಡ್ಡಾಡುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವ ಉದ್ಯಮಿಗಳು ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಮಾಹಿತಿ ಹೊಂದುವುದು ಅತ್ಯವಶ್ಯಕ

ಸಿಡಾಕ್ ಜಂಟಿ ನಿರ್ದೇಶಕ ಮಧು ಸಲಹೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜೀವನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಉದ್ಯಮಶೀಲತಾ ತಿಳುವಳಿಕೆ ಶಿಬಿರ'ವನ್ನು ಸಿಡಾಕ್ ಜಂಟಿ ನಿರ್ದೇಶಕ ಮಧು ಉದ್ಘಾಟಿಸಿದರು.

ಮೈಸೂರು,ಆ.25(ಎಂಟಿವೈ)– ಹೊಸದಾಗಿ ಉದ್ಯಮ ಸ್ಥಾಪನೆ ಮಾಡಲು ಬಯಸುವವರು ಪೂರ್ವ ಸಿದ್ಧತೆ ಮಾಡಿಕೊಂಡು, ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಇರುವಿಕೆ ಬಗ್ಗೆ ಮಾಹಿತಿ ಪಡೆದುಕೊಳ್ಳುವಂತೆ ಸಿಡಾಕ್ ಜಂಟಿ ನಿರ್ದೇಶಕ ಮಧು ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜೀವನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಉದ್ಯಮಶೀಲತಾ ತಿಳುವಳಿಕೆ ಶಿಬಿರ' ಉದ್ಘಾಟಿಸಿ ಮಾತನಾಡಿದ ಅವರು, ಹೊಸದಾಗಿ ಉದ್ಯಮಿಗಳಾಗ ಬಯಸುವವರಿಗೆ ಅನೇಕ ಸವಾಲುಗಳಿರುತ್ತವೆ. ಉದ್ಯಮಿದಾರರಿಗೆ ಯಾವುದೇ ಸರ್ಕಾರವಿದ್ದರೂ ಬೆಂಬಲ ಸಿಗುವುದಿಲ್ಲ. ಆ ಕಾರಣದಿಂದ ಉದ್ಯಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ತಾವೇ ಮಾರುಕಟ್ಟೆ ಕಂಡುಕೊಳ್ಳಬೇಕು. ಉದ್ಯಮ ಸ್ಥಾಪನೆಗೆ ಬೇಕಾದ ಯಂತ್ರೋಪಕರಣಗಳು ಖರೀದಿಸಲು ಸಾಧ್ಯವಾಗದೇ ಇದ್ದರೆ, ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯುವ ಸೌಲಭ್ಯವೂ ಇದೆ. ಅದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಉದ್ಯಮ ಸ್ಥಾಪನೆ ಮಾಡುವಾಗ ಮಾರುಕಟ್ಟೆ ವ್ಯವಸ್ಥೆ ಇರುವಿಕೆ ಬಗ್ಗೆ ಪರಿಶೀಲಿಸಿಕೊಳ್ಳಬೇಕು. ಉದ್ಯಮ ಎನ್ನುವುದು ಆರ್ಥಿಕ ಚಟುವಟಿಕೆ. ಅದರಲ್ಲಿ ಬಂಡವಾಳ ಹಾಕಿ, ಬಂಡವಾಳ ತೆಗೆಯುವ ಪ್ರಕ್ರಿಯೆ. ಲಾಭ ಗಳಿಸುವ ಬಗ್ಗೆ ಆಲೋಚನೆ ಮಾಡಬೇಕು. ಉದ್ಯಮ ಸ್ಥಾಪನೆ ಮಾಡಿ ಓಡಾಡಿಕೊಂಡು ಇದ್ದರೆ ಸಾಲದು. ಕಚ್ಚಾ ವಸ್ತು ಎಲ್ಲಿ ಸಿಗುತ್ತದೆ. ಅದನ್ನು ಯಾರು ಸರಬರಾಜು ಮಾಡುತ್ತಾರೆ ಎನ್ನುವುದನ್ನು ಉದ್ಯಮ ಸ್ಥಾಪನೆಗೂ ಮುನ್ನವೇ ತಿಳಿದುಕೊಂಡಿರಬೇಕು. ಆಗ ಮಾತ್ರ ಉದ್ಯಮವನ್ನು ಯಶಸ್ವಿಯಾಗಿ ಮುನ್ನಡೆಸಬಹುದು ಎಂದು ಅಭಿಪ್ರಾಯಪಟ್ಟರು.

ಜೀವನ್ ಟ್ರಸ್ಟ್ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್ ಮಾತನಾಡಿ, ಆಹಾರ ಸಂಸ್ಕರಣೆ ಯೋಜನೆಯಡಿ ಐದು ವರ್ಷ ಆರಂಭವಾದ ಉದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯ ಉದ್ಯಮಿಗಳು ಮುಂದೆ ಬಂದಿಲ್ಲ. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಐದು ವರ್ಷದಲ್ಲಿ ಕೇವಲ 132 ಮಂದಿ ಮಾತ್ರ ಉದ್ಯಮ ಸ್ಥಾಪನೆ ಮಾಡಿದ್ದಾರೆ. ಎಲ್ಲೆಡೆ ನಿರುದ್ಯೋಗ ಸಮಸ್ಯೆ, ಬಡತನ ಸೇರಿದಂತೆ ಸಾಕಷ್ಟು ಸಮಸ್ಯೆಗಳಿದ್ದರೂ ಉದ್ಯಮ ಕ್ಷೇತ್ರಕ್ಕೆ ಹೊಸ ಉದ್ಯಮಿಗಳು ಬರದೇ ಇರುವುದು ವಿಷಾದನೀಯ ಎಂದರು.

ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಉದ್ಯಮ ಸ್ಥಾಪನೆಗೆ ಮುಂದೆ ಬರದೇ ಇರುವುದಕ್ಕೆ ಅರಿವಿನ ಕೊರತೆ ಹಾಗೂ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯದ ಮಾಹಿತಿ ಇಲ್ಲದೇ ಇರುವುದು ಕಾರಣ. ಆರ್ಥಿಕವಾಗಿ ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಉದ್ಯಮ ಸ್ಥಾಪನೆಗೆ ಮುಂದಾಗಬೇಕು. ಗುಣಮಟ್ಟದ ಉತ್ಪನ್ನ ತಯಾರಿಸಿದರೆ ಟ್ರಸ್ಟ್ ಮಾರುಕಟ್ಟೆ ಒದಗಿಸುತ್ತದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ವಸಂತ್‌ಕುಮಾರ್ ಮೈಸೂರ್ ಮಠ್, ಜೀವನ್ ಟ್ರಸ್ಟ್ ಮುಖ್ಯ ಸಲಹೆಗಾರ ಬಿ.ಎನ್.ಸತೀಶ್, ಪ್ರಧಾನ ಸಲಹೆಗಾರ ಕುಮಾರಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ಬಳಿಕ ಆಹಾರ ಸಂಸ್ಕರಣೆ ಮತ್ತು ಮಾರುಕಟ್ಟೆ, ಮೌಲ್ಯವರ್ಧನೆ, ಪಿಎಂಎಫ್‌ಎಂಇ ಯೋಜನೆಯ ಉಪಯೋಗ ಕುರಿತಂತೆ ವಿಚಾರಗೋಷ್ಠಿ ಜರುಗಿದವು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಇಂದ್ರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಾರ್–2 (ತೆ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಹಚ್ಚೆ (ಕ) + ವಾರ್–2 (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಜಸ್ಟ್ ಮ್ಯಾರಿಡ್ (ಕ) + ಕಮರೊ2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಷ್ಟ್ರೀಯ ಟೆನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾಗೆ ಟ್ರೋಫಿ



ತೆಲಂಗಾಣದ ಶಮೀರ್‌ಪೇಟೆಯ ಆಶ್ ಟೆನಿಸ್ ಅಕಾಡೆಮಿಯಲ್ಲಿ ನಡೆದ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಪಡೆದ ಪದ್ಮಪ್ರಿಯಾ ರಮೇಶ್ ಕುಮಾರ್.

ಮೈಸೂರು, ಆ.25(ಎಂಟಿವೈ)– ತೆಲಂಗಾಣದ ಶಮೀರ್‌ಪೇಟೆಯ ಆಶ್ ಟೆನಿಸ್ ಅಕಾಡೆಮಿಯಲ್ಲಿ ಎಐಟಿಎ 14 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಟೆನಿಸ್ ಪಟು ಪದ್ಮಪ್ರಿಯಾ ರಮೇಶ್ ಕುಮಾರ್ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಪದ್ಮಪ್ರಿಯಾ ರಮೇಶ್ ಕುಮಾರ್ ಎದುರಾಳಿ ಪರಿಣಿತಾ ವಟ್ಟಪ್ರಾಂಬಿಲ್ ಅವರನ್ನು 6–2: 6–1 ಅಂತರದಲ್ಲಿ ಸೋಲಿಸಿ, ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಬಳಿಕ ನಡೆದ ಡಬಲ್ಸ್ ಪಂದ್ಯಾವಳಿ ಫೈನಲ್ ಪಂದ್ಯದಲ್ಲಿ, ಪದ್ಮಪ್ರಿಯಾ ರಮೇಶ್ ಕುಮಾರ್ ಹಾಗೂ ಪರಿಣಿತಾ ವಟ್ಟಪ್ರಾಂಬಿಲ್ ಜೋಡಿ ಉತ್ತಮ ಪ್ರದರ್ಶನ ನೀಡಿ ರನ್ನರ್ಸ್–ಅಪ್ ಟ್ರೋಫಿಯನ್ನು ಗೆದ್ದರು.

ಪದ್ಮಪ್ರಿಯಾ ದೇಶ ಹಾಗೂ ವಿದೇಶದಲ್ಲಿ ನಡೆದ 14ವರ್ಷದೊಳಗಿನ ಟೆನ್ನಿಸ್ ಪಂದ್ಯಾವಳಿಯಲ್ಲಿ ಸತತ ಪ್ರಶಸ್ತಿ ಮುಡಿಗೇರಿಸಿಕೊಳ್ಳುತ್ತಿದ್ದು, ಇದೀಗ ಸಿಂಗಲ್ಸ್ ವಿಭಾಗದ ಚಾಂಪಿಯನ್ ಆಗಿದ್ದಾರೆ. ಇದರಿಂದ ಫಿಲಿಪೈನ್ಸ್‌ನ ಮನಿಲಾದಲ್ಲಿ ಸೆ.16 ರಿಂದ 20ರವರೆಗೆ ನಡೆಯುವ ಗ್ರ್ಯಾಂಡ್‌ಸ್ಲ್ಯಾಮ್ ಆಟಗಾರರ ಡೆವಲಪ್‌ಮೆಂಟ್ ಪ್ರೋಗ್ರಾಮ್ (ಜಿಎಸ್ ಪಿಡಿಪಿ) ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಪದ್ಮಪ್ರಿಯಾ ಅರ್ಹತೆ ಪಡೆದಿದ್ದಾರೆ. ಆ ಪಂದ್ಯಾವಳಿಯಲ್ಲಿ ಗೆದ್ದರೆ, ಅವರು ಗ್ರ್ಯಾಂಡ್‌ಸ್ಲ್ಯಾಮ್ಸ್‌ಗೆ ಆಯ್ಕೆಯಾಗಲಿದ್ದಾರೆ.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯಾ ಹುಲಿ ಯೋಜನೆ ಸಿಎಫ್ ಡಾ.ಪಿ.ರಮೇಶ್‌ಕುಮಾರ್ ಹಾಗೂ ವರ್ಕಿಂಗ್ ಪ್ಲಾನ್ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿದ್ದು, ಈಕೆಗೆ ತರಬೇತುದಾರರಾಗಿ ರಘುವೀರ್ ಪೊನ್ನುಸ್ವಾಮಿ, ಪವನ್ ತರಬೇತಿ ನೀಡುತ್ತಿದ್ದಾರೆ.

ಆ.29 ರಂದು ಸ್ವಾತಿ ನಕ್ಷತ್ರ ಪೂಜೆ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.29 ರಂದು ಸ್ವಾತಿ ನಕ್ಷತ್ರ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ತಿಳಿಸಿದ್ದಾರೆ. ಅಂದು ಬೆಳಗ್ಗೆ 8 ಗಂಟೆಗೆ ಅಭಿಷೇಕ ಪ್ರಾರಂಭವಾಗಲಿದ್ದು, ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿತರಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಪಿ.ಆರ್. ಹ್ಯುಂಡಾಯ್

ಗೌರಿ–ಗಣೇಶ ಹಬ್ಬದ ಶುಭಾಶಯಗಳು

ಹೊಸ ಹ್ಯುಂಡಾಯ್ ಕಾರ್ ಜೊತೆ ಈ ಹಬ್ಬವನ್ನು ಆಚರಿಸಿ

KPR HYUNDAI 10 YEARS SINCE - 2015 DELIVERING MILES OF HAPPINESS



ಬನ್ನಿಮಂಟಪ	ಹಿನ್‌ಕಲ್	ಚನ್ನರಾಯಪಟ್ಟಣ	ಕೊಳ್ಳೇಗಾಲ	ಹುಣಸೂರು	ಸಕಲೇಶಪುರ	ಹೆಚ್–ಪ್ರಾಮಿಸ್ (ಯೂಸ್ಡ್ ಕಾರ್ಸ್)
ಸೇಲ್ಸ್ : 9538879248 ಸರ್ವೀಸ್ : 9538879253	ಸೇಲ್ಸ್ : 9538879299 ಸರ್ವೀಸ್ : 9035854055	ಸೇಲ್ಸ್ : 9538879238 ಸರ್ವೀಸ್ : 9538879290	ಸೇಲ್ಸ್ : 9606478215 ಸರ್ವೀಸ್ : 9538879277	ಸೇಲ್ಸ್ : 9538879235 ಸರ್ವೀಸ್ : 9538879288	ಸೇಲ್ಸ್ : 9035708716 ಸರ್ವೀಸ್ : 9538889674	9538879233

KPR HYUNDAI
Delivering Miles of Happiness
HYUNDAI

15ನೇ ವರ್ಷದ ಪುಣ್ಯಸ್ಮರಣೆ



ಎಂ. ಸಿಂಚನ

ಜನನ: 31.08.2004 ಮರಣ: 26.08.2010

ನೀನು ನಮ್ಮನ್ನಗಲಿ ಇಂದಿಗೆ 15 ವರ್ಷವಾದರೂ ಸದಾ ನಿನ್ನ ಸವಿನೆನಪಿನಲ್ಲಿರುವ

ದುಃಖತಪ್ತರು: ತಂದೆ–ಸಿ. ಮಹೇಶ್‌ಗೌಡ
ತಾಯಿ– ಎಂ.ಎನ್. ಪವಿತ್ರ, ಅಕ್ಕ–ಎಂ. ಸಂಜನ
ಅಜ್ಜಿ, ಅತ್ತೆ, ಮಾವಂದಿರು ಹಾಗೂ ಕುಟುಂಬವರ್ಗ



ಪುಣ್ಯಸ್ಮರಣೆ



ಶ್ರೀಮತಿ ಮಂಗಳಮ್ಮ

ನೀವು ನಮ್ಮನ್ನಗಲಿ 1 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿದೆ.

ದುಃಖತಪ್ತರು:
ಪತಿ ಲಿಂಗೇಗೌಡ ಉ–ದೊಡ್ಡಣ್ಣ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು

RAMRAJ COTTON
JOB OPPORTUNITY
(Retail / Garments)

We are searching for Retail Talents for our showroom at **KALIDASA ROAD**

Manager / Asst. Manager
Relevant Exp. in Apparel Retail Brand

Sales Talent Executive
Fresher can also apply (Age:19-40 Yrs)

Please bring resume, photo, Aadhar Card, Educational & Experience Certificate

70265 07395
Email: narthancadabam@yahoo.co.in

G9 projects *Designing your Dreams* — Vee2 Developers

MUDA APPROVED
e - Khata Ready
VAISHNAVI LAYOUT
RT NAGAR ENTRANCE
30×40 30×50

HERITAGE CITY
NEAR NEW MYSURU NANJANGUD HIGHWAY
OWN 20x30 site
PAY ₹ 2 LAKHS ONLY
Rest With Installments
8088-707-707



ಹಸಿರು ನಮ್ಮ ಉಸಿರು

ಬೇಕಾಗಿದ್ದಾರೆ

ಲಕ್ಷ್ಮೀಪುರಂನಲ್ಲಿ 2 ವರ್ಷದ ಮಗುವನ್ನು ದಿನದ 24 ಗಂಟೆ ನೋಡಿಕೊಳ್ಳಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ

9632866616

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: chamulmm@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಕುದೇರು ಇವರ ಪರವಾಗಿ ವಿವಿಧ ಸರಕು/ಸೇವೆಗಳನ್ನು ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ಟೆಂಡರ್‌ನ್ನು ವ್ಯವಸ್ಥಾಪಕ ನಿರ್ದೇಶಕರು ಇವರ ಪರವಾಗಿ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪ್ಲಾಟ್‌ಫಾರಂ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರಸಂ	ಸರಕು/ಸೇವೆಗಳ ವಿವರ	ಟೆಂಡರ್/ಐ.ಎಫ್.ಟಿ ಸಂಖ್ಯೆ
01	ಚಾಮುಲ್ ವ್ಯಾಪ್ತಿಯಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ ಮಾಡಲು ವಾಹನವನ್ನು ಒದಗಿಸುವ ಬಗ್ಗೆ.	KMF/2025-26/ SE3802
02	ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ ಹಾಲಿನ ಪುಡಿ ವಿತರಣೆ ಮಾಡಲು ವಾಹನವನ್ನು ಒದಗಿಸುವ ಬಗ್ಗೆ.	KMF/2025-26/ SE3803

ಅ	ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	26.08.2025 ರಿಂದ 25.09.2025 ಸಂಜೆ 05:00 ಗಂಟೆವರೆಗೆ
ಆ	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	25.09.2025 ಸಂಜೆ 05:00 ಗಂಟೆವರೆಗೆ
ಇ	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	26.09.2025 ಸಂಜೆ 05:05 ಗಂಟೆವರೆಗೆ
ಈ	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪ ವ್ಯವಸ್ಥಾಪಕರು(ಮಾ)ಮೊ.ಸಂ: 96067 00123 ಹಾಗೂ ಸಹಾಯಕ ವ್ಯವಸ್ಥಾಪಕರು(ಮಾ)ಮೊ.ಸಂ: 96065 77888 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

INNOVATIVE MATHEMATICAL SCIENCE INSTITUTE

imsc INSTITUTE
IIT JEE / BITS / NEET / KCET / Foundation Courses (8th, 9th & 10th)
BGS - IMSC INSTITUTE
Join us and take the first step towards achieving your goals..
imscinstitute.in

Bus facilities available across Mysore city



	ANUBHAV CHATTERJEE	TANMAY MANTRI	NANDAKISHAN K.M	HONNU D. BOMBORE
JEE MAINS %ile	99.8514129	99.7785697	98.4928662	96.8661150
KCET RANK	122	220	557	3557

NIT SURATHKAL, CS — BITS PILANI, RAJASTHAN,CS — Scholarship for Meritorious Students

Hostel facilities available



	SACHIN S. SHASTRI	SAMHITA G. KIRAN	INIKA R. PRASAD	ANANTHAVISHNU P. BHAT
JEE MAINS %ile	95.7235958	94.5912269	94.5253006	92.6258248
KCET RANK	934	3536	931	1537

CONTACT: 9741233654/6362093068/8095622484
BGS - IMSC Institute, BGS PU College, Kuvempunagar, Mysore 570023

WANTED TEACHERS

COMPUTER, EVS, HINDI & ENGLISH
Qualified fluency in English is needed.

Contact:
Jnana Gangothri Convent
Rajendra Nagara, Mysore - 570007
Call : 91139 80741

ಶ್ರೀ ಸಂಜೀವಿನಿ ಗೋಲ್ಡ್

ನೀವು ಗಿರಿವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 9400(24CT)

9108146123

ತುರ್ತಾಗಿ ಕೆಲಸಕ್ಕೆ ಬೇಕಾಗಿದ್ದಾರೆ

ಕನ್ನಡ ಮತ್ತು ಇಂಗ್ಲೀಷ್ ಡಿಟಿಪಿ ಟೈಪಿಂಗ್ ಅನುಭವವುಳ್ಳ ಮಹಿಳೆಯರು ಕಂಪ್ಯೂಟರ್ ಸಂಪೂರ್ಣ ಜ್ಞಾನವುಳ್ಳವರು ನೋಟರಿ ಕಛೇರಿ ಕೆಲಸಕ್ಕೆ ಬೇಕಾಗಿರುತ್ತಾರೆ.

9901369901, 0821-3501513

ಗಾಯಿತ್ರಿ ಟಾಕೀಸ್ UFO Digital A/C
ಗೌರಿ ಗಣೇಶ ಹಬ್ಬದ ಶುಭಾಶಯಗಳು
ಯಶಸ್ವಿ ಪ್ರದರ್ಶನ 2ನೇ ವಾರ



ಸಮಯ: 10.15, 1.45, 5.15, 8.45

SITE FOR SALE

MUDA, 40X60, POLICE LAYOUT, WEST FACING, EXCELLENT LOCATION, CLOSE TO 80 FT ROAD, GENUINE BUYERS ONLY, BROKERS EXCUSE, 1.18 CRS,

8971495997

SITE FOR SALE

30X40, WEST FACING, MUDA APPROVED, SOMANATHNAGAR, FULLY DEVELOPED AREA NEAR ADITYA CIRCLE, 88 LACS, NEGOTIABLE, CHEQUE PAYMENT ONLY, BROKERS NOT ENTERTAINED

8971495997

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈಅಪ್ರಾ/ವ.ಕ–4/202/2025–26 ದಿ: 11.08.2025

ಪತ್ರಿಕಾ ಪ್ರಕಟಣೆ

ಶ್ರೀ ರಾಚಯ್ಯ ಬಿನ್ ಶ್ರೀ ಮರಿಯಪ್ಪ ರವರಿಗೆ ಮೈಸೂರು ನಗರದ ಹೆಬ್ಬಾಳು 3ನೇ ಹಂತ ಬಡಾವಣೆಯ ಎಲ್.ಐ.ಜಿ–2 ಮನೆ ಸಂಖ್ಯೆ: 304 ಅಳತೆ 8.00 x 5.00 ಮೀ ನಿವೇಶನವು ಪ್ರಾಧಿಕಾರದಿಂದ ದಿನಾಂಕ:22.08.1988 ರಂದು ಮಂಜೂರಾಗಿರುತ್ತದೆ. ದಿ: 12.08.1993 ರಂದು ಗುತ್ತಿಗೆ ಕರಾರು ಪತ್ರ ಪಡೆದು ನೊಂದಾಯಿಸಿ, ದಿ: 07.12.1993 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ಹಾಗೂ ದಿ: 28.03.2003 ರಂದು ದೃಢೀಕರಣ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ ರಾಚಯ್ಯ ರವರು ದಿನಾಂಕ: 30.05.2006 ರಂದು ಮರಣ ಹೊಂದಿರುವ ಬಗ್ಗೆ ಮೈಸೂರು ಮಹಾನಗರಪಾಲಿಕೆ ಮೈಸೂರು ಮರಣ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಹಾಗೂ ಉಪ ತಹಶೀಲ್ದಾರ್ ಕಸಬಾ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರು ನೀಡಿರುವ ವಂಶವೃಕ್ಷದ RD5018882839038 ದಿನಾಂಕ: 05.06.2024 ರಂದು ನೀಡಿರುವ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಶ್ರೀ ರಾಚಯ್ಯ ರವರ ಪತ್ನಿ ಶ್ರೀಮತಿ ನಂಜಮ್ಮ ಹಾಗೂ ಇವರ ಮಗನಾದ ಶ್ರೀ ಸಿದ್ದರಾಜು. ಆರ್ ರವರು ಶ್ರೀ ಬಸವರಾಜು ರವರಿಗೆ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ ಎಂವೈಎಸ್–1–02169–2025 ಆಗಿ ದಿನಾಂಕ: 12.06.2025ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರ ನೀಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ.

ಶ್ರೀ ಬಸವರಾಜು ರವರು ಪೌತಿ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ಜಂಟಿ ಪೌತಿ ವರ್ಗಾವಣೆ ಮಾಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–4
ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮೈಸೂರು

13ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:
ತಾಯಿ–ಗಿರಿಜಾ
ಅಣ್ಣ–ಆನಂದ
ಅಕ್ಕ–ಭಾವ, ಪೂರ್ಣಿಮಾ ರಾಧಾಕೃಷ್ಣ ಮತ್ತು ಶ್ರೀದೇವಿ ಮಲ್ಲಿಕಾರ್ಜುನ್

ಸೆಂಥಿಲ್ ಕುಮಾರ್ ಎನ್.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

PUBLIC NOTICE

NOTICE is hereby given that, my client **Mrs. Sabina Marina Dafne Leo** W/o: Mr. Balaraj Rayappa. R/at: # 828 1st Main Road, KR puram, Hasan, Karnataka-573201 has intended to purchase the schedule property belonging to Mrs.Narmada Nikkam, W/o. Late.Shivaji Rao Nikkam, R/at: # 25, Mahajana High School Road, 3rd Block, Jayalakshmipuram, Mysore.

Any persons claiming right, title or interest in the schedule property or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise how-so-ever are hereby required to make the same known to the undersigned at his office within 7 days from the date hereof, failing which, the said transactions will be completed, without any reference to such claim and the same, if any shall be considered as waived.

SCHEDULE PROPERTY : All that piece and parcel of the site bearing No.120, measuring East to West 67½ Feet and North to South 90 feet in-total measuring 6030 Square feet, situated at 10th Main Road, behind Jayaregowda Park, Saraswathipuram, Chamaraja Mohalla, Mysore and bounded by: East by : Site No.113, West by : Road, North by : Road, South by : Site No.119.

Sd/- Mr. ABHINANDAN. H, Advocate
990, First Floor, 'E' & 'F' Block, Panchamanthra Road, Kuvempunagar, Mysuru-570023. Phone No.9964426903
E-Mail: advabhinandan@gmail.com
Date: 25-08-2025

ಜಮೀನು ಮಾರಾಟಕ್ಕೆ ಇದೆ

ಕುಶಾಲನಗರದ ಬಳಿ ಇರುವ ಬೈಲುಕೊಪ್ಪದಲ್ಲಿ 5 ಎಕರೆ 17 ಗುಂಟೆ ಜಮೀನು ಮಾರಾಟಕ್ಕೆ ಇದೆ. ಆಸಕ್ತಿ ಉಳ್ಳವರು ಕರೆ ಮಾಡಿ. ಕಮಿಷನ್ ಅನ್ವಯವಾಗುತ್ತದೆ.

ಸಂಪರ್ಕಿಸಿ: **9900846129**

DESIGNED TO MAKE EVERY SPACE BEAUTIFUL

2 BHK
HOME INTERIORS @ ₹2.9 LAKHS

HOME SPACE MART
Kushalnagar • Mysuru • Bengaluru
For Site Vist :
@ 91089 23123

ನಿಧನ



ಬಿ. ನಾಗರತ್ನ ಸಿಂಗ್

ಪ್ರಧಾನ ಸಂಪಾದಕರು,
ಚೇತಕ್ ವಾಹಿನಿ ಮಾಸಿಕ ಪತ್ರಿಕೆ
ನಿಧನ : ದಿ: 25–8–2025

ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆ ಮೊಮ್ಮಕ್ಕಳು, ಕುಟುಂಬ ಮತ್ತು ಬಂಧುಮಿತ್ರರು
ಅಂತ್ಯಕ್ರಿಯೆ: ದಿ:26/8/2025 ಮಂಗಳವಾರ ಎನ್.ಆರ್.ಮೊಹಲ್ಲಾ ರುದ್ರಭೂಮಿ ಮಧ್ಯಾಹ್ನ 2 ಗಂಟೆಗೆ
ಮೊ: 9880568636

ಲಾರಿ ಡ್ರೈವರ್ - 3 Nos

ಬೇಕಾಗಿದ್ದಾರೆ

ಕಾವೇರಿ ಕಾಂಕ್ರೀಟ್ ಪ್ರೋಡಕ್ಟ್ಸ್ – ಚಿಲ್ಕುಂದ

ಮೈಸೂರು ಮಡಿಕೇರಿ ಮುಖ್ಯರಸ್ತೆ, ಹುಣಸೂರು ತಾಲೂಕು - 571 113

ಸುತ್ತ ಮುತ್ತ ಇರುವ ಊರುಗಳಿಗೆ ಮಾತ್ರ ಸಾಗಾಣಿಕೆ
ಭತ್ಯ ಸೇರಿ ತಿಂಗಳಿಗೆ ಸಂಬಳ : ರೂ. 25,000/-

ಉಚಿತ ವಸತಿ ಸೌಕರ್ಯ, ಫ್ಯಾಮಿಲಿ ಕ್ವಾರ್ಟರ್ಸ್, ಬೇಕಿದ್ದರೆ ಲಭ್ಯವಿದೆ.

Call: 96862 44144 / 94490 04191

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/37 ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್‌ಎಸ್‌ಇ/ಇ/ಮೈಸೂರು ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) (ಒಂದು ವರ್ಷದ ಅವಧಿಗೆ)	ರೂ. 18,59,999.35

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/38 ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್‌ಎಸ್‌ಇ/ಇ/ಶಿವಮೊಗ್ಗ ಟೌನ್ ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) (ಒಂದು ವರ್ಷದ ಅವಧಿಗೆ)	ರೂ. 18,59,999.81

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/39 ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್‌ಎಸ್‌ಇ/ಇ/ದಾವಣಗೆರೆ ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) (ಒಂದು ವರ್ಷದ ಅವಧಿಗೆ)	ರೂ. 18,59,999.89

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/40 ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್‌ಎಸ್‌ಇ/ಇ/ಅರಸೀಕೆರೆ ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) (ಒಂದು ವರ್ಷದ ಅವಧಿಗೆ)	ರೂ. 18,59,999.35

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/41 ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಜೆಇ/ಇ/ಚಿಕ್ಕಜಾಜೂರು ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) (ಒಂದು ವರ್ಷದ ಅವಧಿಗೆ)	ರೂ. 9,30,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಸಾಮಾನ್ಯ
ಪಿಯುಬಿ/400/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26 ಮೈಸೂರು

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR SWRRLY @SWRAILWAYHQ @sw_railways

HEMATOLOGIST IN MYSORE
BLOOD DISORDER CLINIC

Dr. Mahesh Rajashekariah
MBBS, MD (Internal Medicine), DM (Clinical Hematology)
MRCP (UK), Fellowsip in BMT & Leukemia (Vancouver)

Head & Chief Consultant Hematologist &
Bone Marrow Transplant Physician
Sparsh Hospital Bangalore

Date : 28th August 2025, Thursday
Time : 4 pm to 8 pm
For Appointments Call 99162 80590

If you are experiencing the following problems, you may need specific treatment.

- Anemias, Polycythemias, **Low and high platelet count,** Low and high white cell count. **Leukemia,** Lymphoma, Multiple myeloma, **Bleeding and clotting disorders,** Bone marrow disorders, **Immunodeficiency disorders.**
- All hematological problems in **"Children"** like anemia (including thalasemia)
- All hematological problems in **"pregnancy and women"** like recurrent pregnancy loss

High Eosinophil Count Screening — Low Platelet Count Screening

Estd.: 1983
Bhagavan Pathology Laboratory
1116, 5th Cross, Srirampet, Mysore - 1. Tel : 0821-2424488

DREAM WORLD TRAVELS Mysore

Dubai 5 Nights 6 Days
(Only 8 Seats Available)

PACKAGE COST: Per Person **Rs.86,000/-** Incl Tax GROUP PACKAGE



DEPARTURE DATE Sept 18th 2025

For More Details Contact :
994 5242 427

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.

ನಂ. 105, 'ಕ್ಷೇಮಧಾಮ', ಎಲ್ ಐ ಸಿ ಕಾಲೋನಿ,
ಶ್ರೀರಾಂಪುರ 2ನೇ ಹಂತ, ಮೈಸೂರು –570034. ಫೋ: 0821–2362369

ಎಲ್ಲಾ ಸದಸ್ಯರ ಗಮನಕ್ಕೆ

ಮೇಲ್ಕಂಡ ನಮ್ಮ ಸಂಘದ 2024–25 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: **31-08-2025** ರ ಭಾನುವಾರದಂದು ನಮ್ಮ ಸ್ವಂತ ಕಛೇರಿಯಾದ ಕ್ಷೇಮಧಾಮ ಸಭಾಭವನದಲ್ಲಿ ಬೆಳಗ್ಗೆ 10.30 ಗಂಟೆಗೆ ಏರ್ಪಡಿಸಿದ್ದು, ಈ ಸಂಬಂಧ ತಿಳುವಳಿಕೆ ಪತ್ರಗಳನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮುಖಾಂತರ ಕಳುಹಿಸಿದ್ದೇವೆ. ಯಾರಿಗಾದರೂ ತಲುಪದಿದ್ದಲ್ಲಿ ಈ ತಿಳುವಳಿಕೆ ಮೇರೆಗೆ ಮಹಾಸಭೆಗೆ ಬರಬೇಕೆಂದು ಕೋರುತ್ತೇವೆ. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸುವುದು.

ದಿನಾಂಕ: 24–08–2025 ಎನ್ ಎಲ್ ಶೇಖರ್
ಸ್ಥಳ: ಮೈಸೂರು ಅಧ್ಯಕ್ಷರು

OPPORTUNITY FOR HOSPITALS / ENTREPRENEURS

Looking for a Business house or Hospital or Individual or a Group of like minded people to either take over management or out right take over, of a well running hospital with excellent infrastructure in the heart of Mysore city.

Hospital has built up area of about 10,000 sqft., in land area of about approximate 5700 sq feet.,

Also there is a scope for expansion with large piece of land elsewhere in Mysore city.

Parties, who are keen can send their interest along with details about them, professional background, financial status, background, experience in health care domain and or in other fields, etc., to: **venkat19341942@gmail.com** for enquiring further details of the proposal.